ಮಂಗಳವಾರ, ಮಾರ್ಚ್ 24, 2026 | ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ರಾಮ ವೈಭವ..
ಹೈದರಾಬಾದ್‌ನಲ್ಲಿ ರಾಮನವಮಿ ಹಬ್ಬಕ್ಕೂ ಮುನ್ನ ಶ್ರೀರಾಮನ ಮೂರ್ತಿಗೆ ಸೋಮವಾರ ಅಂತಿಮ ರೂಪ ನೀಡಿದ ಕಲಾವಿದ



ಅರುಂಧತಿಗೆ ಗೌರವ
ಆಸ್ಟ್ರೇಲಿಯಾ ವಿರುದ್ಧ ಟಿ20 ಸರಣಿಯಲ್ಲಿ ಉತ್ತಮ ಬೌಲಿಂಗ್ ಪ್ರದರ್ಶಿಸಿದ್ದ ಭಾರತದ ಮಧ್ಯಮ ವೇಗಿ ಅರುಂಧತಿ ರೆಡ್ಡಿ ಅವರು ಐಸಿಸಿ ಫೆಬ್ರುವರಿ ತಿಂಗಳ ಆಟಗಾರ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ

‘ಕಣ್ಣೀರು ಒರೆಸಲಷ್ಟೇ ಸಹಾಯಧನ ಬಳಸಿ’

ಸಹಾಯಧನ, ಗ್ಯಾರಂಟಿಗೆ ಬಜೆಟ್‌ನ ಶೇ 14ರಷ್ಟು ಹಣ ಬಳಕೆ: ಬಿಜೆಪಿಯ ವಿ.ಸುನಿಲ್‌ಕುಮಾರ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಬಜೆಟ್‌ನ ಶೇಕಡ 14ರಷ್ಟು ಮೊತ್ತ ಸಹಾಯಧನ ಮತ್ತು ಗ್ಯಾರಂಟಿಗಳಿಗೆ ಬಳಕೆಯಾಗುತ್ತಿದೆ. ಈ ಹಣ ಬಡವರ ಕಣ್ಣೀರು ಒರೆಸಲು ಬಳಸಬೇಕೇ ಹೊರತು, ಚುನಾವಣೆ ಗೆಲ್ಲುವ ಸಾಧನವಾಗಬಾರದು. ಎಲ್ಲ ಪಕ್ಷಗಳೂ ಈ ಬಗ್ಗೆ ಮರುಪರಿಶೀಲನೆ ನಡೆಸಬೇಕು’ ಎಂದು ಬಿಜೆಪಿಯ ವಿ.ಸುನಿಲ್‌ಕುಮಾರ್ ಮನವಿ ಮಾಡಿದರು.

ವಿಧಾನಸಭೆಯಲ್ಲಿ ಸೋಮವಾರ ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಗ್ಯಾರಂಟಿ ಅಥವಾ ಸಹಾಯಧನಗಳಿಗೆ ನನ್ನ ವಿರೋಧವಿಲ್ಲ. ಆದರೆ, ಅವುಗಳನ್ನು ಯಾವುದಕ್ಕೆ ಬಳಸಲಾಗುತ್ತಿದೆ ಮತ್ತು ಯಾರಿಗೆ ತಲುಪುತ್ತಿವೆ ಎಂಬ ವಿವೇಕ, ವಿವೇಚನೆ ಇರಬೇಕು. ಇಲ್ಲವಾದರೆ ರಾಜ್ಯದ ಆರ್ಥಿಕ ಸ್ಥಿತಿಯ ಮೇಲೆ ಗಂಭೀರ ಪರಿಣಾಮ ಬೀರಬಹುದು’ ಎಂದರು.

‘ಕತ್ತಲಿನ ದಾರಿಯಲ್ಲಾದರೂ ನಡೆಯಬಹುದು. ಆದರೆ, ಕನಸುಗಳಿಲ್ಲದ ದಾರಿಯಲ್ಲಿ ನಡೆಯಲು ಸಾಧ್ಯವಿಲ್ಲ ಎಂಬ ಮಾತುಗಳನ್ನು ನಾಟಕಕಾರ ಗಿರೀಶ್ ಕಾರ್ನಾಡ ಅವರು ‘ಯಯಾತಿ’ ನಾಟಕದಲ್ಲಿ ಬರೆದಿದ್ದಾರೆ. ರಾಜ್ಯ ಸರ್ಕಾರ ಕನಸುಗಳಿಲ್ಲದ ದಾರಿಯಲ್ಲಿ ಜನರನ್ನು ಮುನ್ನಡೆಸುತ್ತಿದೆ. ಇದರಿಂದ ಭವಿಷ್ಯವೂ ಮಸುಕಾಗಿದೆ’ ಎಂದರು.


‘ರಾಜ್ಯದಲ್ಲಿ ನೀವು ಗ್ಯಾರಂಟಿ ಮತ್ತು ಸಹಾಯಧನ ಸಂಸ್ಕೃತಿಯನ್ನು ಬೆಳೆಸಲು ಹೊರಟಿದ್ದೀರಿ. ನಿಜಕ್ಕೂ ಸಮಾಜದ ಕಟ್ಟಕಡೆಯ ಮತ್ತು ನೈಜ ಫಲಾನುಭವಿಗಳಿಗೆ ಈ ಸೌಲಭ್ಯಗಳು ತಲುಪಬೇಕು. ಆದರೆ, ಬೇಕಾಬಿಟ್ಟಿ ಎಲ್ಲರಿಗೂ ಹಂಚಲಾಗುತ್ತಿದೆ. ಈ ರೀತಿ ಉಚಿತಗಳನ್ನು ನೀಡುವ ಬಗ್ಗೆ ಸುಪ್ರೀಂ ಕೋರ್ಟ್ ಕೂಡ ಆಕ್ಷೇಪ ವ್ಯಕ್ತಪಡಿಸಿದೆ’ ಎಂದರು.

ಈ ಬಾರಿಯೂ ಎಸ್‌ಸಿಎಸ್‌ಪಿ–ಟಿಎಸ್‌ಪಿಯ ₹14 ಸಾವಿರ ಕೋಟಿಯನ್ನು ಗ್ಯಾರಂಟಿಗಳಿಗೆ ವರ್ಗಾಯಿಸಿರುವ ಕುರಿತು ‘ಪ್ರಜಾವಾಣಿ’ ವರದಿಯನ್ನು ಪ್ರಸ್ತಾಪಿಸಿದ ಸುನಿಲ್, ‘ಇದು ಸರಿಯಲ್ಲ ಎಂದು ಈ ಸಮುದಾಯಕ್ಕೆ ಸೇರಿದ 6–7 ಸಚಿವರು ಸರ್ಕಾರಕ್ಕೆ ಹೇಳುತ್ತಿಲ್ಲ. ಇವರು ಬೆನ್ನು ತೋರಿಸಿ ಓಡುತ್ತಿದ್ದಾರೆ’ ಎಂದರು.

ಆಗ ಮಧ್ಯಪ್ರವೇಶಿಸಿ ಮಾತನಾಡಿದ ಬಿಜೆಪಿಯ ಎಸ್.ಸುರೇಶ್‌ಕುಮಾರ್ ಅವರು, ‘ಗ್ಯಾರಂಟಿಗಳ ಪರಿಣಾಮ ಏನಾಗಿದೆ ಎಂಬುದನ್ನು ಹಿಮಾಚಲ ಪ್ರದೇಶವನ್ನು ನೋಡಿ ಕಲಿತುಕೊಳ್ಳಬೇಕು. ಅಲ್ಲಿ ಹಿರಿಯ ಅಧಿಕಾರಿಗಳ ಸಂಬಳದಲ್ಲಿ ಶೇ 40ರಷ್ಟು, ಸಚಿವರ ಸಂಬಳದಲ್ಲಿ ಶೇ 30 ಮತ್ತು ಶಾಸಕರ ಸಂಬಳದಲ್ಲಿ ಶೇ 20ರಷ್ಟು ಕಡಿತ ಮಾಡಲಾಗಿದೆ. ಆರು ತಿಂಗಳಿಗೊಮ್ಮೆ ಸಂಬಳ ನೀಡಲಾಗುತ್ತಿದೆ’ ಎಂದು ಹೇಳಿದರು.


ವಿಧಾನಸಭೆಯಲ್ಲಿ ವಿ.ಸುನಿಲ್‌ಕುಮಾರ್ ಮಾತನಾಡಿದರು

ಸಹಾಯಧನ ತುಚ್ಛೀಕರಿಸಬೇಡಿ: ಕೃಷ್ಣ ಬೈರೇಗೌಡ


ಕೃಷ್ಣ ಬೈರೇಗೌಡ

‘ಸಮಾಜದಲ್ಲಿ ತೀರಾ ಕೆಳ ಹಂತದಲ್ಲಿರುವ ಬಡ ಜನರಿಗೆ ನೀಡುವ ಸಹಾಯಧನವನ್ನು ತುಚ್ಛಗೊಳಿಸುವ, ಅಪರಾಧೀಕರಿಸುವ ಕೃತ್ಯವನ್ನು ನಿಲ್ಲಿಸಬೇಕು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಮನವಿ ಮಾಡಿದರು.

‘ಬಡವರಿಗೆ ನೀಡುವ ಸಹಾಯಧನವನ್ನು ಭಾರತದಂತೆ ಬೇರೆ ದೇಶದಲ್ಲೂ ತುಚ್ಛವಾಗಿ ಕಾಣಲಾಗುತ್ತದೆ. ಆದರೆ ಕಳೆದ 150 ವರ್ಷಗಳ ಆರ್ಥಿಕ ಹಿಂಜರಿತ ಚಿಂತನೆಗಳ ಕಡೆಗೆ ಗಮನಹರಿಸಿದರೆ, ದೇಶವೊಂದು ಆರ್ಥಿಕ ಹಿಂಜರಿತದಿಂದ ಪ್ರಗತಿಪಥದತ್ತ ಮುನ್ನಡೆಸಲು ಬಡವರಿಗೆ ಸಹಾಯಧನ ನೀಡುವ ಮೂಲಕ ಬೇಡಿಕೆಯ ವಲಯವನ್ನು ಬಲಪಡಿಸುವುದೊಂದೇ ಪರಿಹಾರವಾಗಿ ಕಂಡುಬಂದಿದೆ’ ಎಂದು ವ್ಯಾಖ್ಯಾನಿಸಿದರು.

‘ಒಬ್ಬ ವ್ಯಕ್ತಿಯ ಕೈಗೆ ಒಂದು ರೂಪಾಯಿ ಕೊಟ್ಟರೆ ಆ ಹಣ ಮಾರುಕಟ್ಟೆಯಲ್ಲಿ ಕನಿಷ್ಠ ಐದು ಬಾರಿ ಮರು ಚಲಾವಣೆ ಆಗುತ್ತದೆ. ಈ ಮೂಲಕ ಐದರಷ್ಟು ಆರ್ಥಿಕತೆಯನ್ನು ಸೃಷ್ಟಿಸುತ್ತದೆ. ಬೇಡಿಕೆ ಜಾಸ್ತಿ ಆದಾಗ ಉತ್ಪಾದನಾ ವಲಯಕ್ಕೂ ಅನುಕೂಲವಾಗುತ್ತದೆ. ಉತ್ಪಾದನಾ ವಲಯವನ್ನು ಬಲಪಡಿಸಿ ಬೇಡಿಕೆ ಇಲ್ಲದೇ ಹೋದರೆ ಆರ್ಥಿಕ ಅಭಿವೃದ್ಧಿಯೂ ಕುಂಠಿತಗೊಳ್ಳುತ್ತದೆ. ಬೇಡಿಕೆ ಇಲ್ಲದೇ ಹೂಡಿಕೆ ಹೇಗೆ ಸಾಧ್ಯ’ ಎಂದು ಅವರು ಪ್ರಶ್ನಿಸಿದರು.

‘ಕರ್ನಾಟಕ ರಾಜ್ಯ ತಲಾ ಆದಾಯದಲ್ಲಿ ಹಾಗೂ ಜಿಎಸ್‌ಟಿ ತೆರಿಗೆ ಸಂಗ್ರಹದಲ್ಲಿ ದೇಶದಲ್ಲೇ ಮೊದಲ ಸ್ಥಾನದಲ್ಲಿರಲು ಸಹಾಯಧನಗಳೇ ಕಾರಣ. ಕೇಂದ್ರ ಸರ್ಕಾರ ಇತ್ತೀಚೆಗೆ ಜಿಎಸ್‌ಟಿ ತೆರಿಗೆಯನ್ನು ಸರಳೀಕರಣಗೊಳಿಸಿದಾಗ ಇತರೆ ಎಲ್ಲ ರಾಜ್ಯಗಳಿಗೂ ಹೋಲಿಸಿದರೆ ರಾಜ್ಯದಲ್ಲಿ ಜಿಎಸ್‌ಟಿ ತೆರಿಗೆ ಸಂಗ್ರಹದಲ್ಲಿ ಕೊರತೆ ಆಗಿಲ್ಲ. ಗ್ಯಾರಂಟಿ ಯೋಜನೆಗಳು ಅಷ್ಟರ ಮಟ್ಟಿಗೆ ಆರ್ಥಿಕ ಅಭಿವೃದ್ಧಿಗೆ ಸಹಕಾರಿಯಾಗಿವೆ’ ಎಂದರು.

> ರಾಜ್ಯದ ಜಿಎಸ್‌ಟಿ ಬೆಳವಣಿಗೆ ದರ, ತಲಾ ಆದಾಯ ಇತರ ರಾಜ್ಯಗಳಿಗಿಂತ ಹೆಚ್ಚು ಎಂದು ಕಂದಾಯ ಸಚಿವರು ಹೇಳಿದ್ದಾರೆ. ಬೆಂಗಳೂರು ಬಿಟ್ಟು ಬೇರೆ ನಗರಗಳಲ್ಲಿ ಇದೇ ಬೆಳವಣಿಗೆ ದರ, ತಲಾದಾಯ ಇದೆಯೇ ಎಂಬುದನ್ನೂ ಹೇಳಲಿ
>
> **ಆರ್. ಅಶೋಕ,** ವಿರೋಧ ಪಕ್ಷದ ನಾಯಕ

ಸುದ್ದಿ 2 ನಿಮಿಷ

‘ಆಯ್ದ ಗುತ್ತಿಗೆದಾರರ ಬಿಲ್ ಪಾವತಿ’


ಬೆಂಗಳೂರು: ಎತ್ತಿನಹೊಳೆ ಕಾಮಗಾರಿಯಲ್ಲಿ ಆಯ್ದ ದೊಡ್ಡ ಗುತ್ತಿಗೆದಾರರಿಗೆ ಮಾತ್ರ ಬಿಲ್ ಪಾವತಿ ಮಾಡಲಾಗಿದೆ. ಸಣ್ಣ ಗುತ್ತಿಗೆದಾರರಿಗೆ ಬಿಲ್ ಪಾವತಿ ಆಗಿಲ್ಲ. ಇದರಿಂದ ಅವರು ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿ ಉದ್ಭವಿಸಿದೆ ಎಂದು ಜೆಡಿಎಸ್‌ನ ಎಚ್.ಡಿ.ರೇವಣ್ಣ ಹೇಳಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ‘ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರು ಸಣ್ಣ ಗುತ್ತಿಗೆದಾರರಿಗೆ ಸ್ಪಂದಿಸಿ ಬಿಲ್ ಪಾವತಿಸಬೇಕು’ ಎಂದರು.

ಎತ್ತಿನಹೊಳೆ ಕಾಮಗಾರಿಗೆ ವರ್ಷಕ್ಕೆ ₹900 ಕೋಟಿ ಇಟ್ಟರೆ ಹತ್ತು ವರ್ಷ ಆದರೂ ಯೋಜನೆ ಪೂರ್ಣಗೊಳ್ಳುವ ಸಾಧ್ಯತೆ ಇಲ್ಲ. ಆದ್ದರಿಂದ ವರ್ಷಕ್ಕೆ ₹5,000 ಕೋಟಿ ಇಟ್ಟು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಒತ್ತಾಯಿಸಿದರು.

ಪಾಪದ ಕೆಲಸ ಮಾಡಿಲ್ಲ: ‘ದೇವೇಗೌಡರ ಕುಟುಂಬ ಯಾವುದೇ ಪಾಪದ ಕೆಲಸ ಮಾಡಲಿಲ್ಲ. ಆದರೆ, ಈ ಕುಟುಂಬದ ವಿರುದ್ಧ ಸಂಚು ರೂಪಿಸಲಾಯಿತು. 2028ರ ವಿಧಾನಸಭಾ ಚುನಾವಣೆಯಲ್ಲಿ ನಮ್ಮ ಶಕ್ತಿ ಏನೆಂದು ತೋರಿಸುತ್ತೇವೆ’ ಎಂದು ಹೇಳಿದರು.

‘ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ರಾಜಕೀಯ ದ್ವೇಷ ಹೆಚ್ಚಾಗಿದೆ. ವಿರೋಧ ಪಕ್ಷಗಳನ್ನು ದಮನ ಮಾಡುವ ಕೆಲಸ ನಡೆಯುತ್ತಿದೆ. ಮುಂದಿನ ಸರ್ಕಾರಗಳು ಯಾವ ರೀತಿ ಆಡಳಿತ ಮಾಡಬೇಕು ಎಂಬುದನ್ನು ನೀವೇ ತೋರಿಸಿಕೊಟ್ಟಿದ್ದೀರಿ’ ಎಂದು ರೇವಣ್ಣ ಕಿಡಿಕಾರಿದರು.



‘ಹೇಗಾದರೂ ಮಾಡಿ ರೇವಣ್ಣನನ್ನು ಮುಗಿಸಬೇಕು ಅಂತ ಪ್ರಯತ್ನ ನಡೆದಿದೆ. ನನ್ನ ಮೇಲೆ ಇನ್ನೂ 10 ಕೇಸ್ ಹಾಕಲಿ, ಅದನ್ನು ಎದುರಿಸಲು ಸಿದ್ಧನಿದ್ದೇನೆ. ನನ್ನನ್ನು ಮುಗಿಸಲು ಸಾಧ್ಯವಿಲ್ಲ, ಮುಗಿಸಿದರೆ ಜನರೇ ಮುಗಿಸಬೇಕು’ ಎಂದು ಹೇಳಿದರು.

ಮಾಜಿ ದೇವದಾಸಿಯರಿಗೆ 90 ಸಾವಿರ ಮೊಮ್ಮಕ್ಕಳು

ಬೆಂಗಳೂರು: ಮಾಜಿ ದೇವದಾಸಿ ಮಹಿಳೆಯರ ಕುಟುಂಬಕ್ಕೆ ಸೇರಿದ 3ನೇ ತಲೆಮಾರಿನ 90 ಸಾವಿರ ಮಕ್ಕಳನ್ನು ಗುರುತಿಸಲಾಗಿದೆ. ಈಗಲೂ ಪದ್ಧತಿಗೆ ಒಳಪಡಿಸಲಾಗುತ್ತಿದೆ ಎಂಬ ಆರೋಪಗಳಿದ್ದು, ಅಂಥವರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಿಜೆಪಿಯ ಹೇಮಲತಾ ನಾಯಕ್ ಅವರ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡಿದ ಅವರು, ‘ದೇವದಾಸಿ ಪದ್ಧತಿಗೆ ನೂಕಲ್ಪಟ್ಟಿದ್ದವರಲ್ಲಿ 18,234 ಮಹಿಳೆಯರು ಮೃತಪಟ್ಟಿದ್ದಾರೆ. ಈಗಿರುವ 23,395 ಮಾಜಿ ದೇವದಾಸಿಯರ ಕುಟುಂಬಗಳಿಗೆ ಸರ್ಕಾರ ನೆರವಾಗುತ್ತಿದೆ. ಮಾಜಿ ದೇವದಾಸಿಯರು ಹಾಗೂ ಅವರ ಮಕ್ಕಳಿಗಾಗಿ ವಿಶೇಷ ಪ್ಯಾಕೇಜ್ ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. ಬಜೆಟ್‌ನಲ್ಲೂ ಅಗತ್ಯ ಅನುದಾನ ಮೀಸಲಿಡಲಾಗಿದೆ’ ಎಂದು ಮಾಹಿತಿ ನೀಡಿದರು.

45 ವರ್ಷ ಮೇಲ್ಪಟ್ಟ ಮಾಜಿ ದೇವದಾಸಿ ಮಹಿಳೆಯರಿಗೆ ಪಿಂಚಣಿ ನೀಡಲಾಗುತ್ತಿದೆ. ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ₹30,000ದಿಂದ ₹50,000 ಪ್ರೋತ್ಸಾಹ ಧನ ನೀಡಲಾಗಿದೆ. ರಾಜೀವ್ ಗಾಂಧಿ ವಸತಿ ನಿಗಮದಿಂದ 10,725 ಮಹಿಳೆಯರಿಗೆ ವಸತಿ ಸೌಲಭ್ಯ ಕಲ್ಪಿಸಲಾಗಿದೆ. ಅವರ ಕುಟುಂಬದ ಮಕ್ಕಳ ಶಿಕ್ಷಣ, ಆರೋಗ್ಯ ಸೇರಿ ಹಲವು ಸೌಲಭ್ಯ ನೀಡಲಾಗಿದೆ ಎಂದರು.

ಸಾಧನಾ ಸಮಾವೇಶ, ಪ್ರಚಾರಕ್ಕೆ ₹147 ಕೋಟಿ • ಬ್ಯಾರಿಕೇಡ್ ನಿರ್ಮಾಣಕ್ಕೆ ₹223 ಕೋಟಿ

₹14,767 ಕೋಟಿ ಪೂರಕ ಅಂದಾಜು ಮಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ನೀರಾವರಿ ಕಾಮಗಾರಿಗಳ ಬಿಲ್‌ಗಳ ಪಾವತಿಗೆ ₹1,025.48 ಕೋಟಿ, ಸರ್ಕಾರದ ಎರಡನೇ ವರ್ಷದ ಸಾಧನಾ ಸಮಾವೇಶ ಮತ್ತು ಪ್ರಚಾರಕ್ಕಾಗಿ ₹147 ಕೋಟಿ, ಕಾಡಾನೆ– ಮಾನವ ಸಂಘರ್ಷ ತಡೆಗಾಗಿ ರೈಲ್ವೆ ಬ್ಯಾರಿಕೇಡ್ ನಿರ್ಮಾಣಕ್ಕೆ ಹೆಚ್ಚುವರಿಯಾಗಿ ₹223 ಕೋಟಿ ಸೇರಿ ವಿವಿಧ ಬೇಡಿಕೆಗಳಿಗೆ ₹14,767.89 ಕೋಟಿ ಮೊತ್ತದ ಮೂರನೇ ಮತ್ತು ಅಂತಿಮ ಕಂತಿನ ಪೂರಕ ಅಂದಾಜನ್ನು ವಿಧಾನ ಸಭೆಯಲ್ಲಿ ಸೋಮವಾರ ಮಂಡನೆ ಮಾಡಲಾಯಿತು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪರವಾಗಿ ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರು ಪೂರಕ ಅಂದಾಜು ಮಂಡಿಸಿದರು.

ಮಾಜಿ ಪ್ರಧಾನಿಗೆ ₹1.25 ಕೋಟಿ ವಾಹನ

ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರಿಗೆ ವೋಲ್ವೊ ಎಕ್ಸ್‌ಸಿ90 ವಾಹನ ಖರೀದಿಸಲು ₹1.25 ಕೋಟಿ ಮೊತ್ತವನ್ನು ಪೂರಕ ಅಂದಾಜಿನಲ್ಲಿ ಒದಗಿಸಲಾಗಿದೆ. ವಿವಿಧ ದೇವಸ್ಥಾನ, ಮಠ, ಟ್ರಸ್ಟ್‌ಗಳ ಅಭಿವೃದ್ಧಿಗೆ ಹೆಚ್ಚುವರಿಯಾಗಿ ₹15 ಕೋಟಿ, ಬ್ರಾಹ್ಮಣ ಅಭಿವೃದ್ಧಿ ಮಂಡಳಿ ಮತ್ತು ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮಕ್ಕೆ ಹೆಚ್ಚುವರಿಯಾಗಿ ತಲಾ ₹5 ಕೋಟಿ ಹಂಚಿಕೆ ಮಾಡಲಾಗಿದೆ.

ಪ್ರಮುಖ ಅಂಶಗಳು

- ರಾಜ್ಯಪಾಲರು, ಮುಖ್ಯಮಂತ್ರಿ, ಸಚಿವರು ಮತ್ತು ಇತರೆ ಗಣ್ಯ ವ್ಯಕ್ತಿಗಳ ಪ್ರವಾಸಕ್ಕೆ ಹೆಲಿಕಾಪ್ಟರ್ ಮತ್ತು ವಿಮಾನದ ಬಿಲ್ಲುಗಳ ಪಾವತಿಗೆ ಹೆಚ್ಚುವರಿಯಾಗಿ ₹15 ಕೋಟಿ
- 2019 ಮತ್ತು 2021ರ ವಿಧಾನಸಭಾ ಉಪ ಚುನಾವಣೆಗಳ ಬಾಕಿ ಬಿಲ್ಲುಗಳ ಪಾವತಿ ಮತ್ತು ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನ ಸಭಾ ಉಪ ಚುನಾವಣೆಗಳಿಗೆ ಹೆಚ್ಚುವರಿಯಾಗಿ ₹5.55 ಕೋಟಿ
- ಮಾನವ– ಕಾಡಾನೆ ಸಂಘರ್ಷ ತಡೆಗಾಗಿ ರೈಲ್ವೆ ಬ್ಯಾರಿಕೇಡ್‌ಗೆ ₹223 ಕೋಟಿ ಮತ್ತು ಮಾದಪ್ಪನಹಳ್ಳಿ ಪ್ರದೇಶದಲ್ಲಿ ನವೀನ ಮಾದರಿಯ ವೃಕ್ಷೋದ್ಯಾನ ಅಭಿವೃದ್ಧಿಪಡಿಸಲು ಹೆಚ್ಚುವರಿಯಾಗಿ ₹20 ಕೋಟಿ
- ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಶುಲ್ಕ ಮರುಪಾವತಿಗಾಗಿ ಹೆಚ್ಚುವರಿಯಾಗಿ ₹110 ಕೋಟಿ
- ಸರ್ಕಾರದ ಎರಡು ವರ್ಷಗಳ ಸಾಧನೆಗಳ ಪ್ರಚಾರದ ವೆಚ್ಚ ಪಾವತಿಸಲು ಹೆಚ್ಚುವರಿಯಾಗಿ ₹131 ಕೋಟಿ ಮತ್ತು ಹಾವೇರಿ, ಹಾಸನ, ವಿಜಯನಗರ ಜಿಲ್ಲೆಗಳಲ್ಲಿ ನಡೆದ ಫಲಾನುಭವಿಗಳ ಸಮಾವೇಶಕ್ಕಾಗಿ ಆದ ವೆಚ್ಚದ ಬಾಕಿ ಬಿಲ್ಲು ಪಾವತಿಸಲು ಹೆಚ್ಚುವರಿಯಾಗಿ ₹16 ಕೋಟಿ
- ಸುಪ್ರೀಂ ಕೋರ್ಟ್ ವಕೀಲ ಕಪಿಲ್ ಸಿಬಲ್ ರಾಜ್ಯ ಸರ್ಕಾರದ ಪರವಾಗಿ ಎರಡು ಪ್ರಕರಣಗಳಲ್ಲಿ ವಿಚಾರಣೆಗೆ ಹಾಜರಾದ ಕಾರಣಕ್ಕೆ ಹೆಚ್ಚುವರಿಯಾಗಿ ₹60 ಲಕ್ಷ
- ಬೆಳಗಾವಿ ಅಧಿವೇಶನದ ವೆಚ್ಚಗಳ ಬಿಲ್ಲುಗಳ ಪಾವತಿಗೆ ಹೆಚ್ಚುವರಿಯಾಗಿ ₹5.13 ಕೋಟಿ, ಸುವರ್ಣ ವಿಧಾನ ಸೌಧದಲ್ಲಿ ಸಭಾಪತಿಯವರ ಪೀಠ, ಮೇಜು ಅಳವಡಿಸಿರುವ ಬಿಲ್ಲುಗಳ ಪಾವತಿಗೆ ಹೆಚ್ಚುವರಿಯಾಗಿ ₹43 ಲಕ್ಷ

ವಯನಾಡ್ ಪುನರ್ವಸತಿಗೆ ₹10 ಕೋಟಿ

ಕೇರಳದ ವಯನಾಡ್ ಜಿಲ್ಲೆಯ ಮೇಪ್ಪಾಡಿಯಲ್ಲಿ ಸಂಭವಿಸಿದ ಭೂಕುಸಿತದಿಂದ ಹಾನಿಗೊಳಗಾದ ಕುಟುಂಬಗಳಿಗೆ ಪುನರ್ವಸತಿ ಕಲ್ಪಿಸಲು ಹೆಚ್ಚುವರಿ ₹10 ಕೋಟಿ ಮೊತ್ತವನ್ನು ಪೂರಕ ಅಂದಾಜಿನಲ್ಲಿ ಒದಗಿಸಲಾಗಿದೆ.

ಕರ್ನಾಟಕದಲ್ಲಿ ನೆರೆ ಸಂತ್ರಸ್ತರ ಪುನರ್ವಸತಿ ಯೋಜನೆಯಡಿ 2014–2024ರವರೆಗಿನ ಮನೆಗಳ ದುರಸ್ತಿ/ಪುನರ್ ನಿರ್ಮಾಣಕ್ಕಾಗಿ ಪರಿಹಾರ ಮೊತ್ತವನ್ನು ರಾಜೀವ್ ಗಾಂಧಿ ವಸತಿ ನಿಗಮಕ್ಕೆ ಬಿಡುಗಡೆ ಮಾಡಲು ₹90 ಕೋಟಿಯನ್ನು ಎಸ್‌ಡಿಆರ್‌ಎಫ್ ಅಡಿ ಹೆಚ್ಚುವರಿಯಾಗಿ ಹಂಚಿಕೆ ಮಾಡಲಾಗಿದೆ.

ವಿಧಾನಸೌಧ ₹84 ಲಕ್ಷದ ಹೊಸ ದ್ವಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ನೆಲ ಮಹಡಿಯ ಪಶ್ಚಿಮ ದ್ವಾರದ ಕಬ್ಬಿಣದ ಗ್ರಿಲ್ ಬದಲಿಸಿ, ಕುಸುರಿ ಕೆತ್ತನೆಯ ಬೀಟೆ ಮರದ ಹೊಸ ಬಾಗಿಲು ಅಳವಡಿಸಿದ್ದು, ಅದರ ಉದ್ಘಾಟನೆ ಮಂಗಳವಾರ ಬೆಳಿಗ್ಗೆ ನೆರವೇರಲಿದೆ ಎಂದು ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮವು ಈ ಬಾಗಿಲನ್ನು ನಿರ್ಮಿಸಿದೆ. ಮೈಸೂರು ಅರಮನೆಯಲ್ಲಿನ ಬಾಗಿಲುಗಳ ಮಾದರಿಯ ಕುಸುರಿ ಕೆತ್ತನೆ, ದ್ವಾರದ ಮೇಲ್ಭಾಗದಲ್ಲಿ ರಾಜ್ಯದ ಲಾಂಛನ ಗಂಡಭೇರುಂಡ ಮತ್ತು ರಾಷ್ಟ್ರದ ಅಶೋಕ ಸ್ತಂಭ ಕಲಾಕೃತಿಗಳನ್ನು ಅಳವಡಿಸಲಾಗಿದೆ ಎಂದು ಹೇಳಿದರು.

ಬಾಗಿಲಿನ ನಿರ್ಮಾಣದ ವೆಚ್ಚ ಜಿಎಸ್‌ಟಿ ಸೇರಿ ಒಟ್ಟು ₹84 ಲಕ್ಷ ಆಗಿದೆ.

ವಿಧಾನ ಪರಿಷತ್ — ಪ್ರಶ್ನೋತ್ತರ

ನ್ಯಾಯಬೆಲೆ ಅಂಗಡಿಗೆ ಸಿ.ಸಿ.ಟಿ.ವಿ ಕ್ಯಾಮೆರಾ

20 ಸಾವಿರ ನ್ಯಾಯಬೆಲೆ ಅಂಗಡಿಗಳಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಅಳವಡಿಸಲು ಹಾಗೂ ಆಹಾರ ಧಾನ್ಯಗಳ ಸಾಗಣೆ ಮಾಡುವ ವಾಹನಗಳಿಗೆ ಜಿಪಿಎಸ್ ಅಳವಡಿಸಲು ಕ್ರಮಕೈಗೊಳ್ಳಲಾಗಿದೆ. ಈ ವ್ಯವಸ್ಥೆಯ ಮೇಲ್ವಿಚಾರಣೆಗೆ ‘ಕಮಾಂಡ್ ಕಂಟ್ರೋಲ್ ಸೆಂಟರ್’ ಸ್ಥಾಪಿಸಲಾಗುತ್ತದೆ. ಇದಕ್ಕಾಗಿ ಟೆಂಡರ್ ಕರೆಯಲಾಗಿದೆ.

ಕಾಳಸಂತೆಯಲ್ಲಿ ಆಹಾರ ಧಾನ್ಯಗಳ ಮಾರಾಟ ಮಾಡುವುದನ್ನು ಪತ್ತೆಹಚ್ಚಿ ಕ್ರಮಕೈಗೊಳ್ಳಲಾಗಿದೆ. ಕೆ.ಆರ್.ಪೇಟೆಯಲ್ಲಿ ಅಕ್ರಮ ನಡೆದಿರುವ ಪ್ರಕರಣಕ್ಕೆ ಸಂಬಂಧಿಸಿ, ಈಗಾಗಲೇ ಕ್ರಮಕೈಗೊಂಡಿದ್ದೇವೆ.

–**ಕೆ.ಎಚ್.ಮುನಿಯಪ್ಪ,** ಆಹಾರ ಸಚಿವ
ಪ್ರಶ್ನೆ: ಟಿ.ಎ.ಶರವಣ (ಜೆಡಿಎಸ್)

ಎರಡು ತಿಂಗಳಲ್ಲಿ ನಿಯಮ ರಚನೆ

ಆರೋಗ್ಯ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಎರಡು ತಿಂಗಳ ಒಳಗೆ ರಚಿಸಲಾಗುವುದು. ಜ್ಯೇಷ್ಠತಾ ಪಟ್ಟಿಯ ಕರಡು ಸಿದ್ಧವಾಗಿದ್ದು, ಶೀಘ್ರವೇ ಇದಕ್ಕೆ ಅಂತಿಮ ರೂಪ ನೀಡಲಾಗುವುದು. ಕೌನ್ಸೆಲಿಂಗ್ ಮೂಲಕವೇ ಪಾರದರ್ಶಕವಾಗಿ ವರ್ಗಾವಣೆ ಮಾಡಲು ಕ್ರಮಕೈಗೊಳ್ಳಲಾಗಿದೆ.

ಸೇವಾನಿರತ ವೈದ್ಯರು ಎಂ.ಎಸ್, ಎಂಡಿ, ಡಿಎನ್‌ಬಿ ಕೋರ್ಸ್‌ಗೆ ಸೇರಲು ಬಯಸಿದರೆ ಮೂರು ವರ್ಷ ವೇತನ ಸಹಿತ ರಜೆ ನೀಡಲು ಒಪ್ಪಿಗೆ ನೀಡಲಾಗಿದೆ. ವೈದ್ಯರ ಎಲ್ಲ ಬೇಡಿಕೆಗಳನ್ನು ಈಡೇರಿಸಲು ಸರ್ಕಾರ ಕ್ರಮಕೈಗೊಂಡಿದ್ದು, ನೌಕರರ ಸಂಘದವರೂ ಇದಕ್ಕೆ ಸಹಕಾರ ನೀಡಿದ್ದಾರೆ.

–**ದಿನೇಶ್ ಗುಂಡೂರಾವ್,** ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ
ಪ್ರಶ್ನೆ: ಎಸ್.ವಿ.ಸಂಕನೂರ (ಬಿಜೆಪಿ)

ಉತ್ತರ ವಿ.ವಿ: ಅಕ್ರಮವಾಗಿದ್ದರೆ ಕ್ರಮ

ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಲ್ಲಿ ಹಿಂದಿನ ಕುಲಪತಿಗಳ ಅವಧಿಯಲ್ಲಿ ಅಕ್ರಮಗಳು ಆಗಿದ್ದರೆ ಕ್ರಮ ತೆಗೆದುಕೊಳ್ಳುತ್ತೇವೆ. ನಿವೃತ್ತಿ ಹೊಂದಿದ್ದರೂ ಕ್ರಮಕೈಗೊಳ್ಳಲು ಅವಕಾಶ ಇದೆ. ವಿಶ್ವವಿದ್ಯಾಲಯಗಳಲ್ಲಿ ಆಗಿರುವ ಲೋಪಗಳನ್ನು ಹಗುರವಾಗಿ ಪರಿಗಣಿಸಿಲ್ಲ. ಕುವೆಂಪು ವಿಶ್ವವಿದ್ಯಾಲಯ, ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದಲ್ಲಿನ ಅಕ್ರಮಗಳ ತನಿಖೆಗೆ ಆಯೋಗ ರಚಿಸಲಾಗಿದೆ.

ಉತ್ತರ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದಂತೆ ರಾಜ್ಯಪಾಲರಿಗೆ ದೂರು ಬಂದ ಕಾರಣ, ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ರಾಜ್ಯಪಾಲರು ಆಯೋಗ ರಚಿಸಿದ್ದರು. ಆಯೋಗವು ರಾಜ್ಯಪಾಲರಿಗೆ ವರದಿ ನೀಡಿದೆ. ಸರ್ಕಾರಕ್ಕೆ ಸಲ್ಲಿಸಿಲ್ಲ. ಈ ಮಧ್ಯೆ ನ್ಯಾಯಾಲಯಕ್ಕೆ ಹೋಗಿ ಇದಕ್ಕೆ ತಡೆಯಾಜ್ಞೆ ತರಲಾಗಿದೆ. ಅಕ್ರಮಗಳ ಬಗ್ಗೆ ಮಾಹಿತಿ ತರಿಸಿಕೊಳ್ಳಲಾಗುವುದು.v

–**ಡಾ.ಎಂ.ಸಿ.ಸುಧಾಕರ್,** ಉನ್ನತ ಶಿಕ್ಷಣ ಸಚಿವ
ಪ್ರಶ್ನೆ: ಎಸ್.ಎಲ್.ಭೋಜೇಗೌಡ (ಜೆಡಿಎಸ್)

ಒಂದು ಸಾವಿರ ಹುದ್ದೆ ಭರ್ತಿಗೆ ಕ್ರಮ

ರಾಜ್ಯದ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಇರುವ ನಾಲ್ಕು ಸಾವಿರ ಬೋಧಕ ಹುದ್ದೆಗಳ ಪೈಕಿ ಒಂದು ಸಾವಿರ ಹುದ್ದೆಗಳ ಭರ್ತಿಗೆ ಕ್ರಮಕೈಗೊಳ್ಳಲಾಗಿದೆ. ವಿಶ್ವವಿದ್ಯಾಲಯ ಅನುದಾನ ಆಯೋಗದ (ಯುಜಿಸಿ) 12ಬಿ ಮಾನ್ಯತೆ ಸಿಗಬೇಕಾದರೆ ವಿಶ್ವವಿದ್ಯಾಲಯಗಳಲ್ಲಿ ಕಾಯಂ ಸಿಬ್ಬಂದಿ ಇರಬೇಕು. ಹೀಗಾಗಿ ವಿಶ್ವವಿದ್ಯಾಲಯಗಳನ್ನು ಬಲಗೊಳಿಸಲಾಗುವುದು.

ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವಾಗ ರೋಸ್ಟರ್ ಪಾಲನೆ ಆಗಿದೆಯೇ ಎಂಬ ಬಗ್ಗೆ ಪರಿಶೀಲನೆ ಮಾಡಲಾಗುವುದು

–**ಡಾ.ಎಂ.ಸಿ.ಸುಧಾಕರ್,** ಉನ್ನತ ಶಿಕ್ಷಣ ಸಚಿವ
ಪ್ರಶ್ನೆ: ಡಿ.ಟಿ.ಶ್ರೀನಿವಾಸ್ (ಕಾಂಗ್ರೆಸ್)

ಪರಿಹಾರ ವಿತರಣೆಗೆ ಸೂಚನೆ

ಭೀಮಗಡ ಅಭಯಾರಣ್ಯ ವ್ಯಾಪ್ತಿಯ ತಳೆವಾಡಿ ಗ್ರಾಮದಿಂದ ಸ್ಥಳಾಂತರಗೊಳ್ಳಲಿರುವ 32 ಕುಟುಂಬಗಳ ಪೈಕಿ 27 ಕುಟುಂಬಗಳಿಗೆ ಮೊದಲ ಹಂತದಲ್ಲಿ ತಲಾ ₹ 10 ಲಕ್ಷ ಪರಿಹಾರ ನೀಡಲಾಗಿದೆ. ಬಾಕಿ ಇರುವ ಐದು ಕುಟುಂಬಗಳಿಗೂ ಪರಿಹಾರಧನದ ಚೆಕ್ ವಿತರಿಸಲು ಸೂಚನೆ ನೀಡಲಾಗಿದೆ

–**ಈಶ್ವರ ಖಂಡ್ರೆ,** ಅರಣ್ಯ ಸಚಿವ
ಪ್ರಶ್ನೆ: ಶಾಂತಾರಾಮ್ ಬುಡ್ನ ಸಿದ್ದಿ (ಬಿಜೆಪಿ)

ಒತ್ತುವರಿ ತೆರವು ಬಾಕಿ

ಅರಣ್ಯ ಇಲಾಖೆಯಲ್ಲಿ 1,20,491 ಪ್ರಕರಣಗಳಲ್ಲಿ 2,21,263 ಎಕರೆ ಅರಣ್ಯ ಪ್ರದೇಶದ ಒತ್ತುವರಿ ತೆರವು ಮಾಡುವುದು ಬಾಕಿ ಇದೆ. ಇದುವರೆಗೆ 8,424 ಪ್ರಕರಣಗಳಲ್ಲಿ 35,098 ಎಕರೆ ಅರಣ್ಯ ಪ್ರದೇಶದ ಒತ್ತುವರಿ ತೆರವು ಮಾಡಲಾಗಿದೆ. ಅರಣ್ಯ ಮತ್ತು ಕಂದಾಯ ಇಲಾಖೆ ಜಮೀನಿನ ಗಡಿ ಗುರುತಿಸಲು ಕಾಲಮಿತಿ ಒಳಗೆ ಜಂಟಿ ಸಮೀಕ್ಷೆ ಮಾಡಲಾಗುವುದು. ಅರಣ್ಯೇತರ ಜಮೀನು ಇದ್ದರೆ ಮಂಜೂರು ಮಾಡುವುದಕ್ಕೆ ಕ್ರಮಕೈಗೊಳ್ಳಲಾಗುವುದು

–**ಈಶ್ವರ್ ಖಂಡ್ರೆ,** ಅರಣ್ಯ ಸಚಿವ
ಪ್ರಶ್ನೆ: ಕಿಶೋರ್‌ಕುಮಾರ್ ಪುತ್ತೂರು (ಬಿಜೆಪಿ)

‘ಬಜೆಟ್‌ಗೂ ತಟ್ಟಿದ ನಾಯಕತ್ವ ಬದಲಾವಣೆ ಬಿಸಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಯಕತ್ವ ಬದಲಾವಣೆ ಕುರಿತು ಆಡಳಿತ ಪಕ್ಷದ ಸದಸ್ಯರೇ ಪರ–ವಿರೋಧ ಹೇಳಿಕೆ ನೀಡಿದ್ದಾರೆ. ಈ ಗೊಂದಲ ಬಜೆಟ್ ಮೇಲೂ ಪರಿಣಾಮ ಬೀರಿದೆ ಎಂದು ಬಿಜೆಪಿಯ ಪ್ರತಾಪ್‌ಸಿಂಹ ನಾಯಕ್ ಹೇಳಿದರು.

ವಿಧಾನಪರಿಷತ್‌ನಲ್ಲಿ ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ‘ಬೆಳಗಾವಿ ಅಧಿವೇಶನದಲ್ಲೇ ಮುಖ್ಯಮಂತ್ರಿ ಬದಲಾವಣೆ ವಿಚಾರ ಪ್ರಸ್ತಾಪ ಮಾಡಲಾಗಿತ್ತು. ಇದು ನಾಯಕತ್ವ ಬದಲಾವಣೆಯ ಒಪ್ಪಂದದ ಫಲ. ಈ ಬೆಳವಣಿಗೆ ನಂತರ ಮುಖ್ಯಮಂತ್ರಿಯವರು ಶಾಸಕರ ವಿಶ್ವಾಸ ಕಳೆದುಕೊಂಡಿದ್ದಾರೆ’ ಎಂದರು.


ಅವರ ಮಾತಿಗೆ ಆಕ್ಷೇಪ ವ್ಯಕ್ತಪಡಿಸಿದ ಇಂಧನ ಸಚಿವ ಕೆ.ಜೆ. ಜಾರ್ಜ್, ‘ಮುಖ್ಯಮಂತ್ರಿ ಶಾಸಕರ ವಿಶ್ವಾಸ ಕಳೆದುಕೊಂಡಿದ್ದಾರೆ ಎನಿಸಿದರೆ ಅವಿಶ್ವಾಸ ನಿರ್ಣಯ ಮಂಡಿಸಿ, ಆಗ ಬಿಜೆಪಿಗೆ ವಾಸ್ತವದ ಅರಿವಾಗುತ್ತದೆ’ ಎಂದು ಸವಾಲು ಹಾಕಿದರು.

ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹಮದ್, ‘ಒಪ್ಪಂದದ ಬಗ್ಗೆ ಕಾಂಗ್ರೆಸ್ ಹೈಕಮಾಂಡ್ ನಿಮಗೆ ಹೇಳಿದೆಯಾ’ ಎಂದು ಪ್ರಶ್ನಿಸಿದರು. ಈ ವಿಚಾರ ಆಡಳಿತ ಮತ್ತು ವಿರೋಧ ಪಕ್ಷದ ನಡುವೆ ಮಾತಿನ ಚಕಮಕಿಗೆ ದಾರಿ ಮಾಡಿಕೊಟ್ಟಿತು.

ಮಾತು ಮುಂದುವರಿಸಿದ ಪ್ರತಾಪ್‌ಸಿಂಹ ನಾಯಕ್, ‘ಆಡಳಿತ ಪಕ್ಷದ ಗೊಂದಲ, ಕಿತ್ತಾಟ ಇಡೀ ರಾಜ್ಯದ ಜನರಿಗೆ ಗೊತ್ತಿದೆ. ಬಜೆಟ್ ಮಂಡಿಸುವಾಗ ಮುಖ್ಯಮಂತ್ರಿ ಅವರಲ್ಲಿ ಉತ್ಸಾಹವೇ ಇರಲಿಲ್ಲ. ಕಾಂಗ್ರೆಸ್ ಶಾಸಕರು ಚಕ್ರವ್ಯೂಹದಲ್ಲಿ ಸಿಲುಕಿದ್ದಾರೆ’ ಎಂದರು.

ಕಾಂಗ್ರೆಸ್‌ನ ಕೆ.ಶಿವಕುಮಾರ್, ಉಮಾಶ್ರೀ, ಡಿ.ಟಿ.ಶ್ರೀನಿವಾಸ್, ಬಿಜೆಪಿಯ ಕಿಶೋರ್‌ಕುಮಾರ್ ಪುತ್ತೂರು ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದರು.

ಸದಸ್ಯರು ಕಿಮ್ಮತ್ತು ನೀಡುವುದಿಲ್ಲ: ಹೊರಟ್ಟಿ


ಬಸವರಾಜ ಹೊರಟ್ಟಿ

ನಿಗದಿತ ಸಮಯದ ಒಳಗೆ ಮಾತು ಮುಗಿಸಲು, ಒಬ್ಬರು ಮಾತನಾಡುವಾಗ ಅನಗತ್ಯವಾಗಿ ಎದ್ದು ನಿಲ್ಲುವವರನ್ನು ಎಚ್ಚರಿಸಲು ಬೆಲ್ ಹೊಡೆದರೂ ಸದಸ್ಯರು ಕಿಮ್ಮತ್ತು ನೀಡುವುದಿಲ್ಲ ಎಂದು ಸಭಾಪತಿ ಬಸವರಾಜ ಹೊರಟ್ಟಿ ಅಸಮಾಧಾನ ವ್ಯಕ್ತಪಡಿಸಿದರು.

ಬಿಜೆಪಿಯ ಪ್ರತಾಪ್‌ಸಿಂಹ ನಾಯಕ್ ಮಾತನಾಡುವಾಗ ಕಾಂಗ್ರೆಸ್‌ನ ಐವನ್ ಡಿಸೋಜ ಸೇರಿದಂತೆ ಕೆಲ ಸದಸ್ಯರು ಪದೇಪದೇ ಎದ್ದು ನಿಂತು ಅಡ್ಡಿಪಡಿಸಿದಾಗ ಕೋಪಗೊಂಡ ಸಭಾಪತಿ, ‘ನಿಮಗೆ ತಿಳಿದಂತೆ ಮಾಡಿ, ನಿಯಮಗಳನ್ನು ಪಾಲನೆ ಮಾಡುವುದು ತಿಳಿಯದಿದ್ದರೆ ಹೇಗೆ’ ಎಂದು ಪ್ರಶ್ನಿಸಿದರು.

‘ಮೂರು ಗಂಟೆಯೂ ವಿದ್ಯುತ್ ಇಲ್ಲ’


ಸಿ.ಟಿ. ರವಿ

ರೈತರಿಗೆ ಉಚಿತ ವಿದ್ಯುತ್ ನೀಡುವುದಾಗಿ ಸರ್ಕಾರ ಹೇಳುತ್ತಿದೆ. ಆದರೆ, ಮೂರು ಗಂಟೆಯೂ ವಿದ್ಯುತ್ ನೀಡುತ್ತಿಲ್ಲ ಎಂದು ಬಿಜೆಪಿಯ ಸಿ.ಟಿ.ರವಿ ದೂರಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಮಾತನಾಡಿದ ಜೆಡಿಎಸ್‌ನ ಗೋವಿಂದ ರಾಜು, ‘ಇದು ಸಾಲದ ಸರ್ಕಾರ. ವಿದ್ಯುತ್ ಇಲಾಖೆ ಕೂಡ ಸಾಲದಲ್ಲೇ ನಡೆಯುತ್ತಿದೆ’ ಎಂದರು.

ಇಂಧನ ಸಚಿವ ಕೆ.ಜೆ. ಜಾರ್ಜ್, ತಮಿಳುನಾಡು ಸೇರಿದಂತೆ ಹಲವು ರಾಜ್ಯಗಳು ವಿದ್ಯುತ್ ಇಲಾಖೆಗಳು ಸಾಲದಲ್ಲಿವೆ. ಕಡಿಮೆ ಶುಲ್ಕ ಪಡೆದು ವಿದ್ಯುತ್ ನೀಡಲಾಗುತ್ತಿದೆ. ಇತರೆ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕದ ವಿದ್ಯುತ್ ಶುಲ್ಕ ಕಡಿಮೆ ಇದೆ ಎಂದು ಸಮಜಾಯಿಷಿ ನೀಡಿದರು.

ವೃತ್ತಿ ತೆರಿಗೆ ವಿವರ ಪ್ರತ್ಯೇಕ ಸಲ್ಲಿಕೆ ಅನಗತ್ಯ: ಮಸೂದೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯ ತೆರಿಗೆಯ ವಿವರಗಳನ್ನು (ಐ.ಟಿ ರಿಟರ್ನ್ಸ್) ಸಲ್ಲಿಸಿದ ಬಳಿಕವೂ ವೃತ್ತಿ ತೆರಿಗೆಯ ವಿವರಗಳನ್ನು ಸಲ್ಲಿಸಬೇಕೆಂಬ ಷರತ್ತನ್ನು ತೆಗೆದುಹಾಕುವ ಉದ್ದೇಶದಿಂದ ಸರ್ಕಾರ ಮಂಡಿಸಿದ ‘ಕರ್ನಾಟಕ ವೃತ್ತಿಗಳ ಕಸುಬುಗಳ ಆಜೀವಿಕೆಗಳ ಮತ್ತು ಉದ್ಯೋಗಗಳ ಮೇಲಣ ತೆರಿಗೆಗಳ ತಿದ್ದುಪಡಿ ಮಸೂದೆ’ಗೆ ವಿಧಾನಸಭೆ ಸೋಮವಾರ ಅಂಗೀಕಾರ ನೀಡಿತು.

ಮಸೂದೆ ಮಂಡಿಸಿದ ಕಂದಾಯ ಸಚಿವ ಕೃಷ್ಣ ಬೈರೇಗೌಡ, ‘ಒಮ್ಮೆ ತೆರಿಗೆ ಹಣ ಪಾವತಿಸಿದ ನಂತರ ಮತ್ತೆ ರಿಟರ್ನ್ಸ್ ಸಲ್ಲಿಸುವ ಅಗತ್ಯ ಇಲ್ಲ ಎಂಬ ಸರಳ ತಿದ್ದುಪಡಿ ತರಲಾಗಿದೆ. ಹಿರಿಯ ನಾಗರಿಕರು, ಸೈನಿಕರು, ದೈಹಿಕ- ಮಾನಸಿಕ ಅಂಗವಿಕಲರು ವೃತ್ತಿ ತೆರಿಗೆ ಸಲ್ಲಿಸುವ ಅಗತ್ಯ ಇಲ್ಲದಿದ್ದರೂ ‘ನಿಲ್ ರಿಟರ್ನ್ಸ್’ ಸಲ್ಲಿಸಬೇಕಿತ್ತು. ಆದರೆ, ‘ನಿಲ್ ರಿಟರ್ನ್ಸ್’ ಸಲ್ಲಿಸಲೂ ಕೂಡಾ ಈ ಮಸೂದೆಯಲ್ಲಿ ವಿನಾಯಿತಿ ನೀಡಲಾಗಿದೆ’ ಎಂದು ತಿಳಿಸಿದರು.

ಜ್ಞಾನ ಭಂಡಾರ ಹಸ್ತಪ್ರತಿ ಮಸೂದೆ: ರಾಜ್ಯದಲ್ಲಿ ಲಭ್ಯವಿರುವ ಎಲ್ಲ ಬಗೆಯ ಪ್ರಾಚೀನ ಹಸ್ತಪ್ರತಿಗಳ ಮಾಹಿತಿಯನ್ನು ಸಂಗ್ರಹಿಸಿ, ಡಿಜಿಟಲೀಕರಣದ ಮೂಲಕ ಸಂರಕ್ಷಿಸುವ ಉದ್ದೇಶದಿಂದ ಮಂಡಿಸಿದ ‘ಕರ್ನಾಟಕ ಜ್ಞಾನ ಭಂಡಾರ ಹಸ್ತಪ್ರತಿ ಮಸೂದೆ’ಗೂ ವಿಧಾನಸಭೆ ಅಂಗೀಕಾರ ನೀಡಿತು.

ಮಸೂದೆ ಮಂಡಿಸಿದ ಕಾನೂನು ಸಚಿವ ಎಚ್.ಕೆ. ಪಾಟೀಲ, ‘ಯಾವುದೇ ವ್ಯಕ್ತಿ ಮತ್ತು ಸಂಸ್ಥೆಗಳ ಬಳಿ ಇರುವ ತಾಳೆಗರಿ, ತಾಮ್ರ ಪತ್ರ, ಮರದ ತೊಗಟೆ ಮತ್ತು ಬಟ್ಟೆಗಳ ಮೇಲೆ ಬರೆದಿರುವ ಪುರಾತನ ಹಸ್ತಪ್ರತಿಗಳನ್ನು ಸಂರಕ್ಷಿಸಲು ಈ ಮಸೂದೆ ರೂಪಿಸಲಾಗಿದೆ’ ಎಂದು ಹೇಳಿದರು.

ಎರಡು ಮಸೂದೆಗಳ ಮಂಡನೆ

ಬೋಧಕೇತರ ಹುದ್ದೆಗಳಿಗೆ ಶಿಕ್ಷಕರ ನಿಯೋಜನೆಯನ್ನು ನಿಷೇಧಿಸುವ, ಶಾಲೆಗಳನ್ನು ಮೂರು ವರ್ಗಗಳಾಗಿ ವಿಂಗಡಿಸಿ ಶಿಕ್ಷಕರ ವರ್ಗಾವಣೆ ಸ್ವರೂಪದಲ್ಲಿ ಆಮೂಲಾಗ್ರ ಬದಲಾವಣೆ ತರುವ ಉದ್ದೇಶದ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳು (ಶಿಕ್ಷಕರ ವರ್ಗಾವಣೆ ನಿಯಂತ್ರಣ) (ತಿದ್ದುಪಡಿ) ಮಸೂದೆ ಮತ್ತು ಶಿಕ್ಷಣ ಸಂಸ್ಥೆಗಳ ಜಮೀನುಗಳನ್ನು ಸಂರಕ್ಷಿಸುವ ಉದ್ದೇಶದ ‘ಕರ್ನಾಟಕ ಸರ್ಕಾರಿ ಶೈಕ್ಷಣಿಕ ಸಂಸ್ಥೆಗಳ ಭೂಮಿ (ರಕ್ಷಣೆ ಮತ್ತು ಸಕ್ರಮಾತಿ) ಮಸೂದೆಯನ್ನು ಶಾಲಾ ಶಿಕ್ಷಣ ಸಚಿವ ಎಸ್. ಮಧು ಬಂಗಾರಪ್ಪ ಅವರು ವಿಧಾನಸಭೆಯಲ್ಲಿ ಸೋಮವಾರ ಮಂಡಿಸಿದರು.

ಎಡಿಎಜಿ ವಂಚನೆ ಪ್ರಕರಣದ ತನಿಖೆ: ನಿರಾಸಕ್ತಿ ಸಲ್ಲ– ಸುಪ್ರೀಂ

ಪ್ರಜಾವಾಣಿ ವಾರ್ತೆ



ನವದೆಹಲಿ: ಅನಿಲ್ ಧೀರೂಭಾಯಿ ಅಂಬಾನಿ ಗ್ರೂಪ್ (ಎಡಿಎಜಿ) ಮತ್ತು ಅದರ ಸಂಸ್ಥೆಗಳನ್ನು ಒಳಗೊಂಡಿರುವ ಭಾರಿ ಪ್ರಮಾಣದ ಬ್ಯಾಂಕಿಂಗ್ ವಂಚನೆ ಪ್ರಕರಣದ ತನಿಖೆಯಲ್ಲಿ ಸಿಬಿಐ ಮತ್ತು ಜಾರಿ ನಿರ್ದೇಶನಾಲಯ (ಇಡಿ) ನಿರಾಸಕ್ತಿ ತೋರುತ್ತಿರುವುದು ಸರಿ ಅಲ್ಲ ಎಂದು ಸುಪ್ರೀಂ ಕೋರ್ಟ್ ಸೋಮವಾರ ಬೇಸರ ವ್ಯಕ್ತಪಡಿಸಿದೆ.

ಅಲ್ಲದೆ ಈ ವಿಷಯದ ಬಗ್ಗೆ ನ್ಯಾಯಯುತ, ನಿಷ್ಪಕ್ಷಪಾತ, ಪಾರದರ್ಶಕ ತನಿಖೆ ನಡೆಸಬೇಕು. ತನಿಖೆಯನ್ನು ವಿಳಂಬಿಸದೆ ಸಮಯದ ಮಿತಿ ನಿಗದಿಪಡಿಸಿಕೊಂಡು ಪೂರ್ಣಗೊಳಿಸಬೇಕು ಎಂದು ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾ.ಜಾಯ್‌ಮಾಲ್ಯಾ ಬಾಗ್ಚಿ, ನ್ಯಾ.ವಿಪುಲ್ ಎಂ.ಪಂಚೋಲಿ ಅವರನ್ನೊಳಗೊಂಡ ಪೀಠ ನಿರ್ದೇಶಿಸಿತು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಹೊಸ ಸ್ಥಿತಗತಿ ವರದಿಯನ್ನು ಸಲ್ಲಿಸುವಂತೆ ಸೂಚಿಸಿದ ಪೀಠವು, ತನಿಖಾ ಸಂಸ್ಥೆಗಳಿಗೆ ಸಂಬಂಧಿತ ಹಣಕಾಸು ಸಂಸ್ಥೆಗಳು ಸಹಕರಿಸಬೇಕು ಎಂದೂ ಹೇಳಿತು.

‘ಬಿ.ಇಡಿ: ಒಂದು ವರ್ಷಕ್ಕೆ ಇಳಿಸುವ ಪ್ರಸ್ತಾವ ಇಲ್ಲ’

ನವದೆಹಲಿ (ಪಿಟಿಐ): ‘ಬಿ.ಇಡಿ ಕೋರ್ಸ್ ಅವಧಿಯನ್ನು ಒಂದು ವರ್ಷಕ್ಕೆ ಇಳಿಸುವ ಯಾವ ಪ್ರಸ್ತಾವವೂ ಇಲ್ಲ’ ಎಂದು ಕೇಂದ್ರ ಶಿಕ್ಷಣ ಸಚಿವಾಲಯವು ಸೋಮವಾರ ಲೋಕಸಭೆಗೆ ತಿಳಿಸಿದೆ.

‘ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಮಂಡಳಿಯಿಂದ (ಎನ್‌ಸಿಟಿಇ) ಪಡೆದ ಮಾಹಿತಿಯ ಪ್ರಕಾರ, ಬಿ.ಇಡಿ ಅವಧಿಯನ್ನು ಒಂದು ವರ್ಷಕ್ಕೆ ಇಳಿಸುವ ಯಾವ ಪ್ರಸ್ತಾವವೂ ನಮ್ಮ ಮುಂದೆ ಇಲ್ಲ’ ಎಂದು ಸಚಿವಾಲಯ ಹೇಳಿದೆ.

‘ರಾಷ್ಟ್ರೀಯ ಶಿಕ್ಷಣ ನೀತಿ ಶಿಫಾರಸಿನ ಅನ್ವಯ ಬಿ.ಇಡಿ ಕೋರ್ಸ್ ಅವಧಿಯನ್ನು ಒಂದು ವರ್ಷಕ್ಕೆ ಇಳಿಸಲಾಗುವುದು (2014ಕ್ಕೂ ಮೊದಲು ಇದ್ದಂತೆ) ಎಂದು ರಾಷ್ಟ್ರೀಯ ಅಧ್ಯಾಪಕ ಶಿಕ್ಷಣ ಮಂಡಳಿ ಕಳೆದ ವರ್ಷ ಹೇಳಿತ್ತು.

ಕಲಾಪ ವೀಕ್ಷಣೆ

ಪ್ರಜಾವಾಣಿ ಚಿತ್ರ: ರಂಜು ಪಿ.


ವಿಧಾನ ಪರಿಷತ್‌ನಲ್ಲಿ ಸೋಮವಾರ ನಡೆದ ಕಲಾಪವನ್ನು ಕಾಲೇಜು ವಿದ್ಯಾರ್ಥಿನಿಯರು ವೀಕ್ಷಿಸಿದರು

‘ರಾಜ್ಯಗಳ ಮೇಲೆ ಭಾಷಾ ಹೇರಿಕೆ ಇಲ್ಲ’

ನವದೆಹಲಿ (ಪಿಟಿಐ): ‘ಹಿಂದಿ ಸೇರಿದಂತೆ ಯಾವುದೇ ಒಂದು ಭಾಷೆಯನ್ನು ಯಾವ ರಾಜ್ಯದ ಮೇಲೂ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಮೂಲಕ ಹೇರಿಕೆ ಮಾಡುವುದಿಲ್ಲ. ಬದಲಿಗೆ ಬಹುಭಾಷಾ ತತ್ತ್ವವನ್ನು ಎನ್‌ಇಪಿ ಉತ್ತೇಜಿಸುತ್ತಿದೆ’ ಎಂದು ಕೇಂದ್ರ ಶಿಕ್ಷಣ ಖಾತೆ ರಾಜ್ಯ ಸಚಿವ ಜಯಂತ ಚೌಧರಿ ಅವರು ಸೋಮವಾರ ಹೇಳಿದ್ದಾರೆ.

ಲೋಕಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ‘ಎನ್‌ಇಪಿಯಲ್ಲಿ ಪ್ರಸ್ತಾಪಿಸಲಾಗಿರವ ತ್ರಿಭಾಷಾ ವಿಚಾರವೂ ದ್ವಿಭಾಷಾ ಸೂತ್ರಕ್ಕೆ ಅನುಗುಣವಾಗಿಯೇ ಇದೆ. ಇಲ್ಲಿ ಯಾವ ಹೇರಿಕೆಯೂ ಇಲ್ಲ. ಇದರ ಸಂಪೂರ್ಣ ಅನುಷ್ಠಾನ ರಾಜ್ಯಗಳಿಗೆ ಬಿಟ್ಟ ವಿಚಾರ’ಎಂದಿದ್ದಾರೆ.

‘ಜತೆಗೆ ಬಹುಭಾಷೆಗಳನ್ನು ಆರಂಭಿಕ ಹಂತದಿಂದಲೇ ಕಲಿತರೆ ಆಗುವ ಪ್ರಯೋಜನಗಳನ್ನು ಗಮನಿಸಿ, ಬಹುಭಾಷೆಗಳ ಕಲಿಕೆಗೆ ಎನ್‌ಇಪಿ ಒತ್ತು ನೀಡಿದೆ’ ಎಂದೂ ಅವರು ಪ್ರತಿಪಾದಿಸಿದ್ದಾರೆ.

‘ತಮಿಳುನಾಡು ಸರ್ಕಾರವು ಎನ್‌ಇಪಿಗೆ 2020ಕ್ಕೆ ಕೆಲವು ಆಕ್ಷೇಪ ವ್ಯಕ್ತಪಡಿಸಿದ್ದರೂ ಕೇಂದ್ರ ಸರ್ಕಾರವು ಸಮಗ್ರ ಶಿಕ್ಷಣ ಯೋಜನೆ ಅನ್ವಯ ರಾಜ್ಯಕ್ಕೆ ₹538 ಕೋಟಿಯನ್ನು ಬಿಡುಗಡೆ ಮಾಡಿದೆ ಎಂದೂ ಸಚಿವರು ಹೇಳಿದ್ದಾರೆ.

prajavani.net prajavani
ಮಂಗಳವಾರ, ಮಾರ್ಚ್ 24, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 82 | ಪುಟ 16
www.prajavani.net

'ಮರಗಳನ್ನು ಉಳಿಸಿ'
ಮರಗಳ ಹನನ ಮಾಡದಂತೆ ಆಗ್ರಹಿಸಿ ಮೈಸೂರು ಅರಣ್ಯ ಇಲಾಖೆಯ ಆವರಣದಲ್ಲಿ ಸೋಮವಾರ ಪ್ರತಿಭಟನೆ ನಡೆಯಿತು



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 72,696 | ನಿಫ್ಟಿ 22,512 | $/₹ 93.53

ಹೊರ್ಮುಜ್: ಗಡುವು ವಿಸ್ತರಣೆ

ಇರಾನ್ ವಿದ್ಯುತ್ ಸ್ಥಾವರಗಳ ಮೇಲೆ ಐದು ದಿನಗಳವರೆಗೆ ದಾಳಿ ಇಲ್ಲ: ಟ್ರಂಪ್

ಟೆಹರಾನ್/ ವಾಷಿಂಗ್ಟನ್ (ಎಪಿ/ ಎಎಫ್‌ಪಿ): ಹೊರ್ಮುಜ್ ಜಲಸಂಧಿಯನ್ನು ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಲು ಇರಾನ್‌ಗೆ ನೀಡಿದ್ದ ಗಡುವನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ವಿಸ್ತರಿಸಿದ್ದಾರೆ. ಇರಾನಿನ ವಿದ್ಯುತ್ ಸ್ಥಾವರಗಳು ಮತ್ತು ಇಂಧನ ಮೂಲ ಸೌಕರ್ಯಗಳ ಮೇಲಿನ ದಾಳಿಯನ್ನು ಐದು ದಿನಗಳವರೆಗೆ ತಡೆಹಿಡಿದಿರುವುದಾಗಿ ಸೋಮವಾರ ಹೇಳಿದ್ದಾರೆ.

ಹೊರ್ಮುಜ್ ಜಲಸಂಧಿ ಮುಕ್ತಗೊಳಿಸಲು ಈ ಹಿಂದೆ ವಿಧಿಸಿದ್ದ 48 ಗಂಟೆಗಳ ಗಡುವು ಕೊನೆಗೊಳ್ಳಲು ಕೆಲವೇ ಗಂಟೆಗಳಿರುವಾಗ ಟ್ರಂಪ್ ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಈ ಘೋಷಣೆ ಮಾಡಿದ್ದಾರೆ. ಈ ಬೆಳವಣಿಗೆಯ ಬೆನ್ನಲ್ಲೇ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ಬೆಲೆ ಇಳಿಕೆಯಾಗಿದೆ.

'ಪಶ್ಚಿಮ ಏಷ್ಯಾದಲ್ಲಿ ಸಂಘರ್ಷವನ್ನು ಸಂಪೂರ್ಣವಾಗಿ ಕೊನೆಗೊಳಿಸುವ ಕುರಿತು' ಇರಾನ್ ಮತ್ತು ಅಮೆರಿಕ ಕಳೆದ ಎರಡು ದಿನಗಳಿಂದ 'ಉತ್ತಮ ಮತ್ತು ಸಕಾರಾತ್ಮಕ' ಮಾತುಕತೆ ನಡೆಸಿವೆ' ಎಂದೂ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ. ▶10

'ಗೌರವಾನ್ವಿತ ವ್ಯಕ್ತಿ ಜತೆ ಮಾತುಕತೆ'

ಟ್ರಂಪ್ ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ 'ಇರಾನ್ ಜತೆ ಮಾತುಕತೆ' ನಡೆಯುತ್ತಿದೆ ಎಂದಷ್ಟೇ ಹೇಳಿದ್ದರು. ಮಾತುಕತೆ ಕುರಿತ ಹೆಚ್ಚಿನ ಮಾಹಿತಿಯನ್ನು ಆ ಬಳಿಕ ಫ್ಲಾರಿಡಾದಲ್ಲಿ ಸುದ್ದಿಗಾರರ ಜತೆ ಹಂಚಿಕೊಂಡರು.

- 'ಪ್ರಮುಖ ಅಂಶಗಳನ್ನು ಒಳಗೊಂಡ ಒಪ್ಪಂದ'ದ ಕುರಿತು ಅಮೆರಿಕ–ಇರಾನ್ ಮಾತುಕತೆ ನಡೆಸುತ್ತಿದೆ. ಯುದ್ಧ ಕೊನೆಗೊಳಿಸಲು ಶೀಘ್ರದಲ್ಲೇ ಒಪ್ಪಂದ ಅಂತಿಮಗೊಳ್ಳಲಿದೆ.

▶10



ಡೊನಾಲ್ಡ್ ಟ್ರಂಪ್

ಪಶ್ಚಿಮ ಏಷ್ಯಾದ ಬಿಕ್ಕಟ್ಟು ಆತಂಕಕಾರಿ: ಮೋದಿ

ನವದೆಹಲಿ: 'ಕೊಲ್ಲಿ ರಾಷ್ಟ್ರಗಳಿಂದ ನಮ್ಮ ದೇಶವು ಭಾರಿ ಪ್ರಮಾಣದಲ್ಲಿ ಕಚ್ಚಾ ತೈಲ ಮತ್ತು ಅನಿಲ ಆಮದು ಮಾಡಿಕೊಳ್ಳುವುದರಿಂದ ಪಶ್ಚಿಮ ಏಷ್ಯಾದ ಬಿಕ್ಕಟ್ಟು ನಮ್ಮ ಆರ್ಥಿಕ ಮತ್ತು ರಾಷ್ಟ್ರೀಯ ಭದ್ರತೆಗೆ ಅನಿರೀಕ್ಷಿತ ಸವಾಲುಗಳನ್ನು ಒಡ್ಡಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

ಕೊಲ್ಲಿ ಯುದ್ಧ ಹಾಗೂ ಪ್ರಸ್ತುತ ಪರಿಸ್ಥಿತಿಯ ಕುರಿತು ಲೋಕಸಭೆಯಲ್ಲಿ ಸೋಮವಾರ ಹೇಳಿಕೆ ನೀಡಿದ ಅವರು, 'ಪಶ್ಚಿಮ ಏಷ್ಯಾ ಬಿಕ್ಕಟ್ಟು ಆತಂಕಕಾರಿ. ಇದು, ಜಗತ್ತಿನ ಆರ್ಥಿಕತೆಯ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ. ಮಾತುಕತೆ ಮತ್ತು ರಾಜತಾಂತ್ರಿಕತೆ ಮೂಲಕ ಈ ಬಿಕ್ಕಟ್ಟಿಗೆ ಪರಿಹಾರ ಸಾಧ್ಯ' ಎಂದು ಅಭಿಪ್ರಾಯಪಟ್ಟರು.

ಹೊರ್ಮುಜ್ ಜಲಸಂಧಿಯಲ್ಲಿ ಸರಕುಗಳ ಸಾಗಣೆಗೆ ಅಡ್ಡಿಪಡಿಸುವುದನ್ನು ಒಪ್ಪುವುದಿಲ್ಲ. ತೈಲ ಮತ್ತು ಅನಿಲ ಪೂರೈಕೆಗಾಗಿ ವಿವಿಧ ದೇಶಗಳ ಜತೆ ಸಂಪರ್ಕ ಸಾಧಿಸಲಾಗಿದೆ ಎಂದು ಅವರು ಹೇಳಿದರು. 'ಯುದ್ಧದ ಆರಂಭದಿಂದಲೂ ಹೊರ್ಮುಜ್ ಜಲಸಂಧಿ ಮೂಲಕ ಸರಕುಗಳ ಸಾಗಣೆ ಬಹುದೊಡ್ಡ ಸವಾಲಾಗಿದೆ. ಆದರೂ, ನಮ್ಮ ಸರ್ಕಾರವು ಅನಿಲ ಮತ್ತು ಇಂಧನ ಸರಬರಾಜಿನ ಮೇಲೆ ಹೆಚ್ಚಿನ ಪರಿಣಾಮ ಬೀರದಂತೆ ನೋಡಿಕೊಂಡಿದೆ' ಎಂದು ಅವರು ವಿವರಿಸಿದರು.

'ಭಾರತವು ತನ್ನ ಎಲ್‌ಪಿಜಿ ಅಗತ್ಯಗಳಲ್ಲಿ ಶೇ 60ರಷ್ಟನ್ನು ಆಮದು ಮಾಡಿಕೊಳ್ಳುತ್ತಿದೆ. ಹೊರಗಿನ ಅನಿಶ್ಚಿತ ಪೂರೈಕೆಯಿಂದಾಗಿ, ಸರ್ಕಾರವು ದೇಶೀಯ ಎಲ್‌ಪಿಜಿ ಉತ್ಪಾದನೆಯನ್ನೂ ಹೆಚ್ಚಿಸುತ್ತಿದೆ' ಎಂದು ಅವರು ತಿಳಿಸಿದರು. ▶10



ಹೊರ್ಮುಜ್ ದಾಟಿದ 2 ಹಡಗು

ನವದೆಹಲಿ (ಪಿಟಿಐ): ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ಹೊತ್ತ ಭಾರತದ ಎರಡು ಹಡಗುಗಳು ಯುದ್ಧಪೀಡಿತ ಹೊರ್ಮುಜ್ ಜಲಸಂಧಿಯನ್ನು ಸುರಕ್ಷಿತವಾಗಿ ದಾಟಿವೆ. ಈ ಹಡಗುಗಳು ಎರಡು ದಿನಗಳಲ್ಲಿ ಭಾರತ ತಲುಪುವ ನಿರೀಕ್ಷೆ ಇದೆ.

ದೇಶದ ಒಂದು ದಿನದ ಬೇಡಿಕೆಗೆ ಸಮನಾದ ಎಲ್‌ಪಿಜಿಯನ್ನು 'ಪೈನ್ ಗ್ಯಾಸ್' ಮತ್ತು 'ಜಗ್ ವಸಂತ್' ಹೆಸರಿನ ಈ ಹಡಗುಗಳು ಹೊತ್ತು ತರುತ್ತಿವೆ. ಇವುಗಳಲ್ಲಿ ಒಟ್ಟು 92 ಸಾವಿರ ಟನ್ ಎಲ್‌ಪಿಜಿ ಇದೆ ಎಂದು ಬಂದರು, ಹಡಗು ಮತ್ತು ಜಲಸಾರಿಗೆ ಸಚಿವಾಲಯದ ವಿಶೇಷ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿನ್ಹಾ ಹೇಳಿದ್ದಾರೆ.

ಹಡಗುಗಳು ಭಾರತದ ಯಾವ ಬಂದರು ತಲುಪಲಿವೆ ಎಂಬುದನ್ನು ಅವರು ತಿಳಿಸಿಲ್ಲ. ಯುದ್ಧ ಶುರುವಾದ ನಂತರದಲ್ಲಿ ಪರ್ಷಿಯನ್ ಕೊಲ್ಲಿಯಲ್ಲಿ ಸಿಲುಕಿದ್ದ ಭಾರತದ 22 ಹಡಗುಗಳ ಪೈಕಿ ಇವೂ ಸೇರಿವೆ. 'ಅಲ್ಲಿ ಸಿಲುಕಿರುವ ಭಾರತದ ಎಲ್ಲ ಹಡಗುಗಳು ಸುರಕ್ಷಿತವಾಗಿ ಬರುವಂತೆ ಮಾಡಲು ನಾವು ಉದ್ದೇಶಿಸಿದ್ದೇವೆ' ಎಂದು ಹೇಳಿದ್ದಾರೆ.

ಸೇನಾ ವಿಮಾನ ಪತನ

ಎಎಫ್‌ಪಿ



ಕೊಲಂಬಿಯಾದ ಪೋರ್ಟೊ ಲೆಗಿಜಾಮೊದಿಂದ 125 ಜನರನ್ನು ಹೊತ್ತೊಯ್ಯುತ್ತಿದ್ದ 'ಸಿ–130 ಹರ್ಕ್ಯುಲಸ್' ಸೇನಾ ವಿಮಾನ ಸೋಮವಾರ ಪತನಗೊಂಡಿದ್ದು, 80 ಮಂದಿ ಮೃತಪಟ್ಟಿರುವ ಶಂಕೆ ಇದೆ

ಹೋಟೆಲ್‌ಗೆ ನಿತ್ಯ 10 ಸಾವಿರ ಸಿಲಿಂಡರ್

ವಿಧಾನ ಪರಿಷತ್‌ನಲ್ಲಿ ಆಹಾರ ಸಚಿವ ಮುನಿಯಪ್ಪ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳ ಪೂರೈಕೆಯನ್ನು ಶೇ 20ರಷ್ಟು ಜಾಸ್ತಿ ಮಾಡಿರುವುದರಿಂದ ರೆಸ್ಟೋರೆಂಟ್, ಡಾಬಾ, ಹೋಟೆಲ್‌ಗಳಿಗೆ ನಿತ್ಯ 10 ಸಾವಿರ ಎಲ್‌ಪಿಜಿ ಸಿಲಿಂಡರ್‌ಗಳನ್ನು ನೀಡಲಾಗುವುದು ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ತಿಳಿಸಿದರು.

ವಿಧಾನ ಪರಿಷತ್‌ನಲ್ಲಿ ಸೋಮವಾರ ಈ ಕುರಿತು ಹೇಳಿಕೆ ನೀಡಿದ ಅವರು, 'ಹೋಟೆಲ್‌ಗಳಿಗೆ 45 ಸಾವಿರ ಸಿಲಿಂಡರ್‌ಗಳ ಅಗತ್ಯವಿದೆ. ಈಗಿರುವ ಪರಿಸ್ಥಿತಿಯಲ್ಲಿ ಅಷ್ಟು ಸಂಖ್ಯೆಯಲ್ಲಿ ನೀಡಲು ಸಾಧ್ಯವಿಲ್ಲ. ಒಂದು ಸಾವಿರ ಇದ್ದ ಸಿಲಿಂಡರ್‌ಗಳ ಸಂಖ್ಯೆಯನ್ನು ಹತ್ತು ಸಾವಿರಕ್ಕೆ ಏರಿಸಿದ್ದೇವೆ. ಇದರಿಂದ ಹೋಟೆಲ್‌ಗಳಿಗೆ ಸ್ವಲ್ಪಮಟ್ಟಿಗೆ ಅನುಕೂಲವಾಗಲಿದೆ' ಎಂದರು.



'ದಿನಕ್ಕೆ ಒಟ್ಟು 16,105 ಸಿಲಿಂಡರ್‌ಗಳು ಲಭ್ಯವಾಗಲಿದ್ದು ಶಿಕ್ಷಣ ಸಂಸ್ಥೆಗಳು, ಹಾಸ್ಟೆಲ್‌ಗಳಿಗೆ 4,200 ನೀಡುತ್ತೇವೆ. ಸಾರ್ವಜನಿಕ ಉದ್ದಿಮೆಗಳು, ರೈಲ್ವೆ, ಬಸ್ ನಿಲ್ದಾಣಗಳ ಕ್ಯಾಂಟೀನ್‌ಗಳಿಗೆ 1,200 ಸಿಲಿಂಡರ್ ನೀಡಲಾಗುವುದು. ಇದಲ್ಲದೆ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳು, ಫಾರ್ಮಾಸ್ಯುಟಿಕಲ್, ಮೀನುಗಾರಿಕೆ, ರೇಷ್ಮೆ ಹಾಗೂ ಇತರೆ ಅಗತ್ಯ ವಲಯಗಳಿಗೆ ಪ್ರತ್ಯೇಕ ಆದ್ಯತೆ ನೀಡಿ 500 ಸಿಲಿಂಡರ್‌ಗಳನ್ನು ನೀಡಲಾಗುವುದು' ಎಂದರು.

ನಗರ ಪ್ರದೇಶದಲ್ಲಿ 25 ದಿನಕ್ಕೆ ಹಾಗೂ ಗ್ರಾಮಾಂತರ ಪ್ರದೇಶದಲ್ಲಿ 45 ದಿನಕ್ಕೆ ಒಂದು ಸಿಲಿಂಡರ್ ನೀಡಲಾಗುವುದು. ಸಿಲಿಂಡರ್‌ಗಳ ಪೂರೈಕೆಯನ್ನು ಹೆಚ್ಚಿಸಲು ಕೇಂದ್ರ ಸರ್ಕಾರ ಎಲ್ಲ ರೀತಿಯ ಪ್ರಯತ್ನ ನಡೆಸಿದ್ದು, ಪರಿಸ್ಥಿತಿ ಸುಧಾರಿಸುವ ವಿಶ್ವಾಸವಿದೆ ಎಂದರು.

ವಾಣಿಜ್ಯ ಬಳಕೆದಾರರ ನೋಂದಣಿ ಕಡ್ಡಾಯ

ಕಾಳಸಂತೆಯಲ್ಲಿ ಎಲ್‌ಪಿಜಿ ಸಿಲಿಂಡರ್ ಮಾರಾಟ ತಡೆಯಲು ಹಾಗೂ ಹಂಚಿಕೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ವಾಣಿಜ್ಯ ಸಿಲಿಂಡರ್ ಬಳಕೆದಾರರು ಗ್ಯಾಸ್ ಅಥಾರಿಟಿ ಆಫ್ ಇಂಡಿಯಾ ಲಿಮಿಟೆಡ್‌ನಲ್ಲಿ (ಗೇಲ್) ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು ಎಂದು ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.




ಮುನಿಯಪ್ಪ

ಆಹಾರ ನಾಗರಿಕ ಸರಬರಾಜು ನಿಗಮದ ಕಚೇರಿಯಲ್ಲಿ ಸೋಮವಾರ ಐಒಸಿ, ಎಚ್‌ಪಿಸಿಎಲ್, ಬಿಪಿಸಿಎಲ್, ಗೇಲ್ ಕಂಪನಿಗಳ ಅಧಿಕಾರಿಗಳು ಹಾಗೂ ಹೋಟೆಲ್‌ಗಳ ಸಂಘದ ಪ್ರತಿನಿಧಿಗಳ ಜತೆ ಸಭೆ ನಡೆಸಿದರು.

ಬಳಿಕ ಮಾತನಾಡಿದ ಅವರು, 'ಒಂದು ವಾರದೊಳಗೆ ನೋಂದಣಿ ಮಾಡಿಸಬೇಕು. ಇದರಿಂದ ಮುಂದಿನ ದಿನಗಳಲ್ಲಿ ಪೈಪ್‌ಲೈನ್ ಆಧಾರಿತ ಗ್ಯಾಸ್ ಪೂರೈಕೆ ವಿಸ್ತರಿಸಲು ಸಹಾಯಕವಾಗಲಿದೆ' ಎಂದರು.

ರಾಜ್ಯದ ವಿವಿಧೆಡೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ, ವಾಣಿಜ್ಯ ಉದ್ದೇಶಕ್ಕೆ ಬಳಸುತ್ತಿದ್ದ 1,448 ಗೃಹ ಬಳಕೆ ಸಿಲಿಂಡರ್‌ಗಳನ್ನು ವಶಪಡಿಸಿಕೊಂಡು, ಅಗತ್ಯ ವಸ್ತುಗಳ ಕಾಯ್ದೆ 1955 ಅಡಿ ಎಫ್‌ಐಆರ್ ದಾಖಲಿಸಿದ್ದಾರೆ ಎಂದರು.

ಚಿನಕುರುಳಿ — ಪ್ರಕಾಶ್ ಶೆಟ್ಟಿ



ಕಡೇ ದಿನ 43 ಮಂದಿ ನಾಮಪತ್ರ

ಉಪ ಚುನಾವಣೆ

ಪ್ರಜಾವಾಣಿ ವಾರ್ತೆ

ದಾವಣಗೆರೆ/ಬಾಗಲಕೋಟೆ: ಉಪ ಚುನಾವಣೆಗೆ ನಾಮಪತ್ರ ಸಲ್ಲಿಸಲು ಕಡೆಯ ದಿನವಾದ ಸೋಮವಾರ ಒಂದೇ ದಿನ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ 30, ಬಾಗಲಕೋಟೆ ಕ್ಷೇತ್ರದಲ್ಲಿ 13 ಮಂದಿ ನಾಮಪತ್ರ ಸಲ್ಲಿಸಿದರು.

ಪ್ರಮುಖ ಪಕ್ಷಗಳಾದ ಕಾಂಗ್ರೆಸ್, ಬಿಜೆಪಿ ಅಭ್ಯರ್ಥಿಗಳು ಆಯಾ ಪಕ್ಷದ ಮುಖಂಡರ ಜೊತೆಗೂಡಿ ಬಂದು ನಾಮಪತ್ರ ಸಲ್ಲಿಸಿದ್ದು, ಇದರೊಂದಿಗೆ ಉಭಯ ಕ್ಷೇತ್ರಗಳಲ್ಲಿ ಪ್ರಚಾರ ಕಾರ್ಯವು ಚುರುಕುಗೊಂಡಿತು.

ಅಂತಿಮವಾಗಿ ಒಟ್ಟಾರೆ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ 39 ಅಭ್ಯರ್ಥಿಗಳಿಂದ 45 ನಾಮಪತ್ರಗಳು, ಬಾಗಲಕೋಟೆ ಕ್ಷೇತ್ರದಲ್ಲಿ 16 ಅಭ್ಯರ್ಥಿಗಳಿಂದ 26 ನಾಮಪತ್ರಗಳು ಸಲ್ಲಿಕೆಯಾಗಿವೆ.

ನಾಮಪತ್ರಗಳ ಪರಿಶೀಲನೆ ಕಾರ್ಯ ಮಾರ್ಚ್ 24ರಂದು ನಡೆಯಲಿದ್ದು, ನಾಮಪತ್ರ ವಾಪಸು ಪಡೆಯಲು ಮಾರ್ಚ್ 26 ಕಡೆಯ ದಿನವಾಗಿದೆ.

ದಾವಣಗೆರೆ ವರದಿ: ಶಾಸಕರಾಗಿದ್ದ ಶಾಮನೂರು ಶಿವಶಂಕರಪ್ಪ ಅವರ ನಿಧನದಿಂದ ತೆರವಾಗಿರುವ ದಕ್ಷಿಣ ಕ್ಷೇತ್ರದಲ್ಲಿ ಸೋಮವಾರ ಕಾಂಗ್ರೆಸ್, ಬಿಜೆಪಿ, ಎಎಪಿ, ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಸೇರಿದಂತೆ 30 ಅಭ್ಯರ್ಥಿಗಳಿಂದ 35 ಉಮೇದುವಾರಿಕೆಗಳು ಸಲ್ಲಿಕೆಯಾಗಿವೆ. ಮಾರ್ಚ್ 20ರಂದು 9 ಹಾಗೂ ಮಾರ್ಚ್ 18ರಂದು 1 ನಾಮಪತ್ರ ಸಲ್ಲಿಕೆಯಾಗಿದ್ದವು.

ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಹಾಗೂ ಬಿಜೆಪಿ ಅಭ್ಯರ್ಥಿ ಟಿ. ಶ್ರೀನಿವಾಸ್ ದಾಸಕರಿಯಪ್ಪ ನಾಮಪತ್ರ ಸಲ್ಲಿಕೆ ವೇಳೆ ಆಯಾ ಪಕ್ಷಗಳ ಶಕ್ತಿ ಪ್ರದರ್ಶನ ನಡೆಯಿತು. ಪ್ರಮುಖ ಪಕ್ಷಗಳ ಅಭ್ಯರ್ಥಿಗಳು ನಗರದೇವತೆ ದುರ್ಗಾಂಬಿಕಾ ದೇಗುಲದಿಂದ ಅದ್ದೂರಿ ಮೆರವಣಿಗೆ ನಡೆಸಿದರು. ಆಯಾ ಪಕ್ಷಗಳ ಸಾವಿರಾರು ಕಾರ್ಯಕರ್ತರು ಪಕ್ಷದ ಬಾವುಟಗಳನ್ನು ಹಿಡಿದು ಮೆರವಣಿಗೆಯಲ್ಲಿ ಹೆಜ್ಜೆ ಹಾಕಿದರು.

ಸಮರ್ಥ್ ಶಾಮನೂರು ಉಮೇದುವಾರಿಕೆ ಸಲ್ಲಿಕೆ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಮಾಜಿ ಸಚಿವ ಎಚ್.ಆಂಜನೇಯ ಹಾಜರಿದ್ದರು. ಬಿಜೆಪಿ ಅಭ್ಯರ್ಥಿ ಟಿ. ಶ್ರೀನಿವಾಸ್ ದಾಸಕರಿಯಪ್ಪ ನಾಮಪತ್ರ ಸಲ್ಲಿಕೆಗೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ, ಮಾಜಿ ಸಚಿವ ಜಿ.ಎಂ. ಸಿದ್ದೇಶ್ವರ, ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ, ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಜೊತೆಗಿದ್ದರು. ▶7

ರಾಜ್ಯ ಮುಕ್ತ ವಿ.ವಿ ಕುಲಪತಿಗೆ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇದೇ 25ರಿಂದ 27ರವರೆಗೆ ಅಂತರರಾಷ್ಟ್ರೀಯ ಶೈಕ್ಷಣಿಕ ಸಮ್ಮೇಳನ ಆಯೋಜಿಸಿರುವ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಅವರಿಗೆ ಕಾರಣ ಕೇಳಿ ಸರ್ಕಾರ ನೋಟಿಸ್ ಜಾರಿ ಮಾಡಿದ್ದು, 24 ಗಂಟೆಯಲ್ಲಿ ಉತ್ತರ ನೀಡುವಂತೆ ಸೂಚಿಸಲಾಗಿದೆ. ಅಲ್ಲದೆ ಕಾರ್ಯಕ್ರಮ ಮುಂದೂಡಲು ಸೂಚಿಸಲಾಗಿದೆ.

ಪ್ರಜ್ಞಾ ಪ್ರವಾಹ ಮತ್ತು ಡಾ.ಶ್ಯಾಮ್ ಪ್ರಸಾದ್ ಮುಖರ್ಜಿ ಸಂಶೋಧನಾ ಪ್ರತಿಷ್ಠಾನದ ಸಹಯೋಗದಲ್ಲಿ 'ಏಕತಂ ಮಾನವ್ ದರ್ಶನ್ ಭಾರತ್ ವರ್ಲ್ಡ್‌ವ್ಯೂ' ಕುರಿತು ಸಮ್ಮೇಳನ ಆಯೋಜಿಸಿರುವ ಬಗ್ಗೆ ವಿಧಾನಪರಿಷತ್‌ನಲ್ಲಿ ಕಾಂಗ್ರೆಸ್‌ನ ರಮೇಶ್ ಬಾಬು ಅವರು ಸೋಮವಾರ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದರು. ಇದಕ್ಕೆ ಉತ್ತರಿಸಿದ ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರು ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು.

ಇದರ ಬೆನ್ನಲ್ಲೇ ಉನ್ನತ ಶಿಕ್ಷಣ ಇಲಾಖೆಯು ಕುಲಪತಿಗೆ ನೋಟಿಸ್ ನೀಡಿದ್ದು, ಲಿಖಿತ ಸಮಜಾಯಿಷಿ ನೀಡದೆ ಇದ್ದರೆ ತಮ್ಮ ವಿರುದ್ಧ ನಿಯಮಾನುಸಾರ ಶಿಸ್ತುಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ. ▶2B

ಸಾಮಾಜಿಕ ಜಾಲತಾಣ: ನಿಷೇಧಕ್ಕೆ ತಜ್ಞರ ಸಮಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ 16 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣ ಬಳಸುವುದನ್ನು ನಿಷೇಧಿಸಲು ತಜ್ಞರ ಸಮಿತಿ ರಚಿಸಿ ಮಾರ್ಗಸೂಚಿಗಳನ್ನು ರೂಪಿಸಲಾಗುವುದು. ಮುಂದಿನ ಅಧಿವೇಶನದಲ್ಲಿ ಮಸೂದೆ ಮಂಡಿಸಲಾಗುವುದು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ ಹೇಳಿದರು.



ವಿಧಾನ ಪರಿಷತ್‌ನಲ್ಲಿ ಬಿಜೆಪಿಯ ಪ್ರತಾಪ್ ಸಿಂಹ ನಾಯಕ್ ಪ್ರಶ್ನೆಗೆ ಅವರು ಸೋಮವಾರ ಉತ್ತರಿಸಿದರು. ನಿಷೇಧ ಜಾರಿ ಮಾಡುವ ಕುರಿತು ಪೋಷಕರೊಂದಿಗೂ ಚರ್ಚೆ ನಡೆಸಲಾಗುವುದು. ಮಕ್ಕಳ ಭವಿಷ್ಯ ಹಾಳಾಗಬಾರದು ಎಂಬ ಕಾಳಜಿಯಿಂದ ನಿಷೇಧಕ್ಕೆ ಮುಂದಾಗಿದ್ದು, ಬಜೆಟ್‌ನಲ್ಲಿ ಘೋಷಣೆ ಮಾಡಲಾಗಿದೆ ಎಂದರು.

ಮೊಬೈಲ್ ಬಳಕೆಯು ಮಕ್ಕಳ ಮೇಲೆ ಅಡ್ಡಪರಿಣಾಮ ಬೀರುತ್ತಿದೆ. ಇದನ್ನು ತಡೆಯುವ ಉದ್ದೇಶದಿಂದ ಜಾಲತಾಣಗಳ ಬಳಕೆ ಮೇಲೆ ನಿಷೇಧ ಹೇರುವ ಅವಶ್ಯ ಇದೆ' ಎಂದು ತಿಳಿಸಿದರು.



ಗದಗ ಜಿಲ್ಲೆ ಮುಂಡರಗಿ ತಾಲ್ಲೂಕಿನ ಸಿಂಗಟಾಲೂರು ಗ್ರಾಮದ ಈರಣ್ಣನ ಗುಡ್ಡದಲ್ಲಿ ಸೋಮವಾರ ವೀರಭದ್ರೇಶ್ವರನ ಮಹಾರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ನಡೆಯಿತು

ಕಸ ಗುತ್ತಿಗೆದಾರರ ಮೇಲೆ 'ಎಸ್ಮಾ'

ನಗರದ ಹಲವೆಡೆ ತ್ಯಾಜ್ಯ ವಿಲೇವಾರಿ ಸ್ಥಗಿತ • ಕೆಲವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಜ್ಯ ಸಂಗ್ರಹ ವಿಲೇವಾರಿ ಗುತ್ತಿಗೆದಾರರು ಮತ್ತು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳ ನಡುವಿನ ಪೈಪೋಟಿಯಿಂದ ನಗರದ ಹಲವು ಭಾಗಗಳಲ್ಲಿ ಸೋಮವಾರದಿಂದ ಕಸ ಸಂಗ್ರಹ, ವಿಲೇವಾರಿ ಸ್ಥಗಿತಗೊಂಡಿದೆ.

ಘನತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ನಿರ್ವಹಿಸದೆ 'ಎಸ್ಮಾ ಕಾಯ್ದೆ' ಉಲ್ಲಂಘಿಸಿರುವ ಗುತ್ತಿಗೆದಾರರ ಮೇಲೆ ಕ್ರಮ ಕೈಗೊಳ್ಳುವಂತೆ ಬಿಎಸ್‌ಡಬ್ಲ್ಯುಎಂಎಲ್‌ನ ಸಹಾಯಕ ಪ್ರಧಾನ ವ್ಯವಸ್ಥಾಪಕರು (ಎಜಿಎಂ) ಆಯಾ ಪೊಲೀಸ್ ಠಾಣೆಗಳಲ್ಲಿ 30ಕ್ಕೂ ಹೆಚ್ಚು ದೂರು ನೀಡಿದ್ದಾರೆ. ಕೆಲವರ ವಿರುದ್ಧ ಎಫ್‌ಐಆರ್ ಕೂಡ ದಾಖಲಾಗಿದೆ.

ತ್ಯಾಜ್ಯ ಸಂಗ್ರಹ, ಸಾಗಣೆ ಮಾಡುವ ಕಾರ್ಮಿಕರಲ್ಲಿ, ಹಲವರು ತಮ್ಮ ಮೇಲೆ ನಡೆಯುತ್ತಿರುವ ಶೋಷಣೆಯನ್ನು ವಿರೋಧಿಸಿ ಕೆಲಸಕ್ಕೆ ಹಾಜರಾಗಿಲ್ಲ. ಹೀಗಾಗಿ, ನಗರದಲ್ಲಿ ಸೋಮವಾರದಿಂದ ಹಲವು ಪ್ರದೇಶಗಳಲ್ಲಿ ಮನೆಗಳಿಂದ ತ್ಯಾಜ್ಯವನ್ನು ಸಂಗ್ರಹಿಸಿಲ್ಲ.

ಮಂಗಳವಾರದಿಂದ ಬಹುತೇಕ ಎಲ್ಲ ಕಾರ್ಮಿಕರು ಕೆಲಸದಿಂದ ಹೊರಗುಳಿಯುವುದರಿಂದ, ಕಸ ಸಂಗ್ರಹ ಹಾಗೂ ಸಾಗಣೆಯಲ್ಲಿ ಸಾಕಷ್ಟು ಸಮಸ್ಯೆಯಾಗಲಿದೆ ಎನ್ನಲಾಗಿದೆ. ಆದರೆ, ಇದಕ್ಕೆ ಪರ್ಯಾಯ ಕ್ರಮಗಳನ್ನು ಬಿಎಸ್‌ಡಬ್ಲ್ಯುಎಂಎಲ್ ಕೈಗೊಂಡಿಲ್ಲ.

ದೂರು: 'ಘನತ್ಯಾಜ್ಯದ ಪ್ರಾಥಮಿಕ ಸಂಗ್ರಹ, ಸಾಗಣೆಗೆ ನೇಮಿಸಲಾದ ಗುತ್ತಿಗೆದಾರರು, ಮನೆಗಳಿಂದ ಹಸಿ ಮತ್ತು ಒಣ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ, ಸಂಸ್ಕರಣಾ ಘಟಕ ಹಾಗೂ ಭೂ ಭರ್ತಿ ಪ್ರದೇಶಗಳಿಗೆ ಸಾಗಿಸಬೇಕು. ಇದನ್ನು ಅವರು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ ಎಂದು ದೂರಿನಲ್ಲಿ ತಿಳಿಸಲಾಗಿದೆ. ▶4

ಕಾರ್ಮಿಕರಿಗೆ ಶೋಷಣೆ: ಪ್ರತಿ ದೂರು

'ಗುತ್ತಿಗೆದಾರರಿಗೆ ನೀಡಿರುವ 'ಸರಬರಾಜು ಕಾರ್ಯಾದೇಶ'ದಂತೆ, ಪ್ರತಿನಿತ್ಯ ಮನೆಗಳಿಂದ ಕಸವನ್ನು ಪ್ರಥಮ ಹಂತದ ಸಂಗ್ರಹ, ದ್ವಿತೀಯ ಹಂತದ ಸಾಗಣೆಗೆ ವಾಹನಗಳು, ಕಾರ್ಮಿಕರನ್ನು ಒದಗಿಸಬೇಕು. ಆದರೆ, ಕಾರ್ಮಿಕರಿಂದ ಕಸವನ್ನು ಆಯಿಸಲಾಗುತ್ತಿದೆ. ಈ ಮೂಲಕ ಅವರನ್ನು ಶೋಷಿಸಲಾಗುತ್ತಿದೆ. ಇದರಿಂದ ಅವರು ಕೆಲಸಕ್ಕೆ ಬರುತ್ತಿಲ್ಲ. ಈ ಬಗ್ಗೆ ಸಂಘದ ವತಿಯಿಂದ ಜಿಬಿಎ ಮುಖ್ಯ ಆಯುಕ್ತರು, ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಅವರಿಗೆ ಮಾರ್ಚ್ 17ರಂದೇ ಪತ್ರ ಬರೆದು ತಿಳಿಸಿದ್ದೆವು. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳಲು ಮನವಿ ಮಾಡಿಕೊಂಡಿದ್ದೆವು' ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ತಿಳಿಸಿದರು.

'ಕಾರ್ಮಿಕರಿಂದ ಅಮಾನವೀಯ ಕೆಲಸ ಮಾಡಿಸಬೇಡಿ ಎಂದು ಮನವಿ ಮಾಡಿಕೊಂಡರೆ, ಎಸ್ಮಾ ಜಾರಿ ಮಾಡುತ್ತೇವೆ ಎಂದು ನಮ್ಮನ್ನು ಬೆದರಿಸ ಲಾಗುತ್ತಿದೆ.



ಕಸ ಸಂಗ್ರಹಿಸದೆ ಸಾಲುಗಟ್ಟಿ ನಿಂತಿದ್ದ ಆಟೊಗಳು

ರಸ್ತೆಯಲ್ಲಿ ಕಸವನ್ನು ನಾವು ಆಯುವುದಿಲ್ಲ ಎಂದು ಕಾರ್ಮಿಕರು ನಮ್ಮಲ್ಲಿ ಹೇಳುತ್ತಿದ್ದಾರೆ. ನಮಗೆ ಕೆಲಸ ಬೇಡವೇ ಬೇಡ ಎನ್ನುತ್ತಿದ್ದಾರೆ. ಬಿಎಸ್‌ಡಬ್ಲ್ಯು|ಎಂಎಲ್‌ನ ಸಿಇಒ ಹಾಗೂ ಸಿಒಒ ಅವರು ತಮ್ಮ ಅಧೀನದಲ್ಲಿರುವ ಅಧಿಕಾರಿಗಳನ್ನೂ ಬೆದರಿಸಿ, ದೂರು ನೀಡಿದ್ದಾರೆ. ಕಾರ್ಮಿಕರನ್ನು ಅಮಾನವೀಯವಾಗಿ ನಡೆಸಿಕೊಂಡಿರುವ ಬಗ್ಗೆ ನಾವೂ ದೂರು ನೀಡುತ್ತೇವೆ. ಆರು ತಿಂಗಳಿಂದ ಬಿಲ್ ಪಾವತಿಸಿಲ್ಲ. ಪಾವತಿಸಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದಾರೆ' ಎಂದರು.

ಪಾಲಿಕೆಗಳಿಂದಲೇ ಆಸ್ತಿ ಖರೀದಿ

ತೆರಿಗೆ ಬಾಕಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀರ್ಘಕಾಲದಿಂದ ತೆರಿಗೆ ಬಾಕಿ ಉಳಿಸಿಕೊಂಡಿರುವ ಆಸ್ತಿಗಳನ್ನು ನಗರ ಪಾಲಿಕೆಗಳೇ ಖರೀದಿಸಲಿವೆ ಎಂದು ಜಿಬಿಎ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ಹೇಳಿದರು.

ಬೇಡಿಕೆ ನೋಟಿಸ್ ಜಾರಿ, ಆಸ್ತಿ ಜಪ್ತಿ ಹಾಗೂ ಸಾರ್ವಜನಿಕ ಹರಾಜು ಮೂಲಕ ತೆರಿಗೆ ವಸೂಲಾತಿ ಸೇರಿದಂತೆ ಕಾನೂನುಬದ್ಧ ಕ್ರಮಗಳನ್ನು ಹಲವು ಬಾರಿ ಕೈಗೊಳ್ಳಲಾಗಿದೆ. ಕೆಲವು ಪ್ರಕರಣಗಳಲ್ಲಿ ಆಸ್ತಿ ಹರಾಜು ಪ್ರಕ್ರಿಯೆಯಲ್ಲಿ ಯಾರೂ ಭಾಗವಹಿಸದಿರುವುದರಿಂದ ಸಮಸ್ಯೆ ಬಗೆಹರಿದಿಲ್ಲ. ಹೀಗಾಗಿ, ಅಂತಹ ಪ್ರಕರಣಗಳಲ್ಲಿ ನಗರ ಪಾಲಿಕೆಗಳು ಮಾರ್ಗಸೂಚಿ ದರದಲ್ಲಿ ಆಸ್ತಿಗಳನ್ನು ಖರೀದಿಸಲಿವೆ ಎಂದರು.

ನಗರ ಪಾಲಿಕೆಗಳು ಆಸ್ತಿಯನ್ನು ಖರೀದಿಸುವಾಗ ಮಾರ್ಗಸೂಚಿ ದರವನ್ನಷ್ಟೇ ಪರಿಗಣಿಸಲಿವೆ. ಈ ಮೊತ್ತದಿಂದ ಎಲ್ಲಾ ಬಾಕಿ ಆಸ್ತಿ ತೆರಿಗೆ, ದಂಡ, ಬಡ್ಡಿ ಹಾಗೂ ಆಡಳಿತ ವೆಚ್ಚಗಳನ್ನು ಸಂಪೂರ್ಣವಾಗಿ ವಸೂಲಿ ಮಾಡಲಾಗುತ್ತದೆ. ಬಾಕಿ ಮೊತ್ತಗಳನ್ನು ಕಡಿತಗೊಳಿಸಿದ ನಂತರ ಉಳಿದಿರುವ ಮೊತ್ತವನ್ನು ಮೂಲ ಖಾತೆದಾರರಿಗೆ (ಆಸ್ತಿ ಮಾಲೀಕರಿಗೆ) ಬ್ಯಾಂಕ್ ವರ್ಗಾವಣೆ ಮೂಲಕ ಹಿಂತಿರುಗಿಸಲಾಗುತ್ತದೆ. ಈ ಹಂತದಲ್ಲಿಯೂ ಬಾಕಿದಾರರಿಗೆ ಒಂದು ತಿಂಗಳ ಅಂತಿಮ ಅವಧಿಯನ್ನು ನೀಡಿ, ಬಡ್ಡಿ ಸೇರಿದಂತೆ ಎಲ್ಲಾ ಬಾಕಿ ಮೊತ್ತವನ್ನು ಪಾವತಿಸಲು ಅವಕಾಶ ನೀಡಲಾಗುತ್ತದೆ. ಈ ಅವಧಿಯಲ್ಲಿ ಪಾವತಿ ಮಾಡಿದಲ್ಲಿ ಸ್ವಾಧೀನ ಕ್ರಮವನ್ನು ಹಿಂತೆಗೆದುಕೊಳ್ಳಲಾಗುತ್ತದೆ ಮತ್ತು ಆಸ್ತಿಯನ್ನು ಹಿಂತಿರುಗಿಸಲಾಗುತ್ತದೆ ಎಂದು ಮಾಹಿತಿ ನೀಡಿದರು.

25, 26ರಂದು ನಗರ ಪಾಲಿಕೆಗಳ ಬಜೆಟ್

ಜಿಬಿಎ ವ್ಯಾಪ್ತಿಯ ಐದು ನಗರ ಪಾಲಿಕೆಗಳು ತಮ್ಮ ಮೊದಲ ಬಜೆಟ್ ಮಂಡಿಸಲು ಸಜ್ಜಾಗಿವೆ. ಪೂರ್ವ ನಗರ ಪಾಲಿಕೆ ಹಾಗೂ ದಕ್ಷಿಣ ನಗರ ಪಾಲಿಕೆ ಬಜೆಟ್ ಮಾರ್ಚ್ 25ರಂದು ಮಂಡನೆಯಾಗಲಿದ್ದು, ಉತ್ತರ, ಕೇಂದ್ರ ಹಾಗೂ ಪಶ್ಚಿಮ ನಗರ ಪಾಲಿಕೆಗಳ ಬಜೆಟ್ ಮಾರ್ಚ್ 26ರಂದು ಮಂಡಿಸಲಾಗುತ್ತದೆ ಎಂದು ಜಿಬಿಎ ಮೂಲಗಳು ತಿಳಿಸಿವೆ.

2025ರ ಸೆಪ್ಟೆಂಬರ್ 2ರಂದು ಅಸ್ತಿತ್ವಕ್ಕೆ ಬಂದಿರುವ ಐದು ನಗರ ಪಾಲಿಕೆಗಳಿಗೆ ರಾಜ್ಯ ಬಜೆಟ್‌ನಲ್ಲಿ ಯಾವುದೇ ರೀತಿಯಲ್ಲೂ ಪ್ರತ್ಯೇಕ ಹಣ ಅಥವಾ ಅನುದಾನವನ್ನು ಪ್ರಕಟಿಸಿಲ್ಲ. ಆಯಾ ನಗರ ಪಾಲಿಕೆಗಳ ಆರ್ಥಿಕ ಸಾಮರ್ಥ್ಯ ಅನುಸಾರ 'ಮುನಿಸಿಪಲ್ ಬಾಂಡ್' ಮೂಲಕ ಸಂಪನ್ಮೂಲ ಕ್ರೋಡೀಕರಿಸಲು ಅನುವು ಮಾಡಿಕೊಡಲಾಗಿದೆ.

ಆಸ್ತಿ ತೆರಿಗೆ, ಜಾಹೀರಾತು, ಪಾರ್ಕಿಂಗ್ ಶುಲ್ಕ ಸೇರಿದಂತೆ ತೆರಿಗೆ, ಶುಲ್ಕಗಳೇ ನಗರ ಪಾಲಿಕೆಗಳ ಆರ್ಥಿಕ ಸಂಪನ್ಮೂಲವಾಗಿವೆ. ಈ ತೆರಿಗೆಗಳಲ್ಲಿ ಶೇ 50ರಷ್ಟನ್ನು ಸಂಗ್ರಹಿಸಲು ನಗರ ಪಾಲಿಕೆಗಳು ಆರು ತಿಂಗಳಲ್ಲಿ ವಿಫಲವಾಗಿವೆ. ಹೀಗಾಗಿ, ಆರ್ಥಿಕ ಮೂಲವನ್ನು ಬಜೆಟ್‌ನಲ್ಲಿ ನಮೂದಿಸಿ, ಅದನ್ನು ವೆಚ್ಚ ಮಾಡುವ ಬಗೆಯನ್ನು ಬಜೆಟ್‌ನಲ್ಲಿ ವಿವರಿಸುವುದೇ ಪ್ರಮುಖ ಸವಾಲಾಗಿದೆ. ಆದರೂ, ಸಾಲವನ್ನೇ ನೆಚ್ಚಿಕೊಂಡು ಬಜೆಟ್ ಮಂಡಿಸುವ ಪ್ರಯತ್ನ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.


ವಿಪಕ್ಷ ಸದಸ್ಯರ ತೀವ್ರ ವಿರೋಧ, ಸಭಾತ್ಯಾಗದ ನಡುವೆ ತಿದ್ದುಪಡಿ ಮಸೂದೆ ಅಂಗೀಕಾರ

ಇವಿಎಂ ಬದಲು 'ಮತಪತ್ರ'ಕ್ಕೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸದಸ್ಯರ ತೀವ್ರ ವಿರೋಧ, ಸಭಾತ್ಯಾಗದ ನಡುವೆಯೇ, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ವಿದ್ಯುನ್ಮಾನ ಮತಯಂತ್ರ (ಇವಿಎಂ) ಬದಲು ಮತಪತ್ರ (ಬ್ಯಾಲೆಟ್ ಪೇಪರ್) ಬಳಸಲು ಅವಕಾಶ ಕಲ್ಪಿಸುವ ಮಸೂದೆಗೆ ಸರ್ಕಾರ ಸೋಮವಾರ ವಿಧಾನಸಭೆಯ ಅಂಗೀಕಾರ ಪಡೆಯಿತು.

'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆ'ಯನ್ನು ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ ಪರ್ಯಾಲೋಚನೆಗೆ ಮಂಡಿಸಿದರು.



'ಇವಿಎಂಗಳ ಮೇಲೆ ಜನರ ವಿಶ್ವಾಸ ಕಡಿಮೆಯಾಗುತ್ತಿದೆ. ಮಹಾರಾಷ್ಟ್ರ, ಹರಿಯಾಣ ಮತ್ತು ಜಮ್ಮು-ಕಾಶ್ಮೀರ ಚುನಾವಣೆಗಳಲ್ಲೂ ಮತದಾನದ ಪ್ರಮಾಣದಲ್ಲಿ ದಿಢೀರ್ ಏರಿಕೆಯಾದ ಉದಾಹರಣೆಗಳಿವೆ. ಈ ಬಗ್ಗೆ ಕೇಂದ್ರ ಚುನಾವಣಾ ಆಯೋಗದಿಂದ ಸೂಕ್ತ ಸ್ಪಷ್ಟನೆ ಸಿಗದ ಕಾರಣ, ಚುನಾವಣೆಯಲ್ಲಿ ಪಾರದರ್ಶಕತೆ ತರಲು ಮತಪತ್ರ ಮತ್ತು ಮತಪೆಟ್ಟಿಗೆ ವ್ಯವಸ್ಥೆ ಜಾರಿಗೆ ತೀರ್ಮಾನಿಸಲಾಗಿದೆ' ಎಂದರು.

'ಮತಪತ್ರ ಕಳುವಾದರೆ ಯಾರು ಕದ್ದಿದ್ದಾರೆ ಎಂದು ಸ್ಪಷ್ಟವಾಗಿ ತಿಳಿಯುತ್ತದೆ. ಆದರೆ, ಇವಿಎಂನಲ್ಲಿ ಅದು ಅಸಾಧ್ಯ. ಪ್ರಜಾಪ್ರಭುತ್ವದ ಹಿತದೃಷ್ಟಿಯಿಂದ ಇದು ಅನಿವಾರ್ಯ' ಎಂದೂ ಸಮರ್ಥಿಸಿದರು.

ತೀವ್ರ ಆಕ್ಷೇಪ ವ್ಯಕ್ತಪಡಿಸಿದ ವಿರೋಧ ಪಕ್ಷದ ನಾಯಕ ಆರ್. ಅಶೋಕ, 'ಕಾಂಗ್ರೆಸ್ ನಾಯಕರು ತಮ್ಮ ಸೋಲಿಗೆ ನೈಜ ಕಾರಣ ಹುಡುಕುತ್ತಿಲ್ಲ. ಬೀಗವನ್ನು ಕಳೆದುಕೊಂಡ ಜಾಗದಲ್ಲಿ ಹುಡುಕದೆ ಬೇರೆಡೆ ಹುಡುಕುವ ಕೆಲಸ ಮಾಡುತ್ತಿದ್ದಾರೆ. ಮಸೂದೆ ವಾಪಸ್ ಪಡೆಯಬೇಕು' ಎಂದು ಆಗ್ರಹಿಸಿದರು.

ಬಿಜೆಪಿಯ ವಿ. ಸುನಿಲ್ ಕುಮಾರ್, 'ಮತ್ತೆ ಹಳೆ ವ್ಯವಸ್ಥೆಗೆ ಮರಳುವುದರ ಹಿಂದೆ ಆಡಳಿತ ಯಂತ್ರವನ್ನು ದುರುಪಯೋಗಪಡಿಸಿಕೊಳ್ಳುವ ಬಹುದೊಡ್ಡ ಹುನ್ನಾರ ಅಡಗಿದೆ' ಎಂದು ಕಿಡಿಕಾರಿದರು.

ಬಿಜೆಪಿಯ ಎಸ್. ಸುರೇಶ್ ಕುಮಾರ್, 'ಇದು ಉತ್ತರ ಪ್ರದೇಶದ ಅಮೇಥಿ ಕ್ಷೇತ್ರಕ್ಕೆ ಅನುಕೂಲವಾಗುವಂತೆ ತಂದಿರುವ ಮಸೂದೆ. ಸಿಲಿಕಾನ್ ಸಿಟಿಗೆ ಬಗೆಯುತ್ತಿರುವ ದ್ರೋಹ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾನೂನು ಸಚಿವ ಎಚ್.ಕೆ. ಪಾಟೀಲ, 'ಹಿಂದೆ ಸಭಾಧ್ಯಕ್ಷರಾಗಿದ್ದ ವಿಶ್ವೇಶ್ವರ ಹೆಗಡೆ ಕಾಗೇರಿ ಕೂಡ ಇವಿಎಂ ವಿಶ್ವಾಸಾರ್ಹತೆ ಕಳೆದುಕೊಂಡಿದೆ ಎಂದು ಚುನಾವಣಾ ಆಯೋಗಕ್ಕೆ ಸುದೀರ್ಘ ಪತ್ರ ಬರೆದಿದ್ದರು. ಎಥಿಕಲ್ ಹ್ಯಾಕಿಂಗ್ ಕುರಿತು ಚುನಾವಣಾ ಆಯೋಗಕ್ಕೂ ಮನವಿ ಮಾಡಲಾಗಿತ್ತು' ಎಂದರು. ▶4

> ಮತಪತ್ರದ ಗೋಪ್ಯತೆ ಖಚಿತಪಡಿಸಿಕೊಳ್ಳಲು, ಮತದಾರರನ್ನು ದಬ್ಬಾಳಿಕೆ, ಬೆದರಿಕೆ, ಅನಗತ್ಯ ಪ್ರಭಾವದಿಂದ ರಕ್ಷಿಸಿ ಪ್ರಜಾಪ್ರಭುತ್ವದ ಪಾವಿತ್ರ್ಯ ಸಂರಕ್ಷಿಸಲು ಮಸೂದೆ ಅನಿವಾರ್ಯ
> **ಪ್ರಿಯಾಂಕ್ ಖರ್ಗೆ,** ಗ್ರಾಮೀಣಾಭಿವೃದ್ಧಿ ಸಚಿವ

> ಇದು ತುಘಲಕ್ ದರ್ಬಾರ್. ಕರ್ನಾಟಕದಲ್ಲಿ, ತೆಲಂಗಾಣದಲ್ಲಿ ಇವಿಎಂ ಸರಿ ಇತ್ತು. ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ಪಲ್ಟಿ ಹೊಡೆದಾಗ ಈ ಚರ್ಚೆ ಆರಂಭವಾಯಿತು
> **ಆರ್. ಅಶೋಕ,** ವಿರೋಧ ಪಕ್ಷದ ನಾಯಕ

ಮರ್ಯಾದೆಗೇಡು ಹತ್ಯೆ ತಡೆ ಮಸೂದೆಗೆ ಒಪ್ಪಿಗೆ

ಜಾತಿ ಮೀರಿ ಪ್ರೀತಿಸುವ, ವಿವಾಹ ಆದವರನ್ನು ಮರ್ಯಾದೆ ಹೆಸರಿನಲ್ಲಿ ಹಲ್ಲೆ, ಹತ್ಯೆ ಮಾಡುವವರನ್ನು, ಬಹಿಷ್ಕರಿಸುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವ ಉದ್ದೇಶದ 'ಇವ ನಮ್ಮವ, ಇವ ನಮ್ಮವ' ಹೆಸರಿನ 'ಕರ್ನಾಟಕ ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ಮಸೂದೆ ವಿಧಾನಸಭೆಯಲ್ಲಿ ಅಂಗೀಕಾರವಾಯಿತು.

ಮಸೂದೆಯನ್ನು ಪರ್ಯಾಲೋಚನೆಗೆ ಮಂಡಿಸಿದ ಕಾನೂನು ಸಚಿವ ಎಚ್.ಕೆ ಪಾಟೀಲ, 'ಅನ್ಯ ಜಾತಿಗಳ, ಧರ್ಮದ ಯುವಕ, ಯುವತಿಯರು ಪ್ರೀತಿಸಿ ಮದುವೆಯಾಗುತ್ತಾರೆ. ಅವರಿಗೆ ಮದುವೆಯ ಸ್ವಾತಂತ್ರ್ಯ ನೀಡಬೇಕು. ಆದರೆ, ಕೆಲವರು ಮರ್ಯಾದೆಗೇಡು ಹತ್ಯೆ ಮಾಡುವ ಕೆಲಸ ಮಾಡುತ್ತಿದ್ದಾರೆ. ಅದನ್ನು ತಡೆಯಲು ಮಸೂದೆ ರೂಪಿಸಲಾಗಿದೆ' ಎಂದರು. ▶4

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದೆ.

‘ಬೂತ್‌ವಾರು ಎಣಿಕೆ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ಚುನಾವಣೆಯ ಮತ ಎಣಿಕೆಯಲ್ಲಿ ರಾಜ್ಯದ ಎಲ್ಲ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳ ಮತಪತ್ರಗಳನ್ನು ಮಿಶ್ರಣ ಮಾಡಿ ಎಣಿಕೆ ಪ್ರಕ್ರಿಯೆ ನಡೆಸಬೇಕು, ಬೂತ್‌ವಾರು ನಡೆಸಬಾರದು’ ಎಂದು ಅಭ್ಯರ್ಥಿಯೂ ಆದ ಹೈಕೋರ್ಟ್ ವಕೀಲ ಆರ್.ಹೇಮಂತ ರಾಜು ಮನವಿ ಮಾಡಿದ್ದಾರೆ.

ಈ ಕುರಿತಂತೆ ಚುನಾವಣಾ ಅಧಿಕಾರಿ ನಿವೃತ್ತ ಹೈಕೋರ್ಟ್ ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ಅವರಿಗೆ ಪತ್ರ ಬರೆದಿದ್ದಾರೆ. ‘ಆಯಾ ತಾಲ್ಲೂಕು ಮತ್ತು ಜಿಲ್ಲಾ ಕೇಂದ್ರಗಳ ಬೂತ್ ಮತಪತ್ರಗಳನ್ನು ಪ್ರತ್ಯೇಕಿಸಿ ಎಣಿಕೆ ಮಾಡಬಾರದು. ಇದರಿಂದ ಸಂಸ್ಥೆಯಲ್ಲಿ ಸ್ವಜನಪಕ್ಷಪಾತವನ್ನು ಉತ್ತೇಜಿಸಿದಂತಾಗುತ್ತದೆ’ ಎಂದು ಹೇಳಿದ್ದಾರೆ.

‘ಭಾರತೀಯ ವಕೀಲರ ಪರಿಷತ್ ಅಧ್ಯಾಯ 5ರ ಉಪನಿಯಮ 10 (ಡಿ) ಅಡಿಯಲ್ಲಿ ವಿವರಿಸಿರುವಂತೆ, ಎಲ್ಲ ಮತಪತ್ರಗಳನ್ನು ಮಿಶ್ರಣ ಮಾಡಿ ಎಣಿಕೆ ಪ್ರಕ್ರಿಯೆ ನಡೆಸಬೇಕು’ ಎಂದಿದ್ದಾರೆ.

ರಾಜ್ಯ ವಕೀಲರ ಪರಿಷತ್‌ಗೆ ಇದೇ 11ರಂದು ಚುನಾವಣೆ ನಡೆದಿದ್ದು, ಮತ ಎಣಿಕೆ ಸೋಮವಾರ(ಮಾ.23) ಆರಂಭವಾಗಿದೆ.

ಕಿರು ನಾಟಕ ಸ್ಪರ್ಧೆ ವಿಜೇತರಿಗೆ ಬಹುಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸೂರ್ಯ ಕಲಾವಿದರು’ ಸೂರ್ಯ ಕಲೋತ್ಸವ–2026 ಅಂಗವಾಗಿ ಆಯೋಜಿಸಿದ್ದ ಕಿರು ನಾಟಕ ಸ್ಪರ್ಧೆಯಲ್ಲಿ ಜ್ಞಾತ ಪರ್ವ ನಾಟಕಕ್ಕೆ ಮೊದಲ ಬಹುಮಾನ ಲಭಿಸಿದೆ.

ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ನಡೆದ ಸಮಾರಂಭದಲ್ಲಿ ಕಿರು ನಾಟಕ ಸ್ಪರ್ಧೆಯ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು.

ಪ್ರಶಸ್ತಿ ಫಲಕ ಹಾಗೂ ₹20 ಸಾವಿರವನ್ನು ಮೊದಲ ತಂಡಕ್ಕೆ ನೀಡಲಾಯಿತು. ‘ಮಾಯಾಮೃಗ’ ಹಾಗೂ ‘ದಲಿಯನ ಡೋಲು’ ನಾಟಕಗಳ ತಂಡಗಳಿಗೆ ₹10 ಸಾವಿರ ನಗದು ಬಹುಮಾನ ಹಂಚಿಕೆ ಮಾಡಲಾಯಿತು.

ನಟ ಗಿರಿಜಾ ಲೋಕೇಶ್, ಬಾಬು ಹಿರಣ್ಣಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಚಂದ್ರಶೇಖರ್, ನ್ಯಾಚುರಲ್ ಮಾಲೀಕರಾದ ಚಂದ್ರಶೇಖರ್, ಸೂರ್ಯ ತಂಡದ ಅಧ್ಯಕ್ಷ ಸಂಜಯ ಸೂರಿ, ಕಾರ್ಯದರ್ಶಿ ವಿಕ್ರಮ ಸೂರಿ, ಉತ್ಸವ ಸಂಚಾಲಕಿ ನಮಿತಾ ರಾವ್ ಉಪಸ್ಥಿತರಿದ್ದರು.

ಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ‘ಜ್ಞಾತ ಪರ್ವ’ ನಾಟಕದ ಪ್ರದರ್ಶನ ಏರ್ಪಡಿಸಲಾಗಿತ್ತು.



‘ಸೂರ್ಯ ಕಲಾವಿದರ ತಂಡ’ ಆಯೋಜಿಸಿದ್ದ ಕಿರು ನಾಟಕ ಸ್ಪರ್ಧೆಯಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಲಾಯಿತು



ಅಖಿಲ ಕರ್ನಾಟಕ ರೈತರ ಮತ್ತು ವ್ಯಾಪಾರಿಗಳ ಒಕ್ಕೂಟದ ಕಾರ್ಯಕರ್ತರು ಗೋಣಿಚೀಲ ತೊಟ್ಟು ಕಾಲ್ನಡಿಗೆ ಜಾಥಾ ನಡೆಸಿದರು

ಗೋಣಿ ಚೀಲ ತೊಟ್ಟು ಕಾಲ್ನಡಿಗೆ ಜಾಥಾ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರೋಲ್ ಕಾಲ್ ವಸೂಲಿ ತಡೆಗಟ್ಟಿ, ಒತ್ತುವರಿಯಾದ ರಸ್ತೆಯನ್ನು ತೆರವುಗೊಳಿಸುವಂತೆ ಒತ್ತಾಯಿಸಿ ಅಖಿಲ ಕರ್ನಾಟಕ ರೈತರ ಮತ್ತು ವ್ಯಾಪಾರಿಗಳ ಒಕ್ಕೂಟದ ಕಾರ್ಯಕರ್ತರು ಗೋಣಿಚೀಲ ತೊಟ್ಟು ಕೆ.ಆರ್.ಪುರದ ಸಂತೆ ಮೈದಾನದಿಂದ ಸಂಚಾರಿ ಉಪ ಆಯುಕ್ತರ ಕಚೇರಿವರೆಗೂ ಕಾಲ್ನಡಿಗೆ ಜಾಥಾ ನಡೆಸಿದರು.

‘ಒಂದು ವರ್ಷದಿಂದ ಕೆ.ಆರ್.ಪುರ ಸಂತೆ ಮುಂಭಾಗದಲ್ಲಿ ರಾತ್ರಿ ಒಂದು ಗಂಟೆಯಿಂದ ಬೆಳಗಿನ ಜಾವ ಎಂಟು ಗಂಟೆವರೆಗೂ ಹಲವು ವ್ಯಾಪಾರಿಗಳು ರಸ್ತೆಯ ಮುಕ್ಕಾಲು ಭಾಗದವರೆಗೂ ರಾಷ್ಟ್ರೀಯ ಹೆದ್ದಾರಿ ರಸ್ತೆಯನ್ನು ಮುಚ್ಚಿ ವಾಹನ ದಟ್ಟಣೆಗೆ ಕಾರಣರಾಗಿರುತ್ತಿದ್ದಾರೆ. ಈ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿದ್ದು, ಸಂತೆಯ ಮುಂಭಾಗದಿಂದ ಪೂರ್ವ ಭಾಗದ ಜಿ.ಬಿ.ಎ ಪಾಲಿಕೆ ಕಚೇರಿವರೆಗೂ ವ್ಯಾಪಾರಸ್ಥರು ಅಕ್ರಮವಾಗಿ ಅಂಗಡಿಗಳನ್ನು ಹಾಕಿಕೊಂಡು ಆಂಬುಲೆನ್ಸ್ ವಾಹನಗಳು ಮತ್ತು ಶಾಲಾ ಮಕ್ಕಳ ವಾಹನಗಳಿಗೂ ರಸ್ತೆಯನ್ನು ಬಿಡುವುದಿಲ್ಲ’ ಎಂದು ಪ್ರತಿಭಟನಕಾರರು ಆರೋಪಿಸಿದರು.

‘ಸುಂಕದ ಹೆಸರಿನಲ್ಲಿ ರಸ್ತೆಯಲ್ಲಿ ನಿಲ್ಲಿಸಿರುವ ವಾಹನಗಳಿಗೆ ₹1,000 ಹಾಗೂ ಅಂಗಡಿ ಹಾಕಿಕೊಂಡವರ ಬಳಿ ₹300 ಹಣವನ್ನು ಅಕ್ರಮವಾಗಿ ವಸೂಲಿ ಮಾಡುತ್ತಿದ್ದಾರೆ. ಈ ಬಗ್ಗೆ ಸಂಬಂಧ ಪಟ್ಟ ಇಲಾಖೆಗಳು, ಸಂಚಾರ ಹಾಗೂ ಕಾನೂನು ಸುವ್ಯವಸ್ಥೆ ಠಾಣೆಯಲ್ಲಿ ದೂರು ದಾಖಲಿಸಿದ್ದರು ಯಾವುದೇ ಪ್ರಯೋಜವಾಗಿಲ್ಲ’ ಎಂದು ಅಖಿಲ ಕರ್ನಾಟಕ ರೈತರ ಮತ್ತು ವ್ಯಾಪಾರಿಗಳ ಒಕ್ಕೂಟದ ಅಧ್ಯಕ್ಷ ಎಲೆ ಶ್ರೀನಿವಾಸ್ ದೂರಿದರು.

‘ಪೊಲೀಸರಿಗೆ ದುಡ್ಡು ನೀಡುತ್ತಿದ್ದೇವೆ ನಮ್ಮನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದು ಹೇಳಿಕೊಂಡು ಕಿಡಿಗೇಡಿಗಳು ಓಡಾಡುತ್ತಿದ್ದಾರೆ. ಇಂತಹವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.

ಬೀದಿಬದಿ ವ್ಯಾಪಾರಿಗಳ ಸಂಘದ ಅಧ್ಯಕ್ಷ ಸಿ.ವಿ.ಶಿವಶಂಕರ್, ಒಕ್ಕೂಟದ ಪದಾಧಿಕಾರಿಗಳಾದ ಆರ್.ಕುಮಾರ್, ವಿನೋದ್ ಕುಮಾರ್, ಶ್ರೀನಿವಾಸ್ ಉಪಸ್ಥಿತರಿದ್ದರು.

ಜೀವಂತ ವ್ಯಕ್ತಿಗೆ ಮರಣ ಪ್ರಮಾಣಪತ್ರ!

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿರುದ್ಧ ಹೈಕೋರ್ಟ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜೀವಂತವಾಗಿರುವ ವ್ಯಕ್ತಿಯೊಬ್ಬರಿಗೆ ಅವರ ಹೆಸರಿನಲ್ಲಿ ತಪ್ಪಾಗಿ ನೀಡಲಾಗಿರುವ ಮರಣ ಪ್ರಮಾಣಪತ್ರವನ್ನು ಸಕ್ಷಮ ಪ್ರಾಧಿಕಾರದ ಅಧಿಕಾರಿಗಳು ರದ್ದು ಮಾಡುತ್ತಿಲ್ಲ' ಎಂಬ ವಕೀಲರ ಅಹವಾಲಿಗೆ, ಜಿಬಿಎ (ಗ್ರೇಟರ್ ಬೆಂಗಳೂರು ಪ್ರಾಧಿಕಾರ) ವಿರುದ್ಧ ಹೈಕೋರ್ಟ್ ಕಿಡಿ ಕಾರಿದೆ.



ಈ ಸಂಬಂಧ ಆರ್.ಟಿ.ನಗರದ ಡಿ.ಮೆಹಬೂಬ್ ಬಾಷ (40) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಸೋಮವಾರ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಚಿನ್ ಮಗದುಂ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರರ ಹೆಸರಿನಲ್ಲಿ ನೀಡಲಾಗಿರುವ ಮರಣ ಪ್ರಮಾಣ ಪತ್ರವನ್ನು ಇದೇ 25ರೊಳಗೆ ರದ್ದುಪಡಿಸಿ ಅದರ ಹಿಂಬರಹವನ್ನು ನ್ಯಾಯಾಲಯಕ್ಕೆ ಸಲ್ಲಿಸಬೇಕು' ಎಂದು ಜಿಬಿಎ, ಜನನ ಮತ್ತು ಮರಣ ನೋಂದಣಾಧಿಕಾರಿಗೆ ತಾಕೀತು ಮಾಡಿದೆ.

ಮುಖ್ಯಾಂಶಗಳು
- ಮರಣಪತ್ರ ವಿತರಿಸಿದ ಕಾರಣ 3ಂಗಳ ಪಡಿತರ ಪಡೆಯಲು ಸಂಕಷ್ಟ
- ಹೈಕೋರ್ಟ್ ಮೆಟ್ಟಿಲೇರಿದ್ದ ಬಾಷ
- 25ರೊಳಗೆ ರದ್ದುಪಡಿಸಿ, ಹಿಂಬರಹ ನೀಡಿ: ಸೂಚನೆ

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ಅಶ್ವಿನಿ ಓಬಳೇಶ್, 'ಅರ್ಜಿದಾರರು ಜೀವಂತವಾಗಿದ್ದರೂ ಅವರ ಹೆಸರಿನಲ್ಲಿ ಮರಣ ಪ್ರಮಾಣಪತ್ರ ವಿತರಿಸಲಾಗಿದೆ. ಅವರ ಆಧಾರ್ ಕಾರ್ಡ್, ಪಾನ್ ಕಾರ್ಡ್ ಸಂಖ್ಯೆ ಇತರೆ ದಾಖಲೆಗಳ ಜೊತೆ ತಳಕು ಹಾಕಿಕೊಂಡಿರುವ ಕಾರಣ ತಿಂಗಳ ಪಡಿತರ ಪಡೆಯಲೂ ಸಾಧ್ಯವಾಗುತ್ತಿಲ್ಲ' ಎಂದರು.

ಇದಕ್ಕೆ ಸರ್ಕಾರದ ಪರ ವಕೀಲ ಆದಿತ್ಯ, 'ಸಮಸ್ಯೆಯನ್ನು ಪರಿಹರಿಸಲಾಗುವುದು' ಎಂದರು. ವಾದ–ಪ್ರತಿವಾದ ಆಲಿಸಿದ ನ್ಯಾಯಪೀಠ, 'ಮರಣ ಪ್ರಮಾಣಪತ್ರ ನೀಡಿರುವುದನ್ನು ರದ್ದುಪಡಿಸುವಂತೆ ಕಳೆದ ವರ್ಷವೇ ಆದೇಶಿಸಲಾಗಿದೆ. ಆದರೂ ಇದನ್ನು ಪಾಲಿಸದೇ ಇರುವ ಅಧಿಕಾರಿಗಳಿಗೆ ಏಕೆ ದಂಡ ವಿಧಿಸಬಾರದು' ಎಂದು ಸರ್ಕಾರವನ್ನು ಪ್ರಶ್ನಿಸಿತು.

ಪ್ರತಿವಾದಿಗಳಾದ ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಜಿಬಿಎ ಜನನ ಮತ್ತು ಮರಣ ನೋಂದಣಾಧಿಕಾರಿ, ಕಿದ್ವಾಯಿ ಸ್ಮಾರಕ ಆಸ್ಪತ್ರೆ ಆಡಳಿತಾಧಿಕಾರಿ, ಚಿಕ್ಕಪೇಟೆ ವೈದ್ಯಾಧಿಕಾರಿ ಮತ್ತು ಜಿಬಿಎ ಸಾಂಖ್ಯಿಕ ವಿಭಾಗದ ಜಂಟಿ ನಿರ್ದೇಶಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 25ಕ್ಕೆ ಮುಂದೂಡಿತು.

ಅರ್ಜಿದಾರರ ವಾದ: 'ನನ್ನ ಷಡ್ಡಕ ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿದ್ದರು. ಈ ವೇಳೆ ಅವರು ಆಸ್ಪತ್ರೆಯ ದಾಖಲೆಗಳಿಗೆ ಅಗತ್ಯವಾದ ಆಧಾರ್ ಕಾರ್ಡ್ ನೀಡುವಾಗ ನನ್ನ ಆಧಾರ್ ಕಾರ್ಡ್ ಒದಗಿಸಿದ್ದರು. ನಂತರ ಅವರ ಮೃತಪಟ್ಟ ಕಾರಣ ಅಧಿಕಾರಿಗಳು ನನ್ನ ಹೆಸರಿನಲ್ಲೇ ಮರಣ ಪ್ರಮಾಣ ಪತ್ರ ದಾಖಲಿಸಿದ್ದಾರೆ' ಎಂಬುದು ಅರ್ಜಿದಾರರ ವಾದ.

ನೈಸ್ ಸಂಪರ್ಕ ರಸ್ತೆ ಸಂಚಾರಕ್ಕೆ ಮುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು–ಮೈಸೂರು ರಸ್ತೆಯ ದೀಪಾಂಜಲಿ ನಗರ ಜಂಕ್ಷನ್ ಬಳಿ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್) ಅಭಿವೃದ್ಧಿಪಡಿಸಿದ 1.5 ಕಿ.ಮೀ. ಸಂಪರ್ಕ ರಸ್ತೆಯನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ.

ನೈಸ್ ಸಂಪರ್ಕ ರಸ್ತೆ ಸಂಚಾರಕ್ಕೆ ಚಾಲನೆ ನೀಡಿರುವುದರಿಂದ ನಾಲ್ಕು ಪಥದ ರಸ್ತೆ ಇರುವ ದೀಪಾಂಜಲಿ ನಗರ ಜಂಕ್ಷನ್‌ನಿಂದ ಹೊಸಕೆರೆಹಳ್ಳಿ ಪಿಇಎಸ್ ಕಾಲೇಜು ಬಳಿಯ ನೈಸ್ ರಸ್ತೆಗೆ ನೇರ ಸಂಪರ್ಕ ಕಲ್ಪಿಸುತ್ತದೆ. ಜತೆಗೆ ಚಲ್ಲಘಟ್ಟ ಹಾಗೂ ಪಕ್ಕದ ಪ್ರದೇಶಗಳಿಗೆ ಸಂಚಾರ ಸುಗಮಗೊಳಿಸಿ ದಟ್ಟಣೆ ತಗ್ಗುವ ನಿರೀಕ್ಷೆ ಇದೆ.

ಮೈಸೂರು ರಸ್ತೆ, ವಿಜಯನಗರ, ಸ್ಯಾಟಲೈಟ್ ಬಸ್ ನಿಲ್ದಾಣ ಭಾಗದಿಂದ ನೈಸ್ ರಸ್ತೆಗೆ ಸಂಪರ್ಕ ಸಾಧಿಸಲು ಮಾತ್ರವಲ್ಲದೆ ಬನಶಂಕರಿ, ಶ್ರೀನಗರ ಕಡೆ ಸಂಚರಿಸುವವರಿಗೂ ಅನುಕೂಲವಾಗಲಿದೆ. ನಾಲ್ಕು ಪಥದ ರಸ್ತೆಯು ದೀಪಾಂಜಲಿ ನಗರ ಜಂಕ್ಷನ್ (ಬಿಎಚ್‌ಇಎಲ್ ವೃತ್ತವನ್ನು) ಹೊಸಕೆರೆಹಳ್ಳಿಯ ಪಿಇಎಸ್ ಕಾಲೇಜು ಬಳಿಯ ನೈಸ್ ರಸ್ತೆಗೆ ನೇರವಾಗಿ ಸಂಪರ್ಕಿಸುತ್ತಿದ್ದು, ಪ್ರಯಾಣಿಕರಿಗೆ ಪ್ರಯೋಜನವಾಗಲಿದೆ.



ದೀಪಾಂಜಲಿ ನಗರ ಜಂಕ್ಷನ್ ಬಳಿ ನಂದಿ ಇನ್ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್) ಅಭಿವೃದ್ಧಿಪಡಿಸಿದ 1.5 ಕಿ.ಮೀ. ಸಂಪರ್ಕ ರಸ್ತೆಯನ್ನು ಸಂಚಾರಕ್ಕೆ ಮುಕ್ತಗೊಳಿಸಲಾಗಿದೆ –ಪ್ರಜಾವಾಣಿ ಚಿತ್ರ ಪುಷ್ಕರ್ ವಿ

ಈ ರಸ್ತೆ ಯೋಜನೆ ಕಾಮಗಾರಿಯ ಭೂಸ್ವಾಧೀನ ಕಾರ್ಯ ನಿಧಾನಗತಿಯಲ್ಲಿ ಸಾಗಿದ್ದರಿಂದ ಸಂಚಾರ ದಟ್ಟಣೆ ತೀವ್ರಗೊಂಡು ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿತ್ತು. ನಾಯಂಡಹಳ್ಳಿ, ಆರ್.ಆರ್.ನಗರ, ಜ್ಞಾನಭಾರತಿ ಮತ್ತು ಪಟ್ಟಣಗೆರೆ ಮುಂತಾದ ಪ್ರಮುಖ ಜಂಕ್ಷನ್‌ಗಳಲ್ಲಿ ವಿಶೇಷವಾಗಿ ಸಿಗ್ನಲ್‌ಗಳಲ್ಲಿ ಸಂಚಾರ ದಟ್ಟಣೆ ಹೆಚ್ಚಿತ್ತು.

ದೀಪಾಂಜಲಿ ನಗರದಿಂದ 11 ಕಿ.ಮೀ. ದೂರದಲ್ಲಿ ಪ್ರಯಾಣಿಸುವ ವಾಹನ ಸವಾರರು ಹೊಸ ಸಂಪರ್ಕ ರಸ್ತೆ ಮೂಲಕ ಚಲಘಟ್ಟಕ್ಕೆ ಪ್ರಯಾಣಿಸುವ ಸಮಯ ಸುಮಾರು ಅರ್ಧ ತಾಸು ಕಡಿಮೆ ಆಗಬಹುದು ಎಂದು ಅಂದಾಜಿಸಲಾಗಿದೆ. ಈ ಸಂಪರ್ಕ ರಸ್ತೆಯು ನಿರ್ಣಾಯಕ ಜಂಕ್ಷನ್‌ಗಳಲ್ಲಿ ಜನದಟ್ಟಣೆ ಕಡಿಮೆ ಮಾಡುವ ಮತ್ತು ನೈಸ್ ರಸ್ತೆಗೆ ನೇರ ಪ್ರವೇಶ ಒದಗಿಸುವ ಉದ್ದೇಶ ಹೊಂದಿದೆ.

ಮುಖ್ಯಾಂಶಗಳು
- ದೀಪಾಂಜಲಿ ನಗರ ಜಂಕ್ಷನ್‌ನಿಂದ ಪಿಇಎಸ್ ಕಾಲೇಜು ಬಳಿ ಸಂಪರ್ಕ
- ಚಲ್ಲಘಟ್ಟ, ಪಕ್ಕದ ಪ್ರದೇಶಗಳಿಗೆ ಸುಗಮ ಸಂಚಾರ ನಿರೀಕ್ಷೆ

ಇಂದಿನಿಂದ ರಾಜ್ಯ ಯುವ ಪಾರ್ಲಿಮೆಂಟ್

ಬೆಂಗಳೂರು: ಕೇಂದ್ರ ಯುವಜನ ಸೇವಾ ಇಲಾಖೆಯ ಮೇರಾ ಯುವ ಭಾರತ್ ಸಂಘಟನೆಯಿಂದ ಕೇಂದ್ರ ಬಜೆಟ್–2026 ಕುರಿತು ಮಾರ್ಚ್ 24ರಿಂದ ಎರಡು ದಿನ ವಿಕಸಿತ ಭಾರತ್ ಕರ್ನಾಟಕ ರಾಜ್ಯ ಯುವ ಪಾರ್ಲಿಮೆಂಟ್ ಹಮ್ಮಿಕೊಳ್ಳಲಾಗಿದೆ.

ಈಗಾಗಲೇ ರಾಜ್ಯದ ವಿವಿಧ ಜಿಲ್ಲಾ ಕೇಂದ್ರಗಳಲ್ಲಿ ಆಯೋಜಿಸಲಾಗಿದ್ದ ಸ್ಪರ್ಧೆಯಲ್ಲಿ ವಿಜೇತರಾದ ಪ್ರತಿ ಜಿಲ್ಲೆಯ ಐವರು ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಭಾಗಿಯಾಗುವರು. ಇಲ್ಲಿ ಮೊದಲ ಮೂರು ಸ್ಥಾನ ಪಡೆದು ಆಯ್ಕೆಯಾದವರು ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ಭಾಗಿಯಾಗುವರು ಎಂದು ಮೈ ಭಾರತ್ ಸಂಘಟನೆಯ ರಾಜ್ಯ ನಿರ್ದೇಶಕ ಅಶೋಕ ಕುಮಾರ್ ದಾಸ್ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಾರ್ಚ್ 24ರ ಬೆಳಿಗ್ಗೆ 10ರಿಂದಲೇ ಚಟುವಟಿಕೆಗಳು ಶುರುವಾಗಲಿವೆ. 11.30ಕ್ಕೆ ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ವಿಕಸಿತ ಭಾರತ್ ಕರ್ನಾಟಕ ರಾಜ್ಯ ಯುವ ಪಾರ್ಲಿಮೆಂಟ್‌ಗೆ ಚಾಲನೆ ನೀಡುವರು. ಮಾಜಿ ಸಚಿವ ಪಿ.ಜಿ.ಆರ್.ಸಿಂಧ್ಯ, ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇ ಪಿ.ಕೃಷ್ಣ, ಯುವಜನ ಸೇವಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ನವೀನ್ ರಾಜ್ ಸಿಂಗ್ ಅತಿಥಿಗಳಾಗಿ ಭಾಗವಹಿಸುವರು ಎಂದರು.

ಸಮೀಕ್ಷಾ ರೆಡ್ಡಿ ಸಾವು: ಡಿಸಿಎಫ್ ಅಮಾನತಿಗೆ ಒತ್ತಾಯ

ಕರ್ನಾಟಕ ಪಶುವೈದ್ಯಾಧಿಕಾರಿಗಳ ಪ್ರತಿಭಟನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗದ ತ್ಯಾವರೆ ಕೊಪ್ಪ ಸಿಂಹಧಾಮದಲ್ಲಿ ಕರ್ತವ್ಯದ ವೇಳೆ ಮೃತಪಟ್ಟ ವನ್ಯಜೀವಿ ಪಶುವೈದ್ಯೆ ಡಾ.ಸಮೀಕ್ಷಾ ರೆಡ್ಡಿ ಅವರಿಗೆ ಬೆಂಬಲ ಸೂಚಿಸಿ ಕರ್ನಾಟಕ ಪಶುವೈದ್ಯಾಧಿಕಾರಿಗಳ ಸಂಘದಿಂದ ಮಾರ್ಚ್ 24ರಂದು ಕಪ್ಪು ಕಟ್ಟಿ ಧರಿಸಿ ಪ್ರತಿಭಟನೆ ನಡೆಸಲಾಗುತ್ತದೆ.

'ತಡರಾತ್ರಿಯಲ್ಲಿ ನೀರಾನೆಗೆ ಚಿಕಿತ್ಸೆ ನೀಡುವ ಅವಶ್ಯಕತೆ ಇರಲಿಲ್ಲ. ನಿರ್ಲಕ್ಷ್ಯ ವಹಿಸಿ ಸಮೀಕ್ಷಾ ಸಾವಿಗೆ ಕಾರಣವಾದ ಉಪ ಸಂರಕ್ಷಣಾಧಿಕಾರಿ ವಿ.ಎಂ. ಅಮರಾಕ್ಷರ್ ಅವರನ್ನು ಅಮಾನತು ಮಾಡಬೇಕು. ಮೃತರ ಕುಟುಂಬಕ್ಕೆ ₹1 ಕೋಟಿ ಪರಿಹಾರ ನೀಡಬೇಕು' ಎಂದು ಸಂಘದ ಅಧ್ಯಕ್ಷ ಡಾ.ಶಿವಶರಣಪ್ಪ ಯಲಗೋಡ, ಪ್ರಧಾನ ಕಾರ್ಯದರ್ಶಿ ಡಾ.ಎಂ. ರಾಮಚಂದ್ರಯ್ಯ ಆಗ್ರಹಿಸಿದ್ದಾರೆ.

'ಅರಣ್ಯ ಇಲಾಖೆ ಹಾಗೂ ಮೃಗಾಲಯ ಪ್ರಾಧಿಕಾರಗಳಲ್ಲಿನ ವೃಂದ ಹಾಗೂ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಬೇಕು. ಪಶುವೈದ್ಯರ ಸೇವೆ ಕಾಯಂ ಮಾಡಿ ವನ್ಯಜೀವಿ ವಿಭಾಗ ಹಾಗೂ ಮೃಗಾಲಯ ಪ್ರಾಧಿಕಾರದ ಸಂಪೂರ್ಣ ಹೊಣೆಗಾರಿಕೆಯನ್ನು ಪಶು ವೈದ್ಯಾಧಿಕಾರಿಗಳಿಗೆ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

'ಈ ಬಾರಿ ಕರ್ತವ್ಯಕ್ಕೆ ಹಾಜರಾಗಿ ಸಾಂಕೇತಿಕ ಪ್ರತಿಭಟನೆ ನಡೆಸುತ್ತೇವೆ. ನಮ್ಮ ಬೇಡಿಕೆಗಳ ಕುರಿತು ಕ್ರಮ ಕೈಗೊಳ್ಳದೇ ಇದ್ದರೆ ಅರಣ್ಯ ಇಲಾಖೆ ಹಾಗೂ ಮೃಗಾಲಯ ಪ್ರಾಧಿಕಾರದ ಎಲ್ಲಾ ಪಶುವೈದ್ಯ ಸೇವೆಯನ್ನು ಸ್ಥಗಿತಗೊಳಿಸಲಾಗುವುದು. ಇಲ್ಲದೇ ಇದ್ದರೆ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಪಶುವೈದ್ಯರು ಮಾತೃ ಇಲಾಖೆಗೆ ಹಿಂದಿರುಗುವ ತೀರ್ಮಾನ ಕೈಗೊಳ್ಳಲಾಗುವುದು' ಎಂದು ಎಚ್ಚರಿಸಿದ್ದಾರೆ.

ಕರ್ನಾಟಕದಲ್ಲಿ ಎಸ್‌ಐಆರ್ ಪ್ರಕ್ರಿಯೆ ತರಾತುರಿ ಬೇಡ: ಆಗ್ರಹ

'ಎನ್‌ಆರ್‌ಸಿ ಜಾರಿಯ ಹುನ್ನಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ ಮೂಲಕ ಸಿಎಎ-ಎನ್‌ಆರ್‌ಸಿ ಜಾರಿಗೊಳಿಸುವ ಹುನ್ನಾರ ಮಾಡಲಾಗುತ್ತಿದೆ. ಈ ಬಗೆಗಿನ ಪ್ರಕರಣಗಳು ಸುಪ್ರೀಂ ಕೋರ್ಟ್‌ನಲ್ಲಿ ವಿಚಾರಣೆಯಲ್ಲಿರುವುದರಿಂದ ಕರ್ನಾಟಕದಲ್ಲಿ ತರಾತುರಿಯಲ್ಲಿ ಎಸ್‌ಐಆರ್ ಪ್ರಕ್ರಿಯೆ ನಡೆಸಬಾರದು ಎಂದು ಪ್ರಗತಿಪರ ಸಂಘಟನೆಗಳು ಹಾಗೂ ಜಾತ್ಯತೀತ ಪಕ್ಷಗಳ ಮುಖಂಡರು ಆಗ್ರಹಿಸಿದರು.

ಬಿ.ಟಿ. ಲಲಿತಾ ನಾಯಕ್, ಎನ್. ವೆಂಕಟೇಶ್, ತಾರಾ ರಾವ್, ಕೆ.ಎಲ್. ಅಶೋಕ್, ಎಚ್.ಆರ್. ಬಸವರಾಜಪ್ಪ, ನೂರ್ ಶ್ರೀಧರ್, ಯೂಸಫ್ ಕನ್ನಿ, ಕೆ.ವಿ. ಭಟ್, ವಿನಯ್ ಶ್ರೀನಿವಾಸ್, ಹೈದರ್ ಬೇಗ್, ರಿಯಾಜ್ ಅಹ್ಮದ್, ನಾಗೇಶ್ ಅರಳಕುಪ್ಪೆ, ಕಾತ್ಯಾಯಿನಿ ಚಾಮರಾಜ್, ಸಾತಿ ಸುಂದರೇಶ್, ಅಮ್ಜದ್ ಪಾಷ, ರಮೇಶ್ ಬೆಲ್ಲಮಕೊಂಡ ಸೋಮವಾರ ಜಂಟಿ ಸುದ್ದಿಗೋಷ್ಠಿ ನಡೆಸಿದರು.

ದಾಖಲೆಗಳ ಕಾರಣ ನೀಡಿ ಅರ್ಹ ಪ್ರಜೆಗಳ ಮತದಾನದ ಹಕ್ಕನ್ನು ಜೀವಂತ ಕಾಲದಲ್ಲಿಯೇ ನಿರಾಕರಿಸುವುದು ಪ್ರಜಾತಂತ್ರ ವ್ಯವಸ್ಥೆಯ ದುರಂತ ಅಂತ್ಯವಾಗಿದೆ ಎಂದು ಹೋರಾಟಗಾರರು ಆಕ್ರೋಶ ವ್ಯಕ್ತಪಡಿಸಿದರು.

'ಎಸ್‌ಐಆರ್ ನಡೆದ ರಾಜ್ಯಗಳಲ್ಲಿ 20 ಲಕ್ಷದಿಂದ 3 ಕೋಟಿಯ ತನಕ ಅರ್ಹ ಮತದಾರರನ್ನು ಪಟ್ಟಿಯಿಂದ ತೆಗೆದುಹಾಕಲಾಗಿದೆ. ಕರ್ನಾಟಕ ರಾಜಕೀಯವಾಗಿ ಅತ್ಯಂತ ಸೂಕ್ಷ್ಮ ರಾಜ್ಯವಾಗಿದೆ. ಶೇ 2ರಷ್ಟು ಮತಗಳು ರಾಜ್ಯದ ಚುನಾವಣಾ ಭವಿಷ್ಯವನ್ನೇ ಏರುಪೇರು ಮಾಡಲಿವೆ. ಈ ಕಾರಣದಿಂದಾಗಿ ನಾವು ಅಸಾಂವಿಧಾನಿಕವಾದ ಮತ್ತು ದೊಡ್ಡ ಸಂಖ್ಯೆಯಲ್ಲಿ ಮತದಾರರನ್ನು ಚುನಾವಣಾ ಪ್ರಕ್ರಿಯೆಯಿಂದ ಹೊರದಬ್ಬುವ ಮತಪಟ್ಟಿಯನ್ನು ಒಪ್ಪುವುದಿಲ್ಲ' ಎಂದು ತಿಳಿಸಿದರು.

ಸುಪ್ರೀಂ ಕೋರ್ಟ್ ಆದೇಶದಂತೆ ಆಧಾರ್ ಕಾರ್ಡ್ ಅನ್ನು ಕಡ್ಡಾಯವಾಗಿ ಪರಿಗಣಿಸಬೇಕು. ಆಧಾರ್ ಕಾರ್ಡ್ ಇದ್ದವರನ್ನು ಮತಪಟ್ಟಿಯಿಂದ ಹೊರಗಿಡಬಾರದು. ಭಾರತೀಯರಲ್ಲ ಎಂಬ ಅನುಮಾನಗಳು ಬಂದಲ್ಲಿ ಅದನ್ನು ಸರ್ಕಾರದ ಗಮನಕ್ಕೆ ತಂದು ಸೂಕ್ತ ಪ್ರಕ್ರಿಯೆ ನಡೆದು ದೃಢೀಕರಣಗೊಂಡ ನಂತರ ಮತ ಪಟ್ಟಿಯಿಂದ ತೆಗೆಯಬೇಕು. ದಾಖಲೆಗಳಿಲ್ಲದಿದ್ದಲ್ಲಿ ಸಿದ್ಧಪಡಿಸಿಕೊಂಡು ಹಾಗೂ ಅಪೀಲು ಸಲ್ಲಿಸಲು ಆರು ತಿಂಗಳ ಸಮಯ ನೀಡಬೇಕು ಎಂದರು.

ತಮಿಳುನಾಡಿನಲ್ಲಿ ಮಾಡಿದಂತೆ ಬಿಎಲ್‌ಒಗಳಿಗೆ ಯುದ್ಧೋಪಾದಿಯಲ್ಲಿ ಪರಿಣಾಮಕಾರಿಯಾದ ತರಬೇತಿ ನೀಡಿ, ಅವರು ಪ್ರತಿ ಮನೆಗೂ ತಲುಪಿ ಒಬ್ಬರೂ ಹೊರಗುಳಿಯದಂತೆ ಎಚ್ಚರ ವಹಿಸಬೇಕು ಎಂದು ಒತ್ತಾಯಿಸಿದರು.

ಗ್ರಾಮ/ ವಾರ್ಡ್ ಸಭೆಗಳನ್ನು ಸಿಎಜಿ ರೂಪಿಸಿರುವ ಸಾಮಾಜಿಕ ಪರಿಶೀಲನೆಯ ಮಾನದಂಡಗಳನ್ನು ಅನ್ವಯಿಸಿ ನಡೆಸಬೇಕು. ಆ ಮೂಲಕ ರಾಜ್ಯ ಚುನಾವಣಾ ಆಯೋಗದ ಪಟ್ಟಿಗೆ ಹೆಚ್ಚಿನ ಖಚಿತತೆ ಹಾಗೂ ಮಾನ್ಯತೆ ಬರುವಂತೆ ನೋಡಿಕೊಳ್ಳಬೇಕು. ಸಾರಾಂಶದಲ್ಲಿ ರಾಜ್ಯ ತನ್ನದೇ ಆದ ಖಚಿತ ಮತ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಬೇಕು ಎಂದು ರಾಜ್ಯ ಚುನಾವಣಾ ಆಯೋಗಕ್ಕೆ ಮನವಿ ಮಾಡಿದರು.

ನಿಧನ ವಾರ್ತೆ

ಶ್ರೀರಂಗಪ್ಪ

ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ವಿಜಯನಗರದ ಪತ್ರಿಕಾ ವಿತರಕ, ಮಾನಸ ನ್ಯೂಸ್ ಏಜೆನ್ಸಿ ಮಾಲೀಕರಾದ ರಂಗಪ್ಪ (74) ಅವರು ನಿಧನರಾಗಿದ್ದಾರೆ.



ರಂಗಪ್ಪ

ಅವರಿಗೆ ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಇದ್ದಾರೆ. ಗೊರವನಹಳ್ಳಿ ಬಳಿಯ ಸ್ವಗ್ರಾಮ ಮಾರಗೊಂಡನಗುಣಿಯಲ್ಲಿ ಅಂತ್ಯ ಸಂಸ್ಕಾರ ನಡೆಯಿತು.

ಬಸ್ ಅಪಘಾತ: ನಾಲ್ವರ ಸಾವು

ಚನ್ನಪಟ್ಟಣ: ತಾಲ್ಲೂಕಿನ ಪುಟ್ಟಪ್ಪನದೊಡ್ಡಿ ಬಳಿ ಬೆಂಗಳೂರು– ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ ಸೋಮವಾರ ಬೆಳಗಿನ ಜಾವ ಖಾಸಗಿ ಸ್ಲೀಪರ್ ಬಸ್ಸೊಂದು ಸರ್ವಿಸ್ ರಸ್ತೆಯ ಕಬ್ಬಿಣದ ಬೇಲಿಗೆ ಡಿಕ್ಕಿ ಹೊಡೆದಿದ್ದರಿಂದ ಮುಂಭಾಗದಲ್ಲಿ ಕುಳಿತಿದ್ದ ನಾಲ್ವರು ಪ್ರಯಾಣಿಕರು ಮೃತಪಟ್ಟು, ಇಬ್ಬರು ಗಂಭೀರವಾಗಿ ಗಾಯಗೊಂಡಿದ್ದಾರೆ.

ಕವಣಾಪುರದ ಬಸವನ ಮೆರವಣಿಗೆ–ಹರಕೆ ಸಲ್ಲಿಸಿದ ಭಕ್ತರು

ನಿಡವಂದ ಬಸವೇಶ್ವರ ಜಾತ್ರೆ ಸಂಪನ್ನ

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ಇಲ್ಲಿನ ನಿಡವಂದ ಗ್ರಾಮದ ಶ್ರೀ ಬಸವೇಶ್ವರಸ್ವಾಮಿಯ ಬ್ರಹ್ಮರಥೋತ್ಸವವು ಸೋಮವಾರ ಸಂಪನ್ನಗೊಂಡಿತು.

ಬಸವೇಶ್ವರ ನೆಲೆದೇವರಿಗೆ ರುದ್ರಾಭಿಷೇಕ, ಕ್ಷೀರಾಭಿಷೇಕ, ಬಿಲ್ವಾರ್ಚನೆ ಹೀಗೆ ವಿವಿಧ ಧಾರ್ಮಿಕ ಪೂಜಾ ಕಾರ್ಯಗಳು ನೆರವೇರಿದವು. ರಥೋತ್ಸವಕ್ಕೂ ಮುನ್ನ ಹೋಮ, ರಥಪ್ರತಿಷ್ಠೆ, ಲಿಂಗದವೀರರ ನರ್ತನ, ನಂದಿ ಧ್ವಜ ಕುಣಿತ, ಸೂರ್ಯಮಂಡಲ ಪೂಜೆಯನ್ನು ನಡೆಸಲಾಯಿತು. ಅಗ್ನಿಕುಂಡಕ್ಕೆ ಪೂರ್ಣಾಹುತಿಯನ್ನು ಅರ್ಪಿಸಿದರು. ಉತ್ಸವ ಮೂರ್ತಿಯನ್ನು ರಥಕ್ಕೆ ಕೂರಿಸುವ ಮುನ್ನ ಮೂರು ಭಾರಿ ಪ್ರದಕ್ಷಿಣೆ ಹಾಕಲಾಯಿತು. ಭಕ್ತರು ಬಸವೇಶ್ವರಸ್ವಾಮಿಗೆ ಜಯಘೋಷ ಹಾಕಿ ರಥ ಎಳೆದರು.

ವೀರಭದ್ರ ವೇಷದಾರಿಗಳು ಮತ್ತು ನಂದಿ ಧ್ವಜದಾರಿಗಳು ದೇವರ ಮೆರವಣಿಗೆಯ ಮುಂದೆ ಕರಡಿ ವಾದ್ಯಕ್ಕೆ ತಾಳ ಹಾಕುತ್ತಾ ಸಾಗಿದರು. ತೇರಿಗೆ ಭಕ್ತರು ಸೂರುಬಾಳೆಯನ್ನು ಎಸೆಯುವುದರ ಮೂಲಕ ತಮ್ಮ ಇಷ್ಟಾರ್ಥವನ್ನು ನೆರವೇರಿಸಿಕೊಂಡರು. ಬೆಳಿಗ್ಗೆ ಕವಣಾಪುರದ ಬಸವನನ್ನು ಗ್ರಾಮದ ಉದ್ದಕ್ಕೂ ಮೆರವಣಿಗೆ ಮಾಡಲಾಯಿತು. ಭಕ್ತರು ಬಸವನಿಗೆ ಹರಕೆ ಹೊತ್ತು ಪೂಜೆ ಸಲ್ಲಿಸಿದರು.



ನಿಡವಂದ ಬಸವೇಶ್ವರ ರಥ

ಪ್ರಧಾನ ಅರ್ಚಕರಾದ ತೋಂಟರಾಧ್ಯ ಕುಟುಂಬದವರು ಮತ್ತು ಇತರೆ ಪುರೋಹಿತರು ರಥೋತ್ಸವದ ಪೂಜೆ, ಹೋಮವನ್ನು ನೆರವೇರಿಸಿದರು. ಅರವಂಟಿಕೆಗಳಲ್ಲಿ ಹೆಸರು ಬೇಳೆ, ಮಜ್ಜಿಗೆ, ಪಾನಕ ವಿತರಿಸಲಾಯಿತು. ಎರಡು ಕೊಪ್ಪಲುಗಳಲ್ಲಿ ಊಟದ ವ್ಯವಸ್ಥೆ ಇತ್ತು.

ಬಿಟುಮಿನ್ ಕೊರತೆ: ಕಾಮಗಾರಿ ಸ್ಥಗಿತ

ದರ ಹೆಚ್ಚಳ; ಬೇಡಿಕೆಯಷ್ಟು ಸಿಗದ ಬಿಟುಮಿನ್; ಗುತ್ತಿಗೆದಾರರಿಗೂ ಸಂಕಷ್ಟ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಶ್ಚಿಮ ಏಷ್ಯಾದಲ್ಲಿನ ಯುದ್ಧದಿಂದಾಗಿ ನಗರಕ್ಕೆ ಸರಬರಾಜಾಗುವ ಬಿಟುಮಿನ್ ಕೊರತೆಯಾಗಿದ್ದು, ಇದರಿಂದಾಗಿ ರಸ್ತೆ ಡಾಂಬರೀಕರಣದ ಶೇ 80ರಷ್ಟು ಕಾಮಗಾರಿಗಳು ಸ್ಥಗಿತಗೊಂಡಿವೆ.

ಜಿಬಿಎ ವ್ಯಾಪ್ತಿಯಲ್ಲಿ ಸಾವಿರಾರು ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿವೆ. 'ಏಪ್ರಿಲ್ ಅಂತ್ಯದ ವೇಳೆಗೆ ಸುಮಾರು ₹5,200 ಕೋಟಿ ವೆಚ್ಚದ ರಸ್ತೆ ಕಾಮಗಾರಿಗಳು ಮುಗಿಯಲಿವೆ' ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದ್ದರು. ಆದರೆ, ಬಿಟುಮಿನ್ ಕೊರತೆಯಿಂದ ಬಹುತೇಕ ಕಾಮಗಾರಿಗಳು ನಿಂತುಹೋಗಿವೆ.

'ರಸ್ತೆ ಡಾಂಬರೀಕರಣದಲ್ಲಿ ಪ್ರಮುಖವಾಗಿ ಬಳಸುವ ಬಿಟುಮಿನ್, ಪಶ್ಚಿಮ ಏಷ್ಯಾದಲ್ಲಿ ಯುದ್ಧ ಆರಂಭವಾದ ಒಂದು ವಾರದ ನಂತರ ಬೇಡಿಕೆಗೆ ಅನುಗುಣವಾಗಿ ಸರಬರಾಜು ಆಗುವುದು ಕಡಿಮೆಯಾಗುತ್ತಾ ಬಂದಿತು. ಇದೀಗ ಬಿಟುಮಿನ್ ದರ ಪ್ರತಿ ಟನ್‌ಗೆ ಶೇ 45ಕ್ಕಿಂತ ಹೆಚ್ಚಾಗಿದೆ. ವಿತರಣೆಯನ್ನು ಬೇಕೆಂದಲೇ ನಿಲ್ಲಿಸಲಾಗಿದ್ದು, ಅನಗತ್ಯವಾಗಿ 'ಬೇಡಿಕೆ'ಯನ್ನು ಹೆಚ್ಚಿಸಲಾಗುತ್ತಿದೆ. ಹೀಗಾಗಿ, ರಸ್ತೆ ಕಾಮಗಾರಿಯನ್ನು ಅನಿವಾರ್ಯವಾಗಿ ನಿಲ್ಲಿಸಬೇಕಾಗಿದೆ' ಎಂದು ಗುತ್ತಿಗೆದಾರರು ಮಾಹಿತಿ ನೀಡಿದರು.

'ನಗರದ ಹಲವು ರಸ್ತೆಗಳ ಅಭಿವೃದ್ಧಿ ಹಾಗೂ ಡಾಂಬರೀಕರಣಕ್ಕೆ ಮಾರ್ಚ್ 1ರ ನಂತರ ಕಾರ್ಯಾದೇಶ ನೀಡಲಾಗಿದೆ. ಇದೆಲ್ಲವೂ ಹಿಂದಿನ ದರದಂತೆಯೇ ಇದೆ. ಆದರೆ, ಬಿಟುಮಿನ್ ದರ ಶೇ 45ಕ್ಕೂ ಅಧಿಕವಾಗಿರುವುದರಿಂದ ಕೆಲಸ ಮಾಡುವುದು ಸಾಧ್ಯವಿಲ್ಲ. ಒಂದೆರಡು ಕಾಸು ಸಿಗುತ್ತದೆ ಎಂದು ಕೆಲಸ ಮಾಡುತ್ತೇವೆ. ಬಿಟುಮಿನ್ ದರ ಹೆಚ್ಚಾದರೆ ನಮಗೆ ಭಾರಿ ನಷ್ಟವಾಗುತ್ತದೆ. ಹಣ ಕಳೆದುಕೊಂಡು ಯಾರು ಕೆಲಸ ಮಾಡಲು ಇಚ್ಛಿಸುತ್ತಾರೆ' ಎಂದು ಗುತ್ತಿಗೆದಾರರು ಪ್ರಶ್ನಿಸಿದರು.


'ಮಂಗಳೂರಿನ ಬಂದರಿನಿಂದ ಎಂಆರ್‌ಪಿಎಲ್/ ಐಒಸಿಗಳ ಮೂಲಕ ಬಿಟುಮಿನ್ ಪೂರೈಕೆಯಾಗುತ್ತದೆ. ಅಲ್ಲಿಂದ ಏಜೆನ್ಸಿಗಳು ನಮಗೆ ಬಿಟುಮಿನ್ ಸರಬರಾಜು ಮಾಡುತ್ತಿದ್ದಾರೆ. ಕಳೆದ ಒಂದು ವಾರದಿಂದ ಬಿಟುಮಿನ್ ಲಭ್ಯವಾಗುತ್ತಿಲ್ಲ. ಹೀಗಾಗಿ, ಕೆಲಸ ನಿಲ್ಲಿಸಬೇಕಾದ ಅನಿವಾರ್ಯ ಎದುರಾಗಿದೆ' ಎಂದರು.

ಮಳೆಗಾಲ ಆರಂಭಕ್ಕೆ ಮುನ್ನ ಎಲ್ಲ ರಸ್ತೆಗಳನ್ನೂ ಅಭಿವೃದ್ಧಿಗೊಳಿಸಿ, ಗುಂಡಿ ಮುಕ್ತಗೊಳಿಸಿ, ಡಾಂಬರೀಕರಣ ಮಾಡುವ ಉದ್ದೇಶವನ್ನು ಜಿಬಿಎ ಹಾಗೂ ಐದು ನಗರ ಪಾಲಿಕೆಗಳು ಹೊಂದಿದ್ದವು. ಮುಖ್ಯ ಹಾಗೂ ಉಪ ಮುಖ್ಯರಸ್ತೆಗಳಲ್ಲಿ ಕಾಮಗಾರಿಗಳು ನಡೆಯುತ್ತಿವೆ. ಹಲವಡೆ ವಾರ್ಡ್ ರಸ್ತೆಗಳ ಕಾಮಗಾರಿಗೆ ಕಾರ್ಯಾದೇಶ ನೀಡಲಾಗಿದ್ದು, ಇನ್ನುಳಿದ ಕಡೆ ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಈ ಸಂದರ್ಭದಲ್ಲಿ ಬಿಟುಮಿನ್ ಕೊರತೆ ಎದುರಾಗಿರುವುದು ಮಳೆಗಾಲದ ವೇಳೆಗೆ ರಸ್ತೆ ಅಭಿವೃದ್ಧಿಯಾಗುವ ಲಕ್ಷಣಗಳು ಕ್ಷೀಣಿಸಿವೆ.

'ಒಟ್ಟು ಎಷ್ಟು ಬಿಟುಮಿನ್ ಬೇಕು ಎಂಬ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಈ ಸಮಸ್ಯೆಯನ್ನು ಹೇಗೆ ಬಗೆಹರಿಸಬೇಕು ಎಂಬುದನ್ನು ಸರ್ಕಾರದ ಮಟ್ಟದಲ್ಲಿ ನಿರ್ಧಾರ ತೆಗೆದುಕೊಳ್ಳಲಾಗುತ್ತದೆ' ಎಂದು ಜಿಬಿಎ ಅಧಿಕಾರಿಗಳು ತಿಳಿಸಿದರು.

ಬಿಟುಮಿನ್ ದರ

(ಪ್ರತಿ ಟನ್‌ಗೆ)



> **ಗುತ್ತಿಗೆದಾರರಿಗೆ ಬಿಟುಮಿನ್ ದರ ಭರಿಸಲು ಸಾಧ್ಯವಿಲ್ಲದಾಗಿದ್ದು, ಕಾಮಗಾರಿ ಸ್ಥಗಿತಗೊಳಿಸುವುದೇ ಈಗಿರುವ ದಾರಿ**
>
> **ಎನ್. ಚೇತನ್‌ಕುಮಾರ್,** ಪ್ರಧಾನ ಕಾರ್ಯದರ್ಶಿ, ಗ್ರೇಟರ್ ಬೆಂಗಳೂರು ನಗರ ಪಾಲಿಕೆಗಳ ಗುತ್ತಿಗೆದಾರರ ಸಂಘ

'ಸ್ಟಾರ್ ರೇಟ್'ಗೆ ಮನವಿ

'ಗುತ್ತಿಗೆದಾರರು ಕಾಮಗಾರಿಗಾರಿ ನಡೆಸುವ ಸಂದರ್ಭದಲ್ಲಿ ಯಾವುದಾದರೂ ಪ್ರಮುಖ ಸಾಮಗ್ರಿಯ ದರ ಅತಿ ಹೆಚ್ಚಾದರೆ ಅದಕ್ಕೆ ಅನುಗುಣವಾಗಿ 'ಸ್ಟಾರ್ ರೇಟ್' ನೀಡುವ ಪದ್ಧತಿ ಇದೆ. ಬಿಟುಮಿನ್ ದರದಿಂದ ರಾಜ್ಯದಾದ್ಯಂತ ಗುತ್ತಿಗೆದಾರರ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಕಾಮಗಾರಿ ಮುಗಿಯುವ ಹಂತದಲ್ಲಿರುವವರಿಗೆ ಹೆಚ್ಚಿನ ತೊಂದರೆಯಾಗಿದ್ದು, ಅವರಿಗೆ 'ಸ್ಟಾರ್ ರೇಟ್' ನೀಡಲು ಎಲ್ಲ ಇಲಾಖೆಗಳಿಗೆ ಮನವಿ ಮಾಡಿಕೊಳ್ಳಲಾಗಿದೆ. ದರ ಹೆಚ್ಚಾಗಿರುವುದನ್ನು ಲೆಕ್ಕಾಚಾರ ಮಾಡಿ ಗುತ್ತಿಗೆ ಮೊತ್ತವನ್ನೂ ಹೆಚ್ಚಿಸುವ ಪ್ರಕ್ರಿಯೆಯನ್ನು 'ಸ್ಟಾರ್ ರೇಟ್' ಎನ್ನಲಾಗುತ್ತದೆ. ಬಿಟುಮಿನ್ ಹೆಚ್ಚಾಗಿರುವ ದರವನ್ನು ಲೆಕ್ಕಾಚಾರ ಮಾಡಿ, ಗುತ್ತಿಗೆ ಹಣವನ್ನು ಹೆಚ್ಚಿಸಲು ಸೂಚನೆ ನೀಡುವಂತೆ ಮುಖ್ಯಮಂತ್ರಿಯವರಿಗೂ ಮನವಿ ಮಾಡಲಾಗಿದೆ' ಎಂದು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಆರ್. ಮಂಜುನಾಥ್ ತಿಳಿಸಿದರು.

ಒಳಮೀಸಲು: 'ಬಲಗೈ' ಪ್ರತಿಭಟನೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಳಮೀಸಲಾತಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗ ನೀಡಿರುವ ವರದಿ ಅವೈಜ್ಞಾನಿಕವಾಗಿದ್ದು, ಈ ವರದಿಯನ್ನು ತಿರಸ್ಕರಿಸಬೇಕು. ಮರುಸಮೀಕ್ಷೆ ನಡೆಸಬೇಕು ಎಂದು ಆಗ್ರಹಿಸಿ ಮಾರ್ಚ್ 25ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸೋಮವಾರ ಮಾತನಾಡಿದ ಅವರು, 'ಹಿಂದುಳಿದ ವರ್ಗಗಳ ಆಯೋಗದ ಕುಟುಂಬ ಸಮೀಕ್ಷೆಯ ಅಂಕಿಅಂಶದೊಂದಿಗೆ ನಾಗಮೋಹನದಾಸ್ ಆಯೋಗದ ಅಂಕಿಅಂಶಗಳನ್ನು ಹೋಲಿಕೆ ಮಾಡಬೇಕು. ಯಾವುದೇ ವೈಜ್ಞಾನಿಕ ಮಾನದಂಡ ಅನುಸರಿಸದೇ ಹೊರಡಿಸಿರುವ ಒಳಮೀಸಲಾತಿ ಆದೇಶವನ್ನು ಹಿಂಪಡೆಯಬೇಕು. ಕಾಯಂ ಜಾತಿ ಪ್ರಮಾಣ ಪತ್ರಗಳನ್ನು ಹೊಸ ಜಾತಿ ಪ್ರಮಾಣಪತ್ರಗಳೊಂದಿಗೆ ಪರಿಗಣಿಸಬೇಕು' ಎಂದು ಆಗ್ರಹಿಸಿದರು.

'ನಾವು ಒಳಮೀಸಲಾತಿ ವಿರೋಧಿಗಳಲ್ಲ. ಎಲ್ಲ 101 ಪರಿಶಿಷ್ಟ ಜಾತಿಗಳಿಗೂ ಅವುಗಳ ಜನಸಂಖ್ಯೆಗೆ ಅನುಗುಣವಾಗಿ ಸಮಾನ ಅವಕಾಶ ಸಿಗಬೇಕು. ಆಯೋಗದ ವರದಿಯು ಯಾವುದೋ ಒಂದು ಸಮುದಾಯಕ್ಕೆ ಅನುಕೂಲ ಮಾಡಿಕೊಡುತ್ತಿದೆ. ಅದನ್ನು ವಿರೋಧಿಸಿ ಕರ್ನಾಟಕ ರಾಜ್ಯ ಬಲಗೈ ಸಮುದಾಯಗಳ ಒಕ್ಕೂಟವು ಹಮ್ಮಿಕೊಂಡಿರುವ ಪ್ರತಿಭಟನೆಯಲ್ಲಿ ರಾಜ್ಯದ ವಿವಿಧ ಮೂಲೆಗಳಿಂದ ಲಕ್ಷಾಂತರ ಜನರು ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಸಿದ್ದಯ್ಯ, ವಾಣಿ ಶಿವರಾಂ, ಟಿ.ಆರ್. ಶಿವರಾಂ, ನಾಗೇಶ್ವರ್ ರಾವ್, ಬಿ. ಶಿವಣ್ಣ ಉಪಸ್ಥಿತರಿದ್ದರು.

ವೈದಿಕಶಾಹಿಗೇನು ಕೆಲಸ?

ಒಳಮೀಸಲಾತಿಯು ಪರಿಶಿಷ್ಟ ಜಾತಿಯೊಳಗಿನ ಸಮುದಾಯಗಳಿಗೆ ಮಾತ್ರ ಸಂಬಂಧಿಸಿದ್ದಾಗಿದೆ. ಆದರೆ, ವೈದಿಕಶಾಹಿಗಳು ಇದರೊಳಗೆ ಪ್ರವೇಶಿಸಿವೆ. ಅವರಿಗೂ ಒಳಮೀಸಲಾತಿಗೂ ಏನು ಸಂಬಂಧ? ಅವರು ಯಾಕೆ ಒಳಮೀಸಲಾತಿಯೊಳಗೆ ಕಾಲಿಟ್ಟಿದ್ದಾರೆ? ಅವರು ನಡೆಸುತ್ತಿರುವ ಷಡ್ಯಂತ್ರ ಏನು ಎಂದು ಜ್ಞಾನಪ್ರಕಾಶ ಸ್ವಾಮೀಜಿ ಪ್ರಶ್ನಿಸಿದರು.

ಶಾಸಕರ ಹಾಜರಾತಿಗೆ ಇನ್ನು ಬಯೋಮೆಟ್ರಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಾಸಕರ ಹಾಜರಾತಿಗೆ ಇನ್ನು ಮುಂದೆ ಬಯೋಮೆಟ್ರಿಕ್ ವ್ಯವಸ್ಥೆ ಜಾರಿಗೊಳಿಸಲಾಗುವುದು' ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ತಿಳಿಸಿದರು.



ಯು.ಟಿ. ಖಾದರ್

ವಿಧಾನಸಭೆಯಲ್ಲಿ ಸೋಮವಾರ ಈ ವಿಷಯ ತಿಳಿಸಿದ ಅವರು, 'ಅಧಿ ವೇಶನದ ಸಂದರ್ಭದಲ್ಲಿ ಯಾರು ಎಷ್ಟು ಸಮಯಕ್ಕೆ ಸದನಕ್ಕೆ ಹಾಜರಾದರು ಎಂಬ ಮಾಹಿತಿಯನ್ನು ಪಡೆಯಲು ಈ ವ್ಯವಸ್ಥೆ ಅಳವಡಿಸಲು ಉದ್ದೇಶಿಸಲಾಗಿದೆ. ಮುಂದಿನ ಅಧಿವೇಶನದಿಂದಲೇ ಬಯೋಮೆಟ್ರಿಕ್ ಹಾಜರಾತಿ ಪರಿಚಯಿಸಲಾಗುವುದು' ಎಂದರು.

'ಶಾಸನಸಭೆಯ ಡಿಜಿಟಲೀಕರಣಕ್ಕೂ ಸಂಸತ್‌ನಿಂದ ಅನುಮೋದನೆ ದೊರೆತಿದೆ.ಆ ಮೂಲಕ, ಕಾಗದರಹಿತ ಶಾಸನಸಭೆಗಾಗಿ ಅನುಮತಿ ಸಿಕ್ಕಿದೆ. ಮೂರು ತಿಂಗಳಲ್ಲಿ ಈ ವ್ಯವಸ್ಥೆ ಅನುಷ್ಠಾನಗೊಳಿಸಲಾಗುವುದು' ಎಂದರು.

ಕೆಂಪೇಗೌಡ, ಕಾವೇರಿ ಪ್ರತಿಮೆ ಅನಾವರಣ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಲಗ್ಗೆರೆಯಲ್ಲಿ ಕೋಟೆ ನಿರ್ಮಾಣ ಮಾಡಿ, ಅದರ ಮೇಲೆ ಕೆಂಪೇಗೌಡರ ಪ್ರತಿಮೆ ಮತ್ತು ಕಾವೇರಿ ತಾಯಿ ಪ್ರತಿಮೆಯನ್ನು ಅನಾವರಣ ಮಾಡಲಾಯಿತು.

ಕೆಂಪೇಗೌಡ ಸೇವಾ ಟ್ರಸ್ಟ್ ವತಿಯಿಂದ ನಿರ್ಮಾಣ ಮಾಡಿರುವ ಕೋಟೆ, ಕೆಂಪೇಗೌಡರ ಕೋಟೆಯ ಮಾದರಿಯಲ್ಲಿದೆ. ಈ ಪ್ರತಿಮೆಯನ್ನು, ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ ಅನಾವರಣಗೊಳಿಸಿದರು.

'ಕೆಂಪೇಗೌಡರು ಬೆಂಗಳೂರು ನಿರ್ಮಾಣ ಮಾಡಿ ಕೋಟ್ಯಂತರ ಜನರಿಗೆ ಅನ್ನ, ಉದ್ಯೋಗ, ಬದುಕನ್ನು ಕಟ್ಟಿಕೊಳ್ಳಲು ನೆರವಾಗಿದ್ದರು. ಅವರು ಒಂದು ಜಾತಿ, ಧರ್ಮ ನೋಡಿ ಬೆಂಗಳೂರನ್ನು ನಿರ್ಮಾಣ ಮಾಡಿಲ್ಲ. ವಿಶ್ವವೇ ಬೆಂಗಳೂರನ್ನು ಗುರುತಿಸುವಂತೆ ಕಟ್ಟಿದ ಒಬ್ಬ ಅವತಾರ ಪುರುಷ' ಎಂದರು.

ಕೆಂಪೇಗೌಡ ಸೇವಾ ಟ್ರಸ್ಟ್ ಅಧ್ಯಕ್ಷ ಎಚ್.ಎಸ್.ಸಿದ್ದೇಗೌಡ ಮಾತನಾಡಿ, 'ಕೆಂಪೇಗೌಡರು ಜಾತ್ಯತೀತವಾಗಿ ಆಡಳಿತ ನಡೆಸಿದರು' ಎಂದು ಕರೆ ನೀಡಿದರು.



ನಾಡಪ್ರಭು ಕೆಂಪೇಗೌಡರ ಕೋಟೆ, ಪ್ರತಿಮೆಯನ್ನು ಹನುಮಂತರಾಯಪ್ಪ ಅನಾವರಣಗೊಳಿಸಿದರು. ಎಚ್.ಎಸ್.ಸಿದ್ದೇಗೌಡ, ಲಗ್ಗೆರೆ ನಾರಾಯಣಸ್ವಾಮಿ, ಎನ್.ಚಂದ್ರಶೇಖರ್ ಗೌಡ ಉಪಸ್ಥಿತರಿದ್ದರು

ಜೆಡಿಎಸ್ ನಾಯಕ ಲಗ್ಗೆರೆ ಎನ್. ಚಂದ್ರಶೇಖರ್‌ಗೌಡ, ಲಗ್ಗೆರೆ ನಾರಾಯಣ ಸ್ವಾಮಿ, ಟ್ರಸ್ಟ್‌ನ ಜಗದೀಶ್, ರಮೇಶ್, ಬ್ಯಾಟರಾಯಪ್ಪ ಮುನಿರಂಗಪ್ಪ, ಹನುಮಯ್ಯ, ರಘುನಾಥ್, ಸಮಾಜ ಸೇವಕ ವೆಂಕಟೇಶ್‌ಮೂರ್ತಿ, ಬಿಬಿಎಂಪಿ ಮಾಜಿ ಸದಸ್ಯರಾದ ಬಿ.ಆರ್.ನಂಜುಂಡಪ್ಪ, ಅಂದಾನಪ್ಪ, ಮಂಜುಳ ಮಲ್ಲೇಶ್, ಮಂಜುಳ ನಾರಾಯಣಸ್ವಾಮಿ, ಎಂ.ಶಿವರಾಜು, ಆಶಾ ಸುರೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಜೀವಿತ್ ಮಂಜುನಾಥ್‌ಗೌಡ ಉಪಸ್ಥಿತರಿದ್ದರು.

ಕರ್ನಾಟಕ ಮುಕ್ತ ವಿ.ವಿ ಕುಲಪತಿಗೆ ನೋಟಿಸ್ ಜಾರಿ

ಒಂದನೇ ಪುಟದಿಂದ...

ವಿಶ್ವವಿದ್ಯಾಲಯ ಆರ್ಥಿಕವಾಗಿ ಸಂಕಷ್ಟದಲ್ಲಿದ್ದರೂ, ಖಾಸಗಿ ಕಾರ್ಯಕ್ರಮದ ಪೂರ್ಣ ವೆಚ್ಚವನ್ನು ಭರಿಸುತ್ತಿರುವುದು ಸರಿಯಲ್ಲ. ವಿಶ್ವವಿದ್ಯಾಲಯದ ಹಂತದಲ್ಲೇ ಕಾರ್ಯಕ್ರಮಕ್ಕೆ ಒಪ್ಪಿಗೆ ನೀಡಿರುವುದು ಸಮಂಜಸವಲ್ಲ, ಇದು ಶಿಷ್ಟಾಚಾರದ ಉಲ್ಲಂಘನೆ. ಜಿಲ್ಲಾ ಉಸ್ತುವಾರಿ ಸಚಿವರು, ಇಲಾಖೆಯ ಸಚಿವರನ್ನು ಆಹ್ವಾನಿಸದೆ ಸರ್ಕಾರಕ್ಕೆ ಅಗೌರವ ತೋರಲಾಗಿದೆ ಎಂದು ನೋಟಿಸ್‌ನಲ್ಲಿ ತಿಳಿಸಲಾಗಿದೆ.

'ಅಧಿಕಾರ ವ್ಯಾಪ್ತಿ ಮೀರಿ, ಏಕಪಕ್ಷೀಯ ನಿರ್ಧಾರ ಕೈಗೊಳ್ಳಲಾಗಿದೆ. ಇದು ಕೆಎಸ್‌ಒಯು ಕಾಯ್ದೆಯ ಉಲ್ಲಂಘನೆ. ಹೀಗಾಗಿ ಕಾರ್ಯಕ್ರಮ ಮುಂದೂಡಲು ಆದೇಶಿಸಿದ್ದು, ಇದನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಈ ಬಗ್ಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡಬೇಕು' ಎಂದು ಸೂಚಿಸಲಾಗಿದೆ.

ಅವಕಾಶ ಇಲ್ಲ: ಖಾಸಗಿ ಕಾರ್ಯಕ್ರಮಕ್ಕೆ ವಿ.ವಿ ಪ್ರಾಯೋಜಕತ್ವ ವಹಿಸಲು ಅವಕಾಶ ನೀಡುವುದಿಲ್ಲ. ಕಾರ್ಯಕ್ರಮ ಮುಂದೂಡಲು ಸೂಚಿಸಲಾಗುವುದು ಎಂದು ಸುಧಾಕರ್ ಅವರು ಸದನದಲ್ಲಿ ಹೇಳಿದ್ದರು.

'ರಾಜ್ಯಪಾಲರು, ಕೇಂದ್ರದ ಶಿಕ್ಷಣ ಸಚಿವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಲಾಗಿದೆ. ವಿಶ್ವವಿದ್ಯಾಲಯದ ಸಮ ಕುಲಾಧಿಪತಿಯಾದ ನನಗೇ ಆಹ್ವಾನ ನೀಡಿಲ್ಲ. ಶಿಷ್ಟಾಚಾರ ಉಲ್ಲಂಘಿಸಿರುವುದರ ಹಿಂದಿನ ಉದ್ದೇಶ ಏನು ಎಂಬುದು ಗೊತ್ತಿಲ್ಲ' ಎಂದಿದ್ದರು.

ಮೌಲ್ಯಮಾಪನ ಆರಂಭಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆಯ (ಎಸ್‌ಎಎಡಿ) ಸಹಾಯಕ ನಿಯಂತ್ರಕರ (ಎ.ಸಿ) ನೇಮಕಾತಿಗೆ ಮುಖ್ಯ ಪರೀಕ್ಷೆ ನಡೆದು ಒಂದು ವರ್ಷ ಕಳೆದರೂ ಮೌಲ್ಯಮಾಪನ ಆರಂಭಿಸಿಲ್ಲ ಎಂದು ಅಭ್ಯರ್ಥಿಗಳು ತಿಳಿಸಿದ್ದಾರೆ.

ಕೆಎಎಸ್ ಪರೀಕ್ಷೆಗಿಂತ ಐದು ತಿಂಗಳು ಮುಂಚಿತವಾಗಿ ಸಹಾಯಕ ನಿಯಂತ್ರಕರ ಪರೀಕ್ಷೆ ಜರುಗಿತು. ಆದರೆ, ಕೆಎಎಸ್ ಮುಖ್ಯ ಪರೀಕ್ಷೆ ಫಲಿತಾಂಶವನ್ನು ಈಗಾಗಲೇ ಪ್ರಕಟಿಸಲಾಗಿದೆ. ಕೆಎಎಸ್ ಪರೀಕ್ಷೆಯ ಉತ್ತರ ಪತ್ರಿಕೆಗಳು ಸುಮಾರು 36 ಸಾವಿರ, ಎ.ಸಿ. ಪರೀಕ್ಷೆಯ ಉತ್ತರ ಪತ್ರಿಕೆಗಳು ಸುಮಾರು 13ರಿಂದ 14 ಸಾವಿರ ಎಂದು ವಿವರಿಸಿದ್ದಾರೆ.

ಮೌಲ್ಯಮಾಪನ ಆರಂಭಿಸುವಂತೆ ಕೆಪಿಎಸ್‌ಸಿ ಕಾರ್ಯದರ್ಶಿಗೆ ಸುಮಾರು 30 ಬಾರಿ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಹಲವು ಅಭ್ಯರ್ಥಿಗಳು ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದು, ಫಲಿತಾಂಶಕ್ಕೆ ಎದುರು ನೋಡುತ್ತಿದ್ದಾರೆ. ಕೂಡಲೇ ಮೌಲ್ಯಮಾಪನ ಆರಂಭಿಸಿ, ಫಲಿತಾಂಶ ಪ್ರಕಟಿಸಬೇಕು ಎಂದು ಅಭ್ಯರ್ಥಿಗಳು ಹೇಳಿಕೆಯಲ್ಲಿ ಮನವಿ ಮಾಡಿದ್ದಾರೆ.

ನಿವೃತ್ತ ಸರ್ಕಾರಿ ನೌಕರರ ಪ್ರತಿಭಟನೆ ನಾಳೆ

ಬೆಂಗಳೂರು: 7ನೇ ವೇತನ ಆಯೋಗದ ಶಿಫಾರಸುಗಳನ್ನು ರಾಜ್ಯ ಸರ್ಕಾರ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದಿಂದ ಮಾರ್ಚ್ 25ರ ಬೆಳಿಗ್ಗೆ 10.30ಕ್ಕೆ ಸರ್ಕಾರಿ ನೌಕರರ ಸಂಘದ ಆವರಣದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ.

ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದಿರುವ ಕೇಂದ್ರ ಸರ್ಕಾರದ ಆರ್ಥಿಕ ಆಯೋಗದ ಶಿಫಾರಸುಗಳನ್ನು ಹಿಂದಕ್ಕೆ ಪಡೆಯುವಂತೆ ಒತ್ತಾಯಿಸಿ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ ನಡೆಸಲಾಗುವುದು ಎಂದು ಸಂಘದ ಅಧ್ಯಕ್ಷ ಎಲ್.ಬೈರಪ್ಪ ತಿಳಿಸಿದ್ದಾರೆ.

'ಸಾಬೂನು ಕಾರ್ಖಾನೆ ಮುಚ್ಚಲು ಬಿಡಲ್ಲ'

ಬೆಂಗಳೂರು: 'ಮೈಸೂರು ಶ್ರೀಗಂಧದ ಸಾಬೂನು ಕಾರ್ಖಾನೆ ಮುಚ್ಚಲು ಸರ್ಕಾರ ತಯಾರಿ ನಡೆಸಿದೆ. ಇದರ ಭಾಗವಾಗಿ ಸುಮಾರು 10 ಎಕರೆ ಭೂಮಿಯನ್ನು ಖಾಸಗಿಯವರಿಗೆ ನೀಡಲು ಮುಂದಾಗಿದೆ' ಎಂದು ಬಿಜೆಪಿಯ ಕೆ.ಗೋಪಾಲಯ್ಯ ಆರೋಪಿಸಿದರು.

ಬಜೆಟ್ ಮೇಲಿನ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, 'ಕಾರ್ಖಾನೆ ಆವರಣದಲ್ಲಿ ಸಾಕಷ್ಟು ಖಾಲಿ ಜಾಗವಿದೆ. ಇದರಲ್ಲಿ ಸುಮಾರು 10.2 ಎಕರೆ ಜಮೀನನ್ನು ರಿಯಲ್ ಎಸ್ಟೇಟ್‌ನವರಿಗೆ ನೀಡಲು ಸರ್ಕಾರ ಮುಂದಾಗಿದೆ. ಕ್ರಮೇಣ ಕಾರ್ಖಾನೆ ಮುಚ್ಚುತ್ತಾರೆ ಎಂಬ ಮಾತು ಕೇಳಿ ಬರುತ್ತಿದೆ. ಯಾವುದೇ ಕಾರಣಕ್ಕೂ ಮುಚ್ಚಲು ಬಿಡುವುದಿಲ್ಲ' ಎಂದು ಹೇಳಿದರು.

'ಮೈಸೂರು ಅರಸರು ಸ್ಥಾಪಿಸಿರುವ ಈ ಕಾರ್ಖಾನೆ ಕರ್ನಾಟಕದ ಹೆಮ್ಮೆಯ ಸಂಸ್ಥೆ. ಈಗ ₹1,000 ಕೋಟಿಯಷ್ಟು ಠೇವಣಿ ಹೊಂದಿದೆ. ಕಾರ್ಖಾನೆಯನ್ನು ಪುನಶ್ಚೇತನಗೊಳಿಸಿ, ಆಧುನಿಕ ಕಾಲಕ್ಕೆ ತಕ್ಕಂತೆ ಮೇಲ್ದರ್ಜೆಗೇರಿಸಬೇಕು. ಲಾಭದಲ್ಲಿರುವ ಸಂಸ್ಥೆಯನ್ನು ಇನ್ನಷ್ಟು ಲಾಭದತ್ತ ಕೊಂಡೊಯ್ಯಬೇಕು' ಎಂದು ಒತ್ತಾಯಿಸಿದರು.

'ಇಲ್ಲಿ ಗುತ್ತಿಗೆ ನೌಕರರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಇವರಿಗೆ ಕೊಡುತ್ತಿರುವ ಸಂಬಳವೂ ಅತಿ ಕಡಿಮೆ ಇದ್ದು, ₹30 ಸಾವಿರಕ್ಕಾದರೂ ಏರಿಕೆ ಮಾಡಬೇಕು. ಹೊಸ ನೇಮಕಾತಿ ಮಾಡಿಕೊಳ್ಳಬೇಕು' ಎಂದು ಒತ್ತಾಯಿಸಿದರು.

ಹೋಟೆಲ್ ವ್ಯವಹಾರ ಶೇ 40 ಕುಸಿತ

ಎಲ್‌ಪಿಜಿ ಕೊರತೆ: ಕಾಳಸಂತೆಯಲ್ಲಿ ದುಬಾರಿ ಬೆಲೆಗೆ ಮಾರಾಟ

● ಕೆ.ಎಸ್.ಸುನಿಲ್

ಬೆಂಗಳೂರು: ವಾಣಿಜ್ಯ ಬಳಕೆಯ ಸಿಲಿಂಡರ್‌ಗಳ ಅಭಾವ ತೀವ್ರವಾಗಿದ್ದು, ಹೋಟೆಲ್ ಉದ್ಯಮಕ್ಕೆ ದೊಡ್ಡ ಹೊಡೆತ ಬಿದ್ದಿದೆ. ದಿನೇ ದಿನೇ ಸಿಲಿಂಡರ್ ಸಮಸ್ಯೆ ಉಲ್ಬಣಿಸುತ್ತಿದ್ದು, ಹೋಟೆಲ್ ವ್ಯವಹಾರ ಶೇಕಡ 40ರಷ್ಟು ಕುಸಿದಿದೆ.

ದುಪ್ಪಟ್ಟು ಹಣ ನೀಡಿದರೂ ಸಿಲಿಂಡರ್ ಸಿಗದ ಕಾರಣ ಹಲವು ಹೋಟೆಲ್, ದರ್ಶನಿ, ರೆಸ್ಟೋರೆಂಟ್, ಢಾಬಾಗಳು ಬಂದ್ ಆಗಿವೆ. ಇದರ ಹೊರತಾಗಿಯೂ ಕೆಲವು ಹೋಟೆಲ್‌ನವರು ಇಂಡಕ್ಷನ್ ಸ್ಟೌ, ಸೌದೆ ಒಲೆ, ಎಲೆಕ್ಟ್ರಿಕ್ ಸ್ಟೌ ಸಹಿತ ಪರ್ಯಾಯ ವ್ಯವಸ್ಥೆ ಮಾಡಿಕೊಂಡು ದಿನದೂಡುತ್ತಿದ್ದಾರೆ.

ಮೆನುವಿನಲ್ಲಿ ಕೆಲವೊಂದು ಖಾದ್ಯಗಳನ್ನು ಕಡಿತಗೊಳಿಸಿ, ಸೀಮಿತ ಪ್ರಮಾಣದಲ್ಲಿ ಆಹಾರ ವಿತರಿಸಲಾಗುತ್ತಿದೆ.

ಬೆಂಗಳೂರು ನಗರದಲ್ಲಿ 40 ಸಾವಿರಕ್ಕೂ ಅಧಿಕ ಹೋಟೆಲ್‌ಗಳಿವೆ. ಸಾರ್ವಜನಿಕರು, ಆಟೊ–ಟ್ಯಾಕ್ಸಿ ಚಾಲಕರು, ಆನ್‌ಲೈನ್ ಡೆಲಿವರಿ ನೌಕರರು, ಕಟ್ಟಡ ನಿರ್ಮಾಣ ಕಾರ್ಮಿಕರು, ಆಸ್ಪತ್ರೆಗಳ ರೋಗಿಗಳು, ಅವಿವಾಹಿತರು, ಹಿರಿಯ ನಾಗರಿಕರು , ಪೇಯಿಂಗ್ ಗೆಸ್ಟ್‌ಗಳಲ್ಲಿ ವಾಸವಾಗಿರುವವರು ನಿತ್ಯ ಹೋಟೆಲ್‌ಗಳನ್ನು ಅವಲಂಬಿಸಿದ್ದಾರೆ. ಗ್ಯಾಸ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಿರುವ ಕಾರಣ 40 ಸಾವಿರ ಹೋಟೆಲ್ ಉದ್ಯಮಿಗಳು, ಆರು ಲಕ್ಷಕ್ಕೂ ಹೆಚ್ಚು ನೌಕರರಿಗೆ ಸಮಸ್ಯೆ ಉಂಟಾಗಿದೆ.

ಹೋಟೆಲ್ ಎದುರು 'ಸಿಲಿಂಡರ್ ಕೊರತೆ, ಗ್ರಾಹಕರು ಸಹಕರಿಸಿ' ಎಂಬ ಫಲಕಗಳು ಕಂಡುಬರುತ್ತಿವೆ. ಹತ್ತಾರು ಖಾದ್ಯಗಳನ್ನು ಮಾಡುತ್ತಿದ್ದ ಹೋಟೆಲ್‌ಗಳಲ್ಲಿ ಈಗ ಉಪ್ಪಿಟ್ಟು, ರೈಸ್ ಬಾತ್, ಕೇಸರಿಬಾತ್ ಮಾತ್ರ ತಯಾರಿಸಲಾಗುತ್ತಿದೆ. ನಗರದಲ್ಲಿ ವಾರಾಂತ್ಯದಲ್ಲಿ ಗ್ರಾಹಕರಿಂದ ತುಂಬಿರುತ್ತಿದ್ದ ರಾಜಾಜಿನಗರ, ಮಲ್ಲೇಶ್ವರ, ವಿಜಯನಗರ, ಬಸವೇಶ್ವರ ನಗರ, ಜಯನಗರದ ಹಲವು ಹೋಟೆಲ್‌ಗಳು ಮುಚ್ಚಿವೆ.

'ಹೋಟೆಲ್‌ಗಳಲ್ಲಿ ಸೌದೆ ಬಳಸಲಾಗುತ್ತಿದೆ. ಹಾಗಾಗಿ ಸೌದೆಗೆ ಬೇಡಿಕೆ ಹೆಚ್ಚಾಗಿ, ಅವುಗಳ ಬೆಲೆಯಲ್ಲೂ ಏರಿಕೆಯಾಗಿದೆ. ಕ್ವಿಂಟಲ್‌ಗೆ ₹3,500ಕ್ಕೆ ಸಿಗುತ್ತಿದ್ದ ಸೌದೆ, ಈಗ ₹5 ಸಾವಿರದಿಂದ ₹8 ಸಾವಿರಕ್ಕೆ ಏರಿಕೆಯಾಗಿದೆ. ಎಲ್‌ಪಿಜಿ ಸಿಲಿಂಡರ್‌ಗಳಲ್ಲಿ ಅಡುಗೆ ಮಾಡಿ ರೂಢಿಯಾಗಿದ್ದ ಸಿಬ್ಬಂದಿಯು, ಈಗ ಸೌದೆ ಒಲೆಯಲ್ಲಿ ಅಡುಗೆ ತಯಾರಿಸಲು ಕಷ್ಟಪಡುತ್ತಿದ್ದಾರೆ. ಸಿಲಿಂಡರ್ ಕೊರತೆ ಯಾವತ್ತೂ ಆಗಿರಲಿಲ್ಲ' ಎಂದು ಹೋಟೆಲ್ ಮಾಲೀಕರು ಹೇಳಿದರು.

'ಗ್ಯಾಸ್ ಸ್ಟೌಗಳಲ್ಲಿ ಒಂದೆರೆಡು ತಾಸುಗಳಲ್ಲಿ ಅಡುಗೆಗಳು ತಯಾರಾಗುತ್ತಿದ್ದವು. ಆದರೆ, ಈಗ ಹೆಚ್ಚು ಸಮಯ ತೆಗೆದುಕೊಳ್ಳುತ್ತಿದೆ. ₹2 ಸಾವಿರಕ್ಕೆ ಸಿಗುತ್ತಿದ್ದ ಸೌದೆ ಒಲೆಗಳು, ಈಗ ₹4 ಸಾವಿರದಿಂದ ₹5 ಸಾವಿರಕ್ಕೆ ಹೆಚ್ಚಳವಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

'ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ ₹1,800. ಆದರೆ, ಕಾಳಸಂತೆಯಲ್ಲಿ ₹7 ಸಾವಿರದಿಂದ ₹8 ಸಾವಿರಕ್ಕೆ ಮಾರಾಟ ಮಾಡಲಾಗುತ್ತಿದೆ. ಕಾಫಿ–ಟೀ ಅಂಗಡಿ, ಪಾನಿಪುರಿ, ಗೋಬಿ ಮಂಚೂರಿ ಅಂಗಡಿಗಳು ಬಂದ್ ಆಗಿವೆ' ಎಂದು ಜಾಲಹಳ್ಳಿ ಕ್ರಾಸ್ ಬಳಿಯ ಹೋಟೆಲ್ ಮಾಲೀಕ ರವಿ ಹೇಳಿದರು.

ಪೇಯಿಂಗ್ ಗೆಸ್ಟ್‌ಗಳಲ್ಲಿ (ಪಿ.ಜಿ) ಸ್ವಲ್ಪ ಮಟ್ಟಿಗೆ ಚೇತರಿಕೆ ಕಾಣುತ್ತಿದೆ. ಮೂರು ಹೊತ್ತಿನ ಬದಲು ಎರಡು ಹೊತ್ತಿನ ಊಟ ನೀಡಲಾಗುತ್ತಿದೆ. ಕೆಲ ಮಂದಿ ಮನೆಯಿಂದಲೇ ಕೆಲಸ ಮಾಡುತ್ತಿದ್ದು, ಆಹಾರದ ಬೇಡಿಕೆ ಕಡಿಮೆಯಾಗಿದೆ. ಇನ್ನೂ ಕೆಲವರು ವಾಪಸ್ ಊರಿಗೆ ಹೋಗಿ ಅಲ್ಲಿಂದಲೇ ಕೆಲಸ ಮಾಡುತ್ತಿದ್ದಾರೆ.

'ಬೆಂಗಳೂರಿನಲ್ಲಿ 15 ಸಾವಿರ ಪಿ.ಜಿಗಳಿದ್ದು, 3,600 ನೋಂದಣಿ ಆಗಿವೆ. ಈ ಪಿ.ಜಿಗಳಿಗೆ ಆದ್ಯತೆ ಮೇಲೆ ಸಿಲಿಂಡರ್ ವಿತರಿಸುವಂತೆ ಆಹಾರ ಇಲಾಖೆ ಸಚಿವರಿಗೆ ಮನವಿ ಮಾಡಲಾಗಿದೆ' ಎಂದು ಬೆಂಗಳೂರು ಪಿ.ಜಿ ಮಾಲೀಕರ ಕಲ್ಯಾಣ ಸಂಘದ ಅಧ್ಯಕ್ಷ ಡಿ.ಟಿ.ಅರುಣ್ ಕುಮಾರ್ ತಿಳಿಸಿದರು.

'ಕೇಂದ್ರವು ಶೇಕಡ 20ರಷ್ಟು ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಕೆ ಮಾಡುವುದಾಗಿ ಭರವಸೆ ನೀಡಿದೆ. ಅದರಂತೆ ವಿತರಣೆ ಆದಲ್ಲಿ ಹೋಟೆಲ್ ಉದ್ಯಮಿಗಳಿಗೆ ಇದು ಆಸರೆಯಾಗಲಿದೆ' ಎಂದು ಹೋಟೆಲ್ ಮಾಲೀಕ ಗಿರೀಶ್ ತಿಳಿಸಿದರು.

ಹತ್ತು ದಿನಗಳಲ್ಲಿ ವಿತರಣೆಯಾಗಿರುವ ಮಾಹಿತಿ

ಗೃಹ ಬಳಕೆ ಸಿಲಿಂಡರ್	ವಾಣಿಜ್ಯ ಬಳಕೆ ಸಿಲಿಂಡರ್	ಆಟೊ ಎಲ್‌ಪಿಜಿ
30,51,045	67,641	761.655 ಟನ್



ನಗರದ ವಿಶ್ವೇಶ್ವರಯ್ಯ ಟವರ್ ಕಟ್ಟಡದಲ್ಲಿರುವ ಕೆಜಿಐಡಿ ಕ್ಯಾಂಟೀನ್ ಸಿಬ್ಬಂದಿ ಸೌದೆ ಒಲೆಯಲ್ಲಿ ಅಡುಗೆ ತಯಾರಿಸಿದರು –ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

'ಶೇಕಡ 50ರಷ್ಟು ಸಿಲಿಂಡರ್ ಪೂರೈಸಲಿ'

ಎರಡು ವಾರಗಳಿಂದ ಹೋಟೆಲ್ ಉದ್ಯಮಕ್ಕೆ ₹150 ಕೋಟಿಗೂ ಅಧಿಕ ನಷ್ಟ ಉಂಟಾಗಿದೆ. ಸೋಮವಾರದಿಂದ ವಾಣಿಜ್ಯ ಬಳಕೆ ಸಿಲಿಂಡರ್ ಪೂರೈಸುವುದಾಗಿ ಸರ್ಕಾರ ಭರವಸೆ ನೀಡಿದೆ. ಸಿಲಿಂಡರ್ ಪೂರೈಕೆ ಶೇಕಡ 33ರಷ್ಟು ಆಗಬಹುದು. ಸಿಲಿಂಡರ್ ದೊರೆತರೆ ಹೋಟೆಲ್‌ಗಳು ಎಂದಿನಂತೆ ಕಾರ್ಯನಿರ್ವಹಿಸುತ್ತವೆ. ಹೋಟೆಲ್‌ಗಳಿಗೆ ಶೇಕಡ 50ರಷ್ಟು ಎಲ್‌ಪಿಜಿ ಸಿಲಿಂಡರ್ ಪೂರೈಸುವಂತೆ ಕೇಂದ್ರಕ್ಕೆ ಪತ್ರ ಬರೆಯಲಾಗಿದೆ. ಸದ್ಯ ಶೇಕಡ 2ರಷ್ಟು ಪ್ರಮಾಣದ ಅನಿಲ ಸಿಲಿಂಡರ್ ಪೂರೈಸಲಾಗುತ್ತಿದೆ.

ಪಿ.ಸಿ.ರಾವ್, ಬೆಂಗಳೂರು ಹೋಟೆಲ್ ಮಾಲೀಕರ ಸಂಘದ ಗೌರವಾಧ್ಯಕ್ಷ

ಸಿಹಿ ವಿತರಿಸಿ ಪ್ರತಿಭಟನೆ

ಎಲ್‌ಪಿಜಿ ಸಿಲಿಂಡರ್ ಪೂರೈಕೆ ಮಾಡುವಂತೆ ಆಗ್ರಹಿಸಿ ರಾಜಾಜಿನಗರದಲ್ಲಿ ಬೇಕರಿ ಹಾಗೂ ಕಾಂಡಿಮೆಂಟ್ಸ್ ಮಾಲೀಕರು ಪ್ರತಿಭಟನೆ ನಡೆಸಿದರು. ಖಾಲಿ ಸಿಲಿಂಡರ್‌ಗಳಿಗೆ ಹೂವಿನ ಹಾರ ಹಾಕಿ, ಸೌದೆ ಒಲೆಯಲ್ಲಿ ಸಿಹಿ ತಯಾರಿಸಿ, ಗ್ರಾಹಕರಿಗೆ ವಿತರಿಸಿ ವಿನೂತನವಾಗಿ ಪ್ರತಿಭಟಿಸಿದರು.

'ಸಿಲಿಂಡರ್ ಪೂರೈಸಿ, ನಷ್ಟ ತಪ್ಪಿಸಿ. ಪರಿಸ್ಥಿತಿ ಇದೇ ರೀತಿ ಮುಂದುವರಿದರೆ ಜೀವನ ನಡೆಸುವುದು ಕಷ್ಟ' ಎಂದು ಪ್ರತಿಭಟನಕಾರರು ಅಲವತ್ತುಕೊಂಡರು.

ಸಿಲಿಂಡರ್ ಅಭಾವ: ಅರ್ಜಿ ವಿಲೇವಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುದ್ಧದ ಸಂದರ್ಭದಲ್ಲಿ ಬೇರೆ ದೇಶಗಳಿಗೆ ಹೋಲಿಕೆ ಮಾಡಿದರೆ ಭಾರತ ಸರ್ಕಾರ ಶಕ್ತಿಮೀರಿ ಕೆಲಸ ಮಾಡುತ್ತಿದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, 'ಅಡುಗೆ ಅನಿಲ ಪೂರೈಕೆಯಲ್ಲಿನ ವ್ಯತ್ಯಯ ಸರಿಪಡಿಸಲು ಕೇಂದ್ರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು' ಎಂದು ಕೋರಲಾದ ಅರ್ಜಿಯನ್ನು ವಿಲೇವಾರಿ ಮಾಡಿದೆ.

'ಬೆಂಗಳೂರು ಹೋಟೆಲ್‌ಗಳ ಸಂಘ'ದ ಕಾರ್ಯದರ್ಶಿ ವೀರೇಂದ್ರ ಎನ್.ಕಾಮತ್ ಸೇರಿ ಒಟ್ಟು ಐವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಂ ಅವರಿದ್ದ ಪೀಠ ಸೋಮವಾರ ವಿಚಾರಣೆ ನಡೆಸಿತು.

ಕೇಂದ್ರ ಸರ್ಕಾರದ ಪರ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಈ ವಿಚಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳ ಜೊತೆ ಸಮಾಲೋಚನೆ ನಡೆಸುತ್ತದೆ. ಹಂಚಿಕೆದಾರರಿಂದ ಎಲ್‌ಪಿಜಿ ಪೂರೈಕೆಯಲ್ಲಿ ವಂಚನೆ ಕಂಡುಬಂದರೆ ರಾಜ್ಯ ಸರ್ಕಾರ ಕಠಿಣ ಕ್ರಮ ಕೈಗೊಳ್ಳಬೇಕು' ಎಂದರು.

'ಕೆಲವು ಬೆಳವಣಿಗೆಗಳು ಕೇಂದ್ರದ ನಿಯಂತ್ರಣದಲ್ಲಿ ಇಲ್ಲ. ಪ್ರತಿದಿನವೂ ಪರಿಸ್ಥಿತಿ ಬದಲಾಗುತ್ತಿದೆ. ಆದಾಗ್ಯೂ, ಎಲ್‌ಪಿಜಿ ಪೂರೈಕೆಯಲ್ಲಿ ಕೊರತೆಯಾಗುವುದನ್ನು ತಪ್ಪಿಸಲು ಭಾರತ ಸರ್ಕಾರ ಸಾಧ್ಯವಾದ ಎಲ್ಲ ಶ್ರಮ ಹಾಕುತ್ತಿದೆ. ಈ ವಿಚಾರವನ್ನು ಕಾರ್ಯಾಂಗದ ವಿವೇಚನೆಗೇ ಬಿಡಬೇಕು' ಎಂದು ಪ್ರತಿಪಾದಿಸಿ ಈ ಸಂಬಂಧ ಪ್ರಮಾಣಪತ್ರ ಸಲ್ಲಿಸಿದರು. ಆದಾಗ್ಯೂ, 'ರಾಜ್ಯ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವರ ನೇತೃತ್ವದಲ್ಲಿ ನಡೆಯುವ ಸಭೆಯಲ್ಲಿ ಅರ್ಜಿದಾರರು ಪರಿಸ್ಥಿತಿಯ ಮನವರಿಕೆ ಮಾಡಿಕೊಡಬಹುದು' ಎಂದು ತಿಳಿಸಿ ಅರ್ಜಿ ಇತ್ಯರ್ಥಪಡಿಸಿತು.



ನಗರದಲ್ಲಿ ಇಂದು

ಯೂತ್ ಫಾರ್ ಅಂಡರ್‌ಸ್ಟ್ಯಾಂಡಿಂಗ್ ಆಫ್ ಜಿಯೊಸೈನ್ಸ್ ಆ್ಯಂಡ್ ಆ್ಯಕ್ಷನ್ (ಯುಗ) ಚಾಲನೆ: ಉದ್ಘಾಟನೆ: ಎನ್.ಎಸ್. ಬೋಸರಾಜು, ದಿಕ್ಸೂಚಿ ಭಾಷಣ: ಶೈಲೇಶ್ ನಾಯಕ್, ಅತಿಥಿಗಳು: ಬಿ.ಕೆ. ಪವಿತ್ರಾ, ಅಶೋಕ್ ಎಂ. ರಾಯಚೂರು, ಶ್ರೀನಿವಾಸುಲು, ಎನ್.ಎಲ್. ರಾಜೇಶ್, ಎ.ಎಚ್. ರಾಜಾಸಾಬ್, ಅಶೋಕ್ ಎಸ್. ಆಲೂರು, ಆಯೋಜನೆ: 'ಪ್ರಯೋಗ', ಸ್ಥಳ: ಭಾರತೀಯ ವಿದ್ಯಾ ಭವನ, ಬೆಳಿಗ್ಗೆ 10

ವಿಶ್ವ ಜಲದಿನ: ಉದ್ಘಾಟನೆ: ಸುಭಾಸಿಷ್ ತ್ರಿಪಾಠಿ, ಅಧ್ಯಕ್ಷತೆ: ಎಂ. ಕೇಶವಮೂರ್ತಿ, ಅತಿಥಿಗಳು: ಲಕ್ಷ್ಮಣ್ ನಂದಗಿರಿ, ಮಾಧವ, ಯು.ಎನ್. ಕೆಂಪಯ್ಯ, ಎ.ವಿ. ಶ್ರೀರಾಂ, ಆಯೋಜನೆ: ವಿಶ್ವೇಶ್ವರಯ್ಯ ವಿಶ್ವವಿದ್ಯಾಲಯದ ಸಿವಿಲ್ ಎಂಜಿನಿಯರಿಂಗ್ ವಿಭಾಗ, ಸ್ಥಳ: ಜ್ಞಾನಭಾರತಿ ಯುವಿಸಿಇ, ಬೆಳಿಗ್ಗೆ 10.30

ಕೆ.ವಿ. ಶಂಕರಗೌಡ ದತ್ತಿ ಉಪನ್ಯಾಸ: ಅಧ್ಯಕ್ಷತೆ: ಅಪ್ಪಾರೆಡ್ಡಿ ಹರೀಶ್, 'ಕನ್ನಡ ಸಾಹಿತ್ಯ ಮತ್ತು ಕಾನೂನು' ಬಗ್ಗೆ ಉಪನ್ಯಾಸ: ಜೆ.ಬಿ. ತಮ್ಮಣ್ಣ, ಉಪಸ್ಥಿತಿ: ಎಚ್.ಜಿ. ಬಾಲಗೋಪಾಲ್, ಸ್ವಪ್ನಾ ಎನ್., ಬಿ.ಎಸ್. ವಿಜಯ, ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಕಾನೂನು ಮಹಾವಿದ್ಯಾಲಯ, ಗಾಯತ್ರಿನಗರ, ಬೆಳಿಗ್ಗೆ 10.30

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಉದ್ಘಾಟನೆ, ಕಿತ್ತೂರು ರಾಣಿ ಚನ್ನಮ್ಮ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಸಿದ್ದರಾಮಯ್ಯ, ಅತಿಥಿಗಳು: ಶೋಭಾ ಕರಂದ್ಲಾಜೆ, ಡಿ.ಕೆ. ಶಿವಕುಮಾರ್, ಲಕ್ಷ್ಮೀ ಆರ್. ಹೆಬ್ಬಾಳಕರ, ಅಧ್ಯಕ್ಷತೆ: ಉದಯ್ ಬಿ. ಗರುಡಾಚಾರ್, ಆಯೋಜನೆ: ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸ್ಥಳ: ರವೀಂದ್ರ ಕಲಾ ಕ್ಷೇತ್ರ, ಬೆಳಿಗ್ಗೆ 11

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ಯುಗಾದಿ ಸಂಭ್ರಮ: ಅತಿಥಿಗಳು: ಕೆ.ಮೋಹನ್‌ದೇವ್ ಆಳ್ವ, ಎಸ್.ಜಿ. ಸುಶೀಲಮ್ಮ, ರೀನಾ ಸುವರ್ಣ, ಆಯೋಜನೆ: ಸ್ಫೂರ್ತಿ ಮಹಿಳಾ ಸಮಾಜ, ಕೀರ್ತಿ ಮಹಿಳಾ ಸಮಾಜ, ಸ್ಥಳ: ಹೋಟೆಲ್ ರಜತಾದ್ರಿ ಪ್ಯಾಲೆಸ್, ಬೆಳಿಗ್ಗೆ 11

'ಕಾರ್ಮಿಕ ಮಾರುಕಟ್ಟೆಯಲ್ಲಿ ಯುವಕರು: ಕಲಿಕೆಯಿಂದ ಗಳಿಕೆಯ ಹಾದಿಗಳು' ವರದಿ ಬಿಡುಗಡೆ, ಸಂವಾದ: ಪ್ರಸ್ತುತಿ: ರೋಶಾ ಅಬ್ರಹಾಂ, ಸಂವಾದ: ಅಕ್ಷತಾ, ಸ್ವಾತಿ ಶಿವಾನಂದ, ಅದಿತಿ ಝಾ, ದಿವ್ಯ ವರ್ಮಾ, ನಿರ್ವಹಣೆ: ಅರ್ಜುನ್ ಜಯದೇವ್, ಆಯೋಜನೆ: ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ (ಬಿಐಸಿ), ದೊಮ್ಮಲೂರು, ಸಂಜೆ 5.30

'ಸಾಕೇತ ಸಾಮ್ರಾಜ್ಞಿ' 100ನೇ ಪ್ರಯೋಗ: ಆಯೋಜನೆ: ಕೋದಂಡರಾಮ ಕೃಪಾಪೋಷಿತ ಯಕ್ಷಗಾನ ಮಂಡಳಿ, ಹನುಮಗಿರಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

ಅದಮ್ಯ ರಂಗೋತ್ಸವ– ನಂಕಂಪನಿ ನಾಟಕ ಪ್ರದರ್ಶನ: ರಚನೆ: ಟಿ.ಪಿ. ಕೈಲಾಸಂ, ಸಂಗೀತ: ವಿ. ಮನೋಹರ್, ನಿರ್ದೇಶನ: ಋತ್ವಿಕ್ ಸಿಂಹ, ನಿರ್ಮಾಣ: ಜಸ್ಲಿನ್ ಋತ್ವಿಕ್ ಸಿಂಹ, ಆಯೋಜನೆ: ಅದಮ್ಯ ರಂಗ ಸಂಸ್ಕೃತಿ ಟ್ರಸ್ಟ್, ಸ್ಥಳ: ಸಂಸ ಬಯಲು ರಂಗ ಮಂದಿರ, ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6.30

ರಾಮನವಮಿ ವಿಶೇಷ



120ನೇ ವರ್ಷದ ಶ್ರೀರಾಮೋತ್ಸವ: 'ರುಕ್ಮಿಣಿ ಕಲ್ಯಾಣ' ಪ್ರವಚನ: ಖೇಡಾ ವೇದವ್ಯಾಸಾಚಾರ್, ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯನ: ಮೇಧಾ ವಿದ್ಯಾಭೂಷಣ್, ಪಿಟೀಲು: ಪ್ರಾದೇಶಾಚಾರ್, ಮೃದಂಗ: ನಾಗೇಂದ್ರ ಪ್ರಸಾದ್, ಘಟ: ರಘುನಂದನ್,ಆಯೋಜನೆ: ಶ್ರೀರಾಮ ಭಕ್ತ ಸಭಾ, ಸ್ಥಳ: ಶ್ರೀಕಂಠೇಶ್ವರ ಭವನ, ಐದನೇ ಅಡ್ಡ ರಸ್ತೆ, ಮಲ್ಲೇಶ್ವರ, ಸಂಜೆ 5.30

'ಶ್ರೀಮದ್ ರಾಮಾಯಣ' ಉಪನ್ಯಾಸ: ವಿದ್ಯಾಸಿಂಧುಮಾಧವ ತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ಅಭಯ ಲಕ್ಷ್ಮೀ ನರಸಿಂಹ ಚಾರಿಟೇಬಲ್ ಟ್ರಸ್ಟ್, ತ್ಯಾಗರಾಜನಗರ, ಸಂಜೆ 6

26ನೇ ಶ್ರೀರಾಮ ನವಮಿ ಸಂಗೀತೋತ್ಸವ: ಗಾಯನ: ಎಚ್.ಎಸ್. ಕಾರ್ತಿಕೇಯ ಶರ್ಮ ಮತ್ತು ವೃಂದ, ಆಯೋಜನೆ: ಆಂಜನೇಯ ಮತ್ತು ರಾಘವೇಂದ್ರ ಸ್ವಾಮಿ ದೇವಸ್ಥಾನ, ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ ಫೌಂಡೇಷನ್, ಸ್ಥಳ: ಆಂಜನೇಯ ಮತ್ತು ರಾಘವೇಂದ್ರ ಸ್ವಾಮಿ ದೇವಸ್ಥಾನದ ಆವರಣ, ಎಂಟನೇ ಕ್ರಾಸ್, ವೆಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30


ಶ್ರೀರಾಮನವಮಿ ಉತ್ಸವ: ನೃತ್ಯ ವೈಭವ, ಮೈಸೂರಿನ ಗಣೇಶ ಸಂಗೀತ ನೃತ್ಯಾಲಯ ಚಾರಿಟೇಬಲ್ ಕಲಾವಿದರಿಂದ, ನಿರ್ದೇಶನ: ಆರತಿ ಅರುಣ್. ಸ್ಥಳ: ಶ್ರೀರಾಮ ಮಂದಿರ, ಮಲ್ಲೇಶ್ವರ, ಸಂಜೆ 6.30











ಕಸದ ರಾಶಿಯಲ್ಲಿ ಮಹಿಳೆ ಮೃತದೇಹ ಪತ್ತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯನ್ನು ಕೊಲೆ ಮಾಡಿರುವ ದುಷ್ಕರ್ಮಿಗಳು ಮೃತದೇಹವನ್ನು ಕಸದ ರಾಶಿಗೆ ಎಸೆದು ಹೋಗಿರುವ ಘಟನೆ ಕೆಂಗೇರಿಯ ಮೈಲಸಂದ್ರದಲ್ಲಿ ನಡೆದಿದೆ.

ಮಹದೇಶ್ವರ ಬಡಾವಣೆಯ ನಿವಾಸಿ ಕೆಂಪಮ್ಮ (45) ಕೊಲೆಯಾದ ಮಹಿಳೆ.

ಹಳೇ ದ್ವೇಷದ ಕಾರಣಕ್ಕೆ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ. ಪ್ರಕರಣ ದಾಖಲಿಸಿಕೊಂಡಿರುವ ಕೆಂಗೇರಿ ಠಾಣೆಯ ಪೊಲೀಸರು ಆರೋಪಿಗಳ ಪತ್ತೆಗೆ ಹುಡುಕಾಟ ನಡೆಸುತ್ತಿದ್ದಾರೆ. ಕೆಂಗೇರಿ ಮುಖ್ಯರಸ್ತೆಯ ಮೈಲಸಂದ್ರದ ಬಸ್ ನಿಲ್ದಾಣದ ಹಿಂಭಾಗದ ಕಸದ ರಾಶಿಯಲ್ಲಿ ಮೃತದೇಹ ಪತ್ತೆಯಾಗಿದೆ.

‘ಸಾಕ್ಷ್ಯ ನಾಶಪಡಿಸುವ ಉದ್ದೇಶದಿಂದ ಮೃತದೇಹವನ್ನು ರಸ್ತೆ ಪಕ್ಕದ ಕಸದ ರಾಶಿಯಲ್ಲಿ ಎಸೆದಿದ್ದಾರೆ. ಸೋಮವಾರ ಮುಂಜಾನೆ ರಸ್ತೆಯಲ್ಲಿ ಓಡಾಡುತ್ತಿದ್ದ ಸ್ಥಳೀಯರು ಕಸದ ರಾಶಿಯಲ್ಲಿ ಮೃತದೇಹ ಇರುವುದನ್ನು ಗಮನಿಸಿ, ತಕ್ಷಣ ಪೊಲೀಸರಿಗೆ ಮಾಹಿತಿ ನೀಡಿದ್ದರು’ ಎಂದು ಮೂಲಗಳು ಹೇಳಿವೆ.

ತಲೆಗೆ ಬಲವಾದ ಪೆಟ್ಟು: ‘ಮಹಿಳೆಯ ತಲೆಗೆ ಮಾರಕಾಸ್ತ್ರಗಳಿಂದ ಹೊಡೆದು ಕೊಲೆ ಮಾಡಲಾಗಿದೆ. ಬೇರೆಡೆ ಕೊಲೆ ಮಾಡಿ, ಮೃತದೇಹವನ್ನು ಮೈಲಸಂದ್ರದ ಬಸ್ ನಿಲ್ದಾಣದ ಹಿಂಭಾಗಕ್ಕೆ ತಂದು ಆರೋಪಿಗಳು ಎಸೆದು ಹೋಗಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಸ್ಥಳಕ್ಕೆ ಶ್ವಾನದಳ ಹಾಗೂ ಬೆರಳಚ್ಚು ತಜ್ಞರು ಭೇಟಿ ನೀಡಿ ಪರಿಶೀಲಿಸಿದರು. ಕೃತ್ಯ ನಡೆದ ಸ್ಥಳದ ಸುತ್ತಮುತ್ತಲ ಪ್ರದೇಶಗಳಲ್ಲಿ ಅಳವಡಿಸಿರುವ ಸಿ.ಸಿ. ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ನಡೆಸಲಾಗಿದೆ. ಆರೋಪಿಗಳ ಪತ್ತೆಗೆ ವಿಶೇಷ ಪೊಲೀಸ್ ತಂಡವನ್ನು ರಚಿಸಲಾಗಿದೆ’ ಎಂದು ಹೇಳಿವೆ.

‘ಕೊಲೆಯಾದ ಮಹಿಳೆಯ ಕುಟುಂಬಸ್ಥರಿಗೆ ಮಾಹಿತಿ ನೀಡಲಾಗಿದೆ. ಕೃತ್ಯ ಎಸಗಲು ಕಾರಣ ಏನು ಎಂಬುದು ಪತ್ತೆಯಾಗಿಲ್ಲ. ಹಳೆಯ ದ್ವೇಷ ಅಥವಾ ಹಣಕಾಸಿನ ವಿಚಾರಕ್ಕೆ ಕೊಲೆ ನಡೆದಿದೆಯೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಹಣ ಅಕ್ರಮ ವರ್ಗಾವಣೆ ಜಾಲ: 32 ಮಂದಿ ಬಂಧನ

ಹೈದರಾಬಾದ್ (ಪಿಟಿಐ): ವಿಹಾನ್ ಡೈರೆಕ್ಟ್ ಸೇಲಿಂಗ್ ಪ್ರೈವೆಟ್ ಲಿಮಿಟೆಡ್ ಕಂಪನಿ ಮೂಲಕ ಹಣ ಕ್ರಮ ವರ್ಗಾವಣೆ ಮಾಡುತ್ತಿದ್ದ ಜಾಲವನ್ನು ಹೈದಾರಾಬಾದ್ ಪೊಲೀಸರು ಭೇದಿಸಿದ್ದಾರೆ.

ಪ್ರಕರಣ ಸಂಬಂಧ ಕರ್ನಾಟಕ, ಆಂಧ್ರ ಪ್ರದೇಶ ಮತ್ತು ತೆಲಂಗಾಣದಲ್ಲಿ ಒಟ್ಟು 32 ಮಂದಿಯನ್ನು ಬಂಧಿಸಲಾಗಿದೆ.

‘30 ತಂಡಗಳು ಏಕಕಾಲದಲ್ಲಿ ಅಂತರರಾಜ್ಯಗಳಲ್ಲಿ ಶೋಧ ನಡೆಸಿದ್ದವು’ ಎಂದು ಹೈದರಾಬಾದ್ ಪೊಲೀಸ್ ಆಯುಕ್ತ ವಿ.ಸಿ.ಸಜ್ಜನರ್ ತಿಳಿಸಿದ್ದಾರೆ.

‘ಬಹುತೇಕ ಆರೋಪಿಗಳು ಐಟಿ ಉದ್ಯೋಗಿಗಳು. ನಾಲ್ಕು ಪ್ರಕರಣಗಳಲ್ಲಿ ವಂಚನೆಗೆ ಒಳಗಾದ 11 ಮಂದಿಯ ವಿಚಾರಣೆ ನಡೆಸಿದ್ದು, ಅವರು ಸುಮಾರು ₹75 ಲಕ್ಷ ಹಣವನ್ನು ಕಳೆದು ಕೊಂಡಿದ್ದಾರೆ. ಹಣ ಕಳೆದುಕೊಂಡಿರುವ ಇನ್ನೂ ಅನೇಕರ ವಿಚಾರಣೆ ನಡೆಸಬೇಕಿದೆ’ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ವಿಮಾನ ಪತನ: 80 ಮಂದಿ ಸಾವು?

‘ಟೇಕ್ ಆಫ್’ ಆಗುವಾಗ ಪತನ • 125 ಜನರನ್ನು ಹೊತ್ತೊಯ್ಯುತ್ತಿದ್ದ ವಿಮಾನ



ವಿಮಾನ ಪತನಗೊಂಡ ಕ್ಷಣ ದಟ್ಟ ಹೊಗೆ ಆವರಿಸಿತ್ತು —ಎಎಫ್‌ಪಿ ಚಿತ್ರ

ಬೊಗೋಟಾ (ಎಎಫ್‌ಪಿ): ಕೊಲಂಬಿಯಾದ ದಕ್ಷಿಣ ಭಾಗದಲ್ಲಿ ಸೋಮವಾರ ಸೇನಾ ಸಾರಿಗೆ ವಿಮಾನ ಅಪಘಾತಕ್ಕಿಡಾಗಿದ್ದು, ಕನಿಷ್ಠ 80 ಸೈನಿಕರು ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ ಎಂದು ಕೊಲಂಬಿಯಾದ ಸೇನೆ ತಿಳಿಸಿದೆ.

ಈಕ್ವೆಡಾರ್‌ನ ದಕ್ಷಿಣ ಗಡಿ ಬಳಿಯ ಪೋರ್ಟೊ ಲೆಗಿಜಾಮೊದಿಂದ ಸೈನಿಕರು ಮತ್ತು ಸಿಬ್ಬಂದಿ ಸೇರಿದಂತೆ 125 ಜನರನ್ನು ಹೊತ್ತೊಯ್ಯುತ್ತಿದ್ದ ‘ಸಿ–130 ಹರ್ಕ್ಯುಲಸ್’ ವಿಮಾನ ‘ಟೇಕ್ ಆಫ್’ ಆಗುತ್ತಿದ್ದಂತೆ ಪತನಗೊಂಡು ಅಪಘಾತ ಸಂಭವಿಸಿದೆ.

‘ಅಪಘಾತದಲ್ಲಿ ಮೃತಪಟ್ಟವರ ಸಂಖ್ಯೆ ಸ್ಪಷ್ಟವಾಗಿಲ್ಲ. ಆದರೆ 40ಕ್ಕೂ ಹೆಚ್ಚು ಜನರನ್ನು ರಕ್ಷಿಸಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನದಲ್ಲಿ 114 ಸೈನಿಕರು ಮತ್ತು 11 ಸಿಬ್ಬಂದಿ ಇದ್ದರು ಎಂದು ಸೇನಾ ಮೂಲಗಳು ತಿಳಿಸಿವೆ.

ವಿಮಾನವು ಸಮೀಪದ ಅರಣ್ಯದಲ್ಲಿ ಪತನಗೊಂಡ ಬೆನ್ನಲ್ಲೇ ದೊಡ್ಡ ಪ್ರಮಾಣದಲ್ಲಿ ಸ್ಫೋಟ ಸಂಭವಿಸಿತು. ಬಳಿಕ ಅಲ್ಲಿ ಬೆಂಕಿ ಮತ್ತು ದಟ್ಟ ಹೊಗೆ ಆವರಿಸಿಕೊಂಡಿತು ಎಂದು ಮೂಲಗಳು ತಿಳಿಸಿವೆ. ವಿಮಾನ ಪತನದ ವಿಷಯ ತಿಳಿದ ಕೂಡಲೇ ಸ್ಥಳಕ್ಕೆ ರಕ್ಷಣಾ ಸಿಬ್ಬಂದಿ ಧಾವಿಸಿ, ರಕ್ಷಣಾ ಕಾರ್ಯದಲ್ಲಿ ತೊಡಗಿದರು.

ಇತ್ತೀಚಿನ ವಾರಗಳಲ್ಲಿ ಕೊಲಂಬಿಯಾ ಮತ್ತು ಈಕ್ವೆಡಾರ್‌ನ ಸೇನೆಗಳು ಮಾದಕವಸ್ತು ಕಳ್ಳಸಾಗಣೆ ತಡೆಯುವ ನಿಟ್ಟಿನಲ್ಲಿ ಕಾರ್ಯಾಚರಣೆಗಳನ್ನು ನಡೆಸುತ್ತಿವೆ. ಹೀಗಾಗಿ ಈ ಭಾಗದಲ್ಲಿ ಸೈನಿಕರ ಚಲನವಲನ ಹೆಚ್ಚಿದೆ.

‘ವಿಮಾನದಲ್ಲಿದ್ದ ಅನೇಕರು ಮೃತಪಟ್ಟಿದ್ದಾರೆ, ಸಾವಿನ ಸಂಖ್ಯೆ ನಿರ್ದಿಷ್ಟವಾಗಿ ಗೊತ್ತಾಗಿಲ್ಲ’ ಎಂದು ಕೊಲಂಬಿಯಾದ ರಕ್ಷಣಾ ಸಚಿವ ಪೆಡ್ರೊ ಸ್ಯಾಂಚೆಜ್ ತಿಳಿಸಿದ್ದಾರೆ. ‘ಇದು ದೊಡ್ಡ ದುರಂತ ಮತ್ತು ಅತ್ಯಂತ ನೋವಿನ ಘಟನೆ. ರಕ್ಷಣಾ ಪಡೆಗಳು ಈಗಾಗಲೇ ರಕ್ಷಣಾ ಕಾರ್ಯದಲ್ಲಿ ತೊಡಗಿವೆ. ಅಪಘಾತಕ್ಕೆ ಕಾರಣವೂ ದೃಢಪಟ್ಟಿಲ್ಲ’ ಎಂದು ಅವರು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಿದ್ದಾರೆ.

‘ವಿಮಾನದಲ್ಲಿ 110ಕ್ಕೂ ಹೆಚ್ಚು ಸೈನಿಕರಿದ್ದರು. ವಿಮಾನವು ನಗರ ಕೇಂದ್ರದಿಂದ ಕೇವಲ 3 ಕಿ.ಮೀ. ದೂರದಲ್ಲಿ ಅಪಘಾತಕ್ಕೀಡಾಗಿದೆ’ ಎಂದು ಅಲ್ಲಿನ ಸ್ಥಳೀಯ ಮಾಧ್ಯಮ ‘ಬ್ಲೂ ರೇಡಿಯೊ’ ವರದಿ ಮಾಡಿದೆ. ಇದು, ದಕ್ಷಿಣ ಅಮೆರಿಕದಲ್ಲಿ ತಿಂಗಳೊಳಗೆ ‘ಸಿ–130 ಹರ್ಕ್ಯುಲಸ್’ ವಿಮಾನ ಅಪಘಾತಗೊಂಡ ಎರಡನೇ ಪ್ರಕರಣ. ಫೆಬ್ರುವರಿ 27ರಂದು ಲಾ ಪಾಜ್ ಬಳಿ ನೋಟುಗಳನ್ನು ಹೊತ್ತೊಯ್ಯುತ್ತಿದ್ದ ಬೊಲಿವಿಯನ್ ಸೇನಾ ಸರಕು ವಿಮಾನ ಇಳಿಯುವಾಗ ಅಪಘಾತಕ್ಕೀಡಾಗಿತ್ತು. ಅದರಲ್ಲಿ ಕನಿಷ್ಠ 24 ಮಂದಿ ಮೃತಪಟ್ಟಿದ್ದರು.

ಸೇನೆಗಳಿಂದ ವ್ಯಾಪಕ ಬಳಕೆ

‘ಹರ್ಕ್ಯುಲಸ್’ ನಾಲ್ಕು ಎಂಜಿನ್ ‘ಟರ್ಬೊಪ್ರಾಪ್’ ವಿಮಾನವಾಗಿದ್ದು, ಲಾಖೀಡ್ ಮಾರ್ಟಿನ್ ಸಂಸ್ಥೆ ತಯಾರಿಸಿದೆ. ತಾತ್ಕಾಲಿಕ ವಾಯುನೆಲೆಗಳಿಂದ ಕಾರ್ಯನಿರ್ವಹಿಸುವ ಸಾಮರ್ಥ್ಯಕ್ಕೆ ಈ ವಿಮಾನಗಳು ಹೆಚ್ಚು ಪ್ರಸಿದ್ಧಿಯಾಗಿದ್ದು, ವಿಶ್ವದಾದ್ಯಂತ ಸೇನೆಗಳು ವ್ಯಾಪಕವಾಗಿ ಈ ವಿಮಾನಗಳನ್ನು ಬಳಸುತ್ತವೆ.

₹25 ಕೋಟಿ ವಂಚನೆ: ದಂಪತಿ ಸೆರೆ

ಪ್ರಜಾವಾಣಿ ವಾರ್ತೆ



ಲವೀನಾ



ಜೈಸನ್ ಡಿಸೋಜಾ

ಅಪರಾಧ ಸುದ್ದಿಗಳು

ಬೆಂಗಳೂರು: ನ್ಯಾಯಾಲಯಗಳಲ್ಲಿ ನೌಕರಿ ಕೊಡಿಸುವುದಾಗಿ ನಂಬಿಸಿ ಹಲವರಿಂದ ಹಣ ಪಡೆದು ವಂಚಿಸಿದ್ದ ದಂಪತಿಯನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಚಿಕ್ಕಮಗಳೂರಿನ ಜೈಸನ್ ಡಿಸೋಜಾ ಮತ್ತು ಲವೀನಾ ಬಂಧಿತರು. ಕಳೆದ 10 ವರ್ಷಗಳಿಂದ ಬಸವೇಶ್ವರ ನಗರದಲ್ಲಿ ನೆಲಸಿದ್ದರು ಎಂದು ಪೊಲೀಸರು ಹೇಳಿದರು.

ಬಸವೇಶ್ವರ ನಗರ, ವಿಧಾನಸೌಧ ಸೇರಿದಂತೆ ನಗರದ ವಿವಿಧ ಠಾಣೆಗಳಲ್ಲಿ ಆರೋಪಿಗಳ ವಿರುದ್ಧ ಈ ಹಿಂದೆ ಪ್ರಕರಣಗಳು ದಾಖಲಾಗಿದ್ದವು. ಪ್ರಕರಣವನ್ನು ಸಿಸಿಬಿಗೆ ವರ್ಗಾವಣೆ ಮಾಡಲಾಗಿತ್ತು. ಆರೋಪಿಗಳನ್ನು ಬಂಧಿಸುವಲ್ಲಿ ಸಿಸಿಬಿ ಪೊಲೀಸರು ಯಶಸ್ವಿ ಆಗಿದ್ದಾರೆ.

‘ಇದುವರೆಗೂ ನಡೆದಿರುವ ತನಿಖೆಯಿಂದ 500ಕ್ಕೂ ಹೆಚ್ಚು ಅಭ್ಯರ್ಥಿಗಳಿಂದ ₹25 ಕೋಟಿ ಹಣ ಪಡೆದು ವಂಚನೆ ನಡೆಸಿರುವುದು ಪತ್ತೆ ಆಗಿದೆ’ ಎಂದು ಪೊಲೀಸರು ಹೇಳಿದರು.

‘ನಿರುದ್ಯೋಗಿಗಳು, ಖಾಸಗಿ ಕಂಪನಿಗಳಲ್ಲಿ ಕಡಿಮೆ ಸಂಬಳಕ್ಕೆ ಕೆಲಸ ಮಾಡುತ್ತಿದ್ದವರನ್ನು ಗುರಿಯಾಗಿಸಿಕೊಂಡು ಆರೋಪಿಗಳು ವಂಚಿಸುತ್ತಿದ್ದರು. ಕೋರ್ಟ್‌ನಲ್ಲಿ ಡಿ–ಗ್ರೂಪ್ ಹುದ್ದೆ ಕೊಡಿಸುತ್ತೇವೆ ಎಂದು ದಂಪತಿ ನಂಬಿಸುತ್ತಿದ್ದರು. ಅಭ್ಯರ್ಥಿಗಳಿಂದ ₹10 ಲಕ್ಷದಿಂದ ₹25 ಲಕ್ಷದ ವರೆಗೆ ವಸೂಲಿ ಮಾಡುತ್ತಿದ್ದರು’ ಎಂದು ಸಿಸಿಬಿ ಮೂಲಗಳು ಹೇಳಿವೆ.

ಮಧ್ಯವರ್ತಿಗಳನ್ನು ನೇಮಕ: ‘ಅಭ್ಯರ್ಥಿಗಳ ಹುಡುಕಾಟ, ಹಣ ಸಂಗ್ರಹಕ್ಕೆ ಮಧ್ಯವರ್ತಿಗಳನ್ನು ಆರೋಪಿಗಳು ನೇಮಿಸಿಕೊಂಡಿದ್ದರು. ಏಜೆಂಟ್‌ಗಳಿಗೆ ಕಮಿಷನ್ ನೀಡುತ್ತಿದ್ದರು. ಖಾಸಗಿ ಹೋಟೆಲ್‌ಗಳಲ್ಲಿ ದಾಖಲೆ ಪರಿಶೀಲನೆಯ ನಾಟಕವಾಡಿ, ನಕಲಿ ನೇಮಕಾತಿ ಪತ್ರಗಳನ್ನು ತೋರಿಸಿ ಉದ್ಯೋಗ ಆಕಾಂಕ್ಷಿಗಳನ್ನು ನಂಬಿಸುತ್ತಿದ್ದರು’ ಎಂದು ಪೊಲೀಸರು ಹೇಳಿದರು.

‘ಹಣ ನೀಡಿದವರು ಆಗಾಗ್ಗೆ ಬಂದು ಉದ್ಯೋಗದ ಬಗ್ಗೆ ವಿಚಾರಿಸುತ್ತಿದ್ದರು. ಆದರೆ, ಆರೋಪಿ ದಂಪತಿ ‘ನಾಳೆ ಬನ್ನಿ, ನಾಡಿದ್ದು ಬನ್ನಿ’ ಎಂದು ಸಬೂಬು ಹೇಳುತ್ತಿದ್ದರು. ಸರ್ಕಾರಿ ಕೆಲಸ ಕೊಡಿಸುವುದಾಗಿ ವಂಚಿಸಿ 2024ರಲ್ಲೂ ದಂಪತಿ ಜೈಲು ಸೇರಿದ್ದರು. ಜಾಮೀನಿನ ಮೇಲೆ ಬಿಡುಗಡೆಯಾಗಿದ್ದರು’ ಎಂದು ಹೇಳಿದರು.

ಕಾರು ಕದ್ದ ಆರೋಪಿ ಸೆರೆ



ಹರಿಭಜನ್

ಬೆಂಗಳೂರು: ಮನೆಯ ಪಕ್ಕದ ಖಾಲಿ ಜಾಗದಲ್ಲಿ ನಿಲುಗಡೆ ಮಾಡಿದ್ದ ಕಾರನ್ನು ಕಳ್ಳತನ ಮಾಡಿ ರಾಜಸ್ಥಾನಕ್ಕೆ ಕೊಂಡೊಯ್ದಿದ್ದ ಆರೋಪಿಯನ್ನು ಬಾಗಲೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ರಾಜಸ್ಥಾನದ ಹರಿಭಜನ್ (24) ಬಂಧಿತ.

ಕೆಲಸ ಹುಡುಕಿಕೊಂಡು ನಗರಕ್ಕೆ ಬಂದು, ಪೂರ್ವ ತಾಲ್ಲೂಕು ಮಿಟ್ಟಗಾನಹಳ್ಳಿಯ ಬಾಡಿಗೆ ಮನೆಯಲ್ಲಿ ಆರೋಪಿ ನೆಲಸಿದ್ದ ಎಂದು ಪೊಲೀಸರು ಹೇಳಿದರು.

ದೂರುದಾರ ಬಾಲಾಜಿ ಅವರು ಮನೆಯ ಪಕ್ಕದಲ್ಲಿದ್ದ ಖಾಲಿ ಪ್ರದೇಶದಲ್ಲಿ ಕಾರು ನಿಲುಗಡೆ ಮಾಡಿದ್ದರು. ಮರುದಿನ ಬೆಳಿಗ್ಗೆ ಎದ್ದು ನೋಡಿದಾಗ ಕಾರು ಸ್ಥಳದಲ್ಲಿ ಇರಲಿಲ್ಲ. ಕಾರನ್ನು ಕಳ್ಳತನ ಮಾಡಿಕೊಂಡು ಹೋಗಿರುವುದು ಗೊತ್ತಾಗಿ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ರಾಜಸ್ಥಾನದ ಬರಮರ್ ಜಿಲ್ಲೆಯಲ್ಲಿ ಆರೋಪಿಯನ್ನು ಬಂಧಿಸಲಾಯಿತು. ಅದೇ ಸ್ಥಳದಲ್ಲಿ ಕಾರನ್ನು ಜಪ್ತಿ ಮಾಡಿಕೊಳ್ಳಲಾಯಿತು ಎಂದು ಹೇಳಿದರು.

ಅತ್ಯಾಚಾರ: ಆರೋಪಿ ಸೆರೆ

ಬೆಂಗಳೂರು: ಮದುವೆ ಆಗುವುದಾಗಿ ನಂಬಿಸಿ ಅತ್ಯಾಚಾರ ಎಸಗಿ ವಂಚಿಸಿದ್ದ ಆರೋಪಿಯನ್ನು ಪರಪ್ಪನ ಅಗ್ರಹಾರ ಠಾಣೆಯ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.

ತಮಿಳುನಾಡಿನ ಜೀವನ್ ವಾಸುದೇವ್ (31) ಬಂಧಿತ. ಆರೋಪಿ ಜೀವನ್, ನಗರದ ಹೊಸರೋಡ್‌ನಲ್ಲಿ ‘ಜಾಮ್’ ಎಂಬ ಡಾನ್ಸ್ ಸ್ಟುಡಿಯೊ ನಡೆಸುತ್ತಿದ್ದ. 2025ರ ಜೂನ್‌ನಲ್ಲಿ ದೂರುದಾರೆಗೆ ಪರಿಚಯವಾಗಿದ್ದ ಆರೋಪಿ, ಮದುವೆ ಆಗುವುದಾಗಿ ನಂಬಿಸಿದ್ದ. ಬಳಿಕ, ಎಇಸಿಎಸ್ ಲೇಔಟ್‌ನ ಸರ್ವೀಸ್ ಅಪಾರ್ಟ್‌ಮೆಂಟ್‌ಗೆ ಕರೆದೊಯ್ದು ದೌರ್ಜನ್ಯ ಎಸಗಿದ್ದ. ಬಳಿಕ ದೊಡ್ಡನಾಗಮಂಗಲ ರಸ್ತೆಯಲ್ಲಿ ಇರುವ ಹೋಟೆಲ್‌ವೊಂದಕ್ಕೆ ಕರೆದೊಯ್ದು ಮದುವೆ ಆಗುವುದಿಲ್ಲ ಎಂದು ಹೇಳಿದ್ದ ಎಂದು ದೂರು ನೀಡ ಲಾಗಿದೆ. ದೂರು ಆಧರಿಸಿ ಆರೋಪಿಯನ್ನು ಬಂಧಿಸ ಲಾಗಿದೆ ಎಂದು ಪೊಲೀಸರು ಹೇಳಿದರು.

ಕಸ ಗುತ್ತಿಗೆದಾರರ ಮೇಲೆ ‘ಎಸ್ಮಾ’

ಒಂದನೇ ಪುಟದಿಂದ...

ಕಸ ವಿಲೇವಾರಿಯನ್ನು ಅತ್ಯಗತ್ಯ ಸೇವೆ ಎಂದು ಪರಿಗಣಿಸಿ ‘ಎಸ್ಮಾ’ ಕಾಯ್ದೆಯಡಿ ತರಲಾಗಿದೆ. ಗುತ್ತಿಗೆದಾರರು ಸೋಮವಾರದಂದು (ಮಾರ್ಚ್ 23), ತ್ಯಾಜ್ಯ ಸಂಗ್ರಹಿಸದೆ ತಮ್ಮ ಕರ್ತವ್ಯದಲ್ಲಿ ತೀವ್ರ ನಿರ್ಲಕ್ಷ್ಯ ತೋರಿರುತ್ತಾರೆ. ಈ ಕೃತ್ಯವು ಸಾರ್ವಜನಿಕ ಆರೋಗ್ಯಕ್ಕೆ ಭಂಗ ತರುವಂತ ಹದ್ದಾಗಿದ್ದು, ‘ಎಸ್ಮಾ’ ಕಾಯ್ದೆಯ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ಹಾಗೂ ನಗರದ ನೈರ್ಮಲ್ಯವನ್ನು ಕಾಪಾಡುವ ನಿಟ್ಟಿಯಲ್ಲಿ ಕರ್ತವ್ಯಲೋಪ ಎಸಗಿರುವ ಗುತ್ತಿಗೆದಾರರ ವಿರುದ್ಧ ‘ಎಸ್ಮಾ’ ಕಾಯ್ದೆಯನುಸಾರ ಕಾನೂನು ಕ್ರಮ ಜರುಗಿಸಬೇಕು’ ಎಂದು ಎಜಿಎಂಗಳು ದೂರಿನಲ್ಲಿ ತಿಳಿಸಿದ್ದಾರೆ.

ಊರುಗಳಿಗೆ ಹೊರಟ ಕಾರ್ಮಿಕರು: ‘ಮನೆಗಳಿಂದ ಕಸ ಸಂಗ್ರಹ, ಸಾಗಣೆ ಮಾಡುವ ಕಾರ್ಮಿಕರು ರಸ್ತೆಯಲ್ಲಿ ತ್ಯಾಜ್ಯ ಆಯುವುದರಿಂದ ಸಾಕಷ್ಟು ನೊಂದಿದ್ದಾರೆ. ಹಲವು ರೀತಿಯ ರೋಗಗಳೂ ಬಂದಿವೆ. ಹೀಗಾಗಿ, ಅವರು ಕೆಲಸಕ್ಕೆ ಬರುವುದಿಲ್ಲ ಎಂದು ಹೇಳಿ ಊರುಗಳತ್ತ ಹೊರಡುತ್ತಿದ್ದಾರೆ’ ಎಂದು ಗುತ್ತಿಗೆದಾರರು ಹೇಳಿದರು.

‘ಕಾರ್ಮಿಕರಲ್ಲಿ ಬಹುತೇಕರು ತಮಿಳುನಾಡು ಹಾಗೂ ಪಶ್ಚಿಮ ಬಂಗಾಳದವರು. ಆ ರಾಜ್ಯಗಳಲ್ಲಿ ವಿಧಾನಸಭೆ ಚುನಾವಣೆ ಘೋಷಣೆ ಆಗಿರುವುದರಿಂದ, ಕಾರ್ಮಿಕರು ತಮ್ಮ ಊರುಗಳತ್ತ ಪ್ರಯಾಣಿಸುತ್ತಿದ್ದಾರೆ. ಹೀಗಾಗಿ, ಕಾರ್ಮಿಕರ ಸಂಖ್ಯೆ ಸುಮಾರು ಶೇ 80ರಷ್ಟು ಕಡಿಮೆಯಾಗಿದೆ. ಉಳಿದವರು ಕಸ ಆಯುವುದಿಲ್ಲ ಎನ್ನುತ್ತಿದ್ದಾರೆ’ ಎಂದು ಗುತ್ತಿಗೆದಾರರು ತಮ್ಮ ಸಮಸ್ಯೆ ಹೇಳಿಕೊಂಡರು.

‘ಕೆಲವು ಗುತ್ತಿಗೆದಾರರಿಂದ ಬ್ಲ್ಯಾಕ್‌ಮೇಲ್’

‘ಘನತ್ಯಾಜ್ಯ ವಿಲೇವಾರಿ ನಿಯಮದಂತೆಯೇ ನಾವು ಕೆಲಸ ನಿರ್ವಹಿಸುತ್ತಿದ್ದೇವೆ. ಮನೆಯಿಂದ ಒಣ ಹಾಗೂ ಹಸಿ ಕಸವನ್ನು ಪ್ರತ್ಯೇಕವಾಗಿ ಸಂಗ್ರಹಿಸಿ, ಅದನ್ನು ಲಾರಿ ಅಥವಾ ಸಂಸ್ಕರಣೆ ಘಟಕಗಳಿಗೆ ನೀಡುವಂತೆ ಗುತ್ತಿಗೆ ನೀಡಲಾಗಿದೆ. ಆದರೆ, ಮಿಶ್ರ ಕಸವನ್ನು ಸಂಗ್ರಹಿಸಿ ಅವರೇ ರಸ್ತೆಯಲ್ಲಿ ಪ್ರತ್ಯೇಕಿಸುತ್ತಿದ್ದಾರೆ. ನಾವು, ರಸ್ತೆಯಲ್ಲಿ ಕಸ ಆಯುವಂತೆ ಹೇಳಿಲ್ಲ. ಅಲ್ಲದೆ ಕಾರ್ಮಿಕರಿಗೆ ಅಗತ್ಯ ರಕ್ಷಕ ಸಾಮಗ್ರಿಗಳನ್ನು ನೀಡುವುದು ಗುತ್ತಿಗೆದಾರರ ಕರ್ತವ್ಯ. ಕೆಲವು ಗುತ್ತಿಗೆದಾರರು ತಮ್ಮ ಕೆಲಸವನ್ನು ತಾವು ಮಾಡದೆ ಸುಮ್ಮನೆ ನಮ್ಮ ಮೇಲೆ ಗೂಬೆ ಕೂರಿಸಿ, ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಇದಕ್ಕೆಲ್ಲ ನಾವು ಹೆದರುವುದಿಲ್ಲ. ಕಾನೂನು ಪ್ರಕಾರವೇ ಕ್ರಮ ಕೈಗೊಳ್ಳುತ್ತೇವೆ’ ಎಂದು ಪಶ್ಚಿಮ ಬಂಗಾಳದಲ್ಲಿ ಚುನಾವಣೆ ಕಾರ್ಯದಲ್ಲಿರುವ ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಕರೀಗೌಡ ಅವರು ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಆರು ತಿಂಗಳ ಬಿಲ್ ಪಾವತಿ ಬಾಕಿ ಇದೆ. ಮೂರು ತಿಂಗಳ ಬಿಲ್ ಮೊತ್ತವನ್ನು ಸೋಮವಾರ ಸಂಜೆಯಿಂದ ಬಿಡುಗಡೆ ಮಾಡಲು ಆರಂಭಿಸಿದ್ದೇವೆ. ಉಳಿದ ಮೂರು ತಿಂಗಳ ಮೊತ್ತವನ್ನು ಕೂಡಲೇ ಪಾವತಿಸಲಾಗುತ್ತದೆ’ ಎಂದು ಹೇಳಿದರು.

ಇವಿಎಂ ಬದಲು ‘ಮತಪತ್ರ’ಕ್ಕೆ ಅಸ್ತು

ಒಂದನೇ ಪುಟದಿಂದ...

ಕಾಂಗ್ರೆಸ್‌ನ ರಿಜ್ವಾನ್ ಅರ್ಷದ್, ‘ಚುನಾವಣಾ ಆಯೋಗವು ಬಿಜೆಪಿ ಹೇಳಿದಂತೆ ಕೇಳುತ್ತಿದೆ. ಹೀಗಾಗಿ, ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮತಪತ್ರ ಪ್ರಯೋಗ ಆಗಲಿ ಬಿಡಿ’ ಎಂದರು.

ಇದೇ ವೇಳೆ ಆಳಂದ ಕ್ಷೇತ್ರದಲ್ಲಿನ ಮತ ಕಳವು ವಿಚಾರ ಪ್ರಸ್ತಾಪವಾಗಿ ವಾಕ್ಸಮರಕ್ಕೆ ಕಾರಣವಾಯಿತು. ‘ಆಳಂದದಲ್ಲಿ ಕಳ್ಳ ಮತದಾನ ಈಗಾಗಲೇ ಸಾಬೀತಾಗಿದೆ’ ಎಂದು ಪ್ರಿಯಾಂಕ್ ಹೇಳಿದಾಗ, ಮಧ್ಯಪ್ರವೇಶಿಸಿದ ಬಿಜೆಪಿಯ ಡಾ. ಸಿ.ಎನ್. ಅಶ್ವತ್ಥನಾರಾಯಣ, ‘ಆ ತನಿಖಾ ವರದಿಯನ್ನು ಮೊದಲು ಸದನದಲ್ಲಿ ಮಂಡಿಸಿ. ಆಗ ನೀವೇ ಸಿಕ್ಕಿಹಾಕಿಕೊಳ್ಳುತ್ತೀರಿ’ ಎಂದು ಸವಾಲು ಹಾಕಿದರು. ಅದಕ್ಕೆ ತಿರುಗೇಟು ನೀಡಿದ ಪ್ರಿಯಾಂಕ್, ‘ಈ ಪ್ರಕರಣದಲ್ಲಿ 22 ಸಾವಿರ ಪುಟಗಳ ದೋಷಾರೋಪ ಪಟ್ಟಿ ಸಲ್ಲಿಕೆಯಾಗಿದೆ. ಅದರಲ್ಲಿ ಮೊದಲ ಹಾಗೂ ಎರಡನೇ ಆರೋಪಿಗಳಾಗಿ ಬಿಜೆಪಿ ಅಭ್ಯರ್ಥಿಗಳು ಮತ್ತು ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರೇ ಇದ್ದಾರೆ’ ಎಂದರು.

ಬಿಜೆಪಿ ನಾಯಕರ ಆಕ್ಷೇಪಗಳಿಗೆ ಉತ್ತರ ನೀಡಿದ ಪ್ರಿಯಾಂಕ್, ‘ಪಾರದರ್ಶಕ ಚುನಾವಣೆ ನಡೆಸಲು ಮತಪತ್ರ ವ್ಯವಸ್ಥೆ ಅನಿವಾರ್ಯ’ ಎಂದು ಪ್ರತಿಪಾದಿಸಿದರು. ಆಗ, ಆರ್. ಅಶೋಕ, ಆಡಳಿತ ಪಕ್ಷದ ಸದಸ್ಯರ ಕಡೆಗೆ ಕೈ ತೋರಿಸಿ, ‘ಇವಿಎಂ ಸರಿಯಿಲ್ಲ ಎಂದು ಹೇಳುವ ಇವರು ಯಾರಿಗೂ ಇಲ್ಲಿ ಕುಳಿತುಕೊಳ್ಳಲು ಯೋಗ್ಯತೆ ಇಲ್ಲ. ಇದೊಂದು ನಾಚಿಕೆಗೆಟ್ಟ ಸರ್ಕಾರ’ ಎಂದು ಮಸೂದೆಯ ಪ್ರತಿಯನ್ನು ಹರಿದು ಬಿಸಾಡಿ ಸದನದಿಂದ ಹೊರನಡೆದರು. ಅವರ ಜೊತೆ ಬಿಜೆಪಿ, ಜೆಡಿಎಸ್ ಸದಸ್ಯರೂ ಸಭಾತ್ಯಾಗ ಮಾಡಿದರು.

ಮರ್ಯಾದೆಗೇಡು ಹತ್ಯೆ ತಡೆ ಮಸೂದೆಗೆ ಒಪ್ಪಿಗೆ

ಒಂದನೇ ಪುಟದಿಂದ...

ವಿರೋಧ ಪಕ್ಷದ ನಾಯಕ ಆರ್. ಅಶೋಕ, ‘ಮಸೂದೆಗೆ ವಿರೋಧ ಇಲ್ಲ. ಬಿಎನ್‌ಎಸ್ ಕಾಯ್ದೆಯಲ್ಲಿಯೇ ಶಿಕ್ಷೆ ವಿಧಿಸಲು ಅವಕಾಶ ಇರುವಾಗ ಈ ಮಸೂದೆಯಲ್ಲಿ ವಿಶೇಷ ಏನಿದೆ’ ಎಂದು ಪ್ರಶ್ನಿಸಿದರು.

ಪರಸ್ಪರ ವಿವಾಹವಾಗಲು ಇಚ್ಛಿಸುವ ಯಾರೇ ಇಬ್ಬರು ವ್ಯಕ್ತಿಗಳು ತಮ್ಮ ವಯಸ್ಸು ಮತ್ತು ಒಟ್ಟಿಗೆ ಇರಲು ಸಮ್ಮತಿಯನ್ನು ಲಿಖಿತವಾಗಿ ನೋಡಲ್ ಅಧಿಕಾರಿ ಎದುರು ಘೋಷಿಸಬೇಕು ಎಂಬ ಅಂಶದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಬಿಜೆಪಿಯ ಎಸ್. ಸುರೇಶ್ ಕುಮಾರ್, ‘ಲಿವಿಂಗ್ ಟುಗೆದರ್‌ಗೆ ಇದು ಅವಕಾಶ ಮಾಡಿಕೊಡುವಂತಿದ್ದು, ಬಗ್ಗೆ ಸ್ಪಷ್ಟಪಡಿಸಬೇಕು’ ಎಂದು ಆಗ್ರಹಿಸಿದರು.

ಉತ್ತರಿಸಿದ ಎಚ್.ಕೆ. ಪಾಟೀಲ, ‘ಸುರೇಶ್ ಕುಮಾರ್ ಪ್ರಸ್ತಾಪಿಸಿದಂತೆ ಲಿವಿಂಗ್ ಟುಗೆದರ್‌ಗೆ ಈ ಮಸೂದೆ ಅವಕಾಶ ನೀಡುವುದಿಲ್ಲ. ಮಸೂದೆಯಲ್ಲಿ ಉಲ್ಲೇಖಿಸಿರುವ ಒಟ್ಟಿಗೆ ಇರಲು ಸಮ್ಮತಿ ಎಂಬ ಅಂಶವನ್ನು ತಿದ್ದುಪಡಿ ಮಾಡಲಾಗುವುದು’ ಎಂದು ಸ್ಪಷ್ಟಪಡಿಸಿದರು.

ಜೈನ ಕವಿ–ಕಾವ್ಯ: ಹಂಪ ನಾಗರಾಜಯ್ಯ ಅವರಿಂದ ವಿಡಿಯೊ ಉಪನ್ಯಾಸ ಸರಣಿ

ನಿಚ್ಚಂ ಪೊಸತು: ಹಳಗನ್ನಡಕ್ಕೆ ಸಮಕಾಲೀನ ಸ್ಪರ್ಶ

ಪ್ರಜಾವಾಣಿ ವಾರ್ತೆ


ಬೆಂಗಳೂರು: ಹೊಸ ಚಿಗುರಿನ ರೂಪದಲ್ಲಿ ತಂತ್ರಜ್ಞಾನವನ್ನೂ, ಹಳೆ ಬೇರನ್ನಾಗಿ ವಿದ್ವತ್ ಪರಂಪರೆಯನ್ನೂ ಬಳಸಿಕೊಂಡಿರುವ ಸೃಜನಶೀಲ ಅಚ್ಚರಿ ‘ನಿಚ್ಚಂ ಪೊಸತು’ ಮಾಲಿಕೆ. ಇದು, ಕನ್ನಡ ಜೈನ ಸಾಹಿತ್ಯ ಕುರಿತ ಹಂಪ ನಾಗರಾಜಯ್ಯ ಅವರ ವಿಡಿಯೊ ಉಪನ್ಯಾಸಗಳ ಸರಣಿ. ಇದರ ಮೊದಲ ಕಂತು ಈಗ ಯೂಟ್ಯೂಬ್‌ನ ‘ಕಥನ ಸ್ಟುಡಿಯೊ’ ಚಾನಲ್‌ನಲ್ಲಿ ಲಭ್ಯ.

‘ನಮ್ಮ ಸಾಹಿತ್ಯಕ್ಕೆ ಹೊಸ ಎತ್ತರ ಹಾಗೂ ವಿಸ್ತಾರವನ್ನು ತಂದುಕೊಟ್ಟ ಹಳಗನ್ನಡ ಕೃತಿಗಳನ್ನು ಪರಿಚಯಿಸುವ ಸಾಹಿತ್ಯದ ಪಯಣ’ ಎನ್ನುವುದು ‘ನಿಚ್ಚಂ ಪೊಸತು’ ಮಾಲಿಕೆಯ ಬಗ್ಗೆ ಹಂಪನಾ ಅವರ ಅಭಿಪ್ರಾಯ. ಆಡು ಭಾಷೆಯಾಗಿದ್ದ ಕನ್ನಡವನ್ನು ಆಸ್ಥಾನ ಭಾಷೆಯಾಗಿಸಿದ, ಸಾಹಿತ್ಯ ಭಾಷೆಯಾಗಿಸಿದ ಹಾಗೂ ವಿಶ್ವದ ಯಾವುದೇ ಭಾಷೆಗೆ ಸರಿಮಿಗಿಲೆನ್ನುವ ಶಕ್ತಿ ತಂದುಕೊಟ್ಟ ಜೈನ ಕವಿಗಳನ್ನು ನೆನಪಿಸಿಕೊಳ್ಳುವ, ಗೌರವಿಸುವ ಉದ್ದೇಶದ ಈ ಮಾಲಿಕೆಯಲ್ಲಿ ಜೈನ ಕವಿ–ಕಾವ್ಯಗಳ ಅನನ್ಯತೆಯನ್ನು ಹಂಪನಾ ವಿಶ್ಲೇಷಿಸಿದ್ದಾರೆ.

ಚತ್ತಾಣ, ಬೆದಂಡೆಯಂತಹ ದೇಸಿ ಕಾವ್ಯಮಾರ್ಗಗಳಿಗೆ ಸೀಮಿತವಾಗಿದ್ದ ಕನ್ನಡನುಡಿ, ಜೈನಕವಿಗಳ ಮೂಲಕ ಚಂಪೂ, ಷಟ್ಪದಿ, ಸಾಂಗತ್ಯಗಳಂತಹ ಪ್ರಕಾರಗಳಲ್ಲಿ ಹೊಸ ಹೊಳಪು ಪಡೆದುಕೊಂಡ ಕಾವ್ಯಪಯಣದ ಅವಲೋಕನವನ್ನು ಮಾಡಿದ್ದಾರೆ. ಆ ಕಾಲದ ಕಾವ್ಯ ಈ ಕಾಲಕ್ಕೂ ಹೇಗೆ ಪ್ರಸ್ತುತ ಎನ್ನುವುದನ್ನು ನಿರೂಪಿಸುವ ಪ್ರಯತ್ನವನ್ನು ಅವರ ಉಪನ್ಯಾಸಗಳು ಮಾಡಿವೆ.

ವಡ್ಡಾರಾಧನೆ, ಕವಿರಾಜಮಾರ್ಗ, ಆದಿಪುರಾಣ, ವಿಕ್ರಮಾರ್ಜುನ ವಿಜಯ, ಸಾಹಸಭೀಮ ವಿಜಯದಿಂದ ಹಿಡಿದು ಕಬ್ಬಿಗರ ಕಾವ ಕೃತಿಯವರೆಗೆ, ಶಿವಕೋಟ್ಯಾಚಾರ್ಯನಿಂದ ಪಂಪನ ಸಹೋದರ ಜಿನವಲ್ಲಭನವರೆಗೆ ಹಂಪನಾ ತಮ್ಮ ಒಳನೋಟಗಳನ್ನು ಹಂಚಿಕೊಂಡಿದ್ದಾರೆ. ಸದ್ಯಕ್ಕೆ 16 ಕಂತುಗಳಲ್ಲಿ ರೂಪುಗೊಂಡಿರುವ ಸರಣಿಯ ವಿಡಿಯೊಗಳು, ಪ್ರತಿ ಶುಕ್ರವಾರದಂದು ‘ಕಥನ’ ಚಾನಲ್‌ನಲ್ಲಿ ಸಹೃದಯರಿಗೆ ಮುಖಾಮುಖಿ ಆಗಲಿವೆ.


ಚಂದನ್‌ಗೌಡ


ಹಂಪನಾ

ತೊಂಬತ್ತು ವರ್ಷಗಳ ಹಂಪನಾ ಅವರಿಗೆ, ಜೈನ ಸಾಹಿತ್ಯದ ನಂತರವೂ ಉಪನ್ಯಾಸ ಮಾಲಿಕೆಯನ್ನು ಮುಂದುವರಿಸುವ ಹುಮ್ಮಸ್ಸು. ವಯಸ್ಸು ಅನುಮತಿಸಿದಲ್ಲಿ ಹಾಗೂ ಅವಕಾಶ ಆದಲ್ಲಿ ಕುವೆಂಪು, ಬೇಂದ್ರೆ ಅವರವರೆಗೂ ತಮ್ಮ ಒಳನೋಟಗಳನ್ನು ಹಂಚಿಕೊಳ್ಳುವ ಆಸೆ ಅವರದು.

‘ನಿಚ್ಚಂ ಪೊಸತು’ ಸರಣಿಯ ಪರಿಕಲ್ಪನೆ–ನಿರ್ದೇಶನ ಚಂದನ್‌ಗೌಡ ಅವರದು. ಬೆಂಗಳೂರಿನ ವಿದ್ಯಾಶಿಲ್ಪ್ ಯುನಿವರ್ಸಿಟಿಯ ‘ಸ್ಕೂಲ್ ಆಫ್ ಲಿಬರಲ್ ಆರ್ಟ್ಸ್ ಅಂಡ್ ಸೈನ್ಸಸ್’ನಲ್ಲಿ ಡೀನ್ ಆಗಿರುವ ಚಂದನ್‌ಗೌಡ, ಸಾಹಿತ್ಯ ಸಂಸ್ಕೃತಿಯ ಬಗ್ಗೆ ಒಲವುಳ್ಳ ಲೇಖಕರೂ ಹೌದು. ‘ನಿಚ್ಚಂ ಪೊಸತು’ ಮಾಲಿಕೆ ‘ಸದ್ಯ ಮತ್ತು ಶಾಶ್ವತ’ ಎರಡಕ್ಕೂ ಹೊಂದುವಂತಿದೆ ಎನ್ನುವುದು ಅವರ ಅಭಿಪ್ರಾಯ. ಹಂಪನಾ ಅವರ ಉಪನ್ಯಾಸಗಳು ಹಳಗನ್ನಡದ ಬಗ್ಗೆ ಎಳೆಯರಿಗೆ ಪ್ರೀತಿ ಮೂಡಿಸುವಂತಿವೆ ಹಾಗೂ ಹಳಗನ್ನಡದ ಕವಿಗಳನ್ನು ಸಮಕಾಲೀನಗೊಳಿಸುವ ಪ್ರಯತ್ನಗಳೂ ಆಗಿವೆ ಎನ್ನುತ್ತಾರೆ.

ಹಳಗನ್ನಡ ಸಾಹಿತ್ಯದ ಬಗ್ಗೆ ಪರವಶತೆಯಿಂದ ಮಾತನಾಡುವ, ತೊಂಬತ್ತು ವರ್ಷಗಳ ಹಂಪನಾ ಅವರ ಉತ್ಸಾಹ ಹಾಗೂ ವಿದ್ವತ್ತು ಬೆರಗುಗೊಳಿಸುವಂತಹವು ಎನ್ನುವ ಅವರಿಗೆ, ‘ಕಥನ’ ಚಾನಲ್ ಮೂಲಕ ಕನ್ನಡ ಸಾಹಿತ್ಯದ ರಸಘಟ್ಟಗಳನ್ನು, ವ್ಯಕ್ತಿವಿಶೇಷಗಳನ್ನು ಡಿಜಿಟಲ್ ಮಾಧ್ಯಮದಲ್ಲಿ ದಾಖಲಿಸುವ ಮಹತ್ವಾಕಾಂಕ್ಷೆಯಿದೆ. ‘ನೂರು ಮರ – ನೂರು ಸ್ವರ’ ಹೆಸರಿನಲ್ಲಿ ಹಿರಿಯ ವಿಮರ್ಶಕ ಎಚ್.ಎಸ್. ರಾಘವೇಂದ್ರ ರಾವ್ ಅವರ ನಲವತ್ತಕ್ಕೂ ಹೆಚ್ಚು ಉಪನ್ಯಾಸಗಳನ್ನು ದಾಖಲಿಸಿರುವ ಹೆಮ್ಮೆ ಚಂದನ್ ಅವರದು.

‘ನಿಚ್ಚಂ ಪೊಸತು’ ಮಾಲಿಕೆ ರೂಪುಗೊಳ್ಳಲು ‘ತತ್ತ್ವ ಹೆರಿಟೇಜ್ ಫೌಂಡೇಶನ್’ ಆರ್ಥಿಕ ನೆರವು ನೀಡಿದೆ. ಈ ಉಪನ್ಯಾಸಗಳನ್ನು ನೋಡಲು: youtube.com/@kathanastudio ವೀಕ್ಷಿಸಿ.

> ಸಾಹಿತ್ಯ ಈ ಕಾಲಕ್ಕೆ ಅಪ್ರಸ್ತುತ, ಸಾಹಿತ್ಯದಿಂದ ಯುವ ತಲೆಮಾರು ದೂರ ಸರಿಯುತ್ತಿದೆ ಎನ್ನುವ ದೂರು–ಆತಂಕದ ಸಂದರ್ಭದಲ್ಲಿ ‘ನಿಚ್ಚಂ ಪೊಸತು’ ಅಪಾರ ಮಹತ್ವದ ಮಾಲಿಕೆ. ಆಯಾ ಕಾಲದ ಮಾಧ್ಯಮವನ್ನು ಬಳಸಿಕೊಂಡೇ ಸಾಹಿತ್ಯವನ್ನು ಸಮುದಾಯಕ್ಕೆ ತಲಪಿಸಬೇಕು ಎನ್ನುವುದಕ್ಕೆ ಉತ್ತಮ ಉದಾಹರಣೆಯಾಗಿಯೂ ಈ ಸರಣಿಗೆ ಮಹತ್ವವಿದೆ.
> **ಎಂ.ಎಸ್. ಆಶಾದೇವಿ,** ವಿಮರ್ಶಕಿ

ಕೂಲಿಗೆ ಹೋಗಿದ್ದ ವಿದ್ಯಾರ್ಥಿನಿ ಕರೆತಂದು ಪರೀಕ್ಷೆ ಬರೆಸಿದ ಬಿಇಒ

ಪ್ರಜಾವಾಣಿ ವಾರ್ತೆ

ಮುಂಡರಗಿ (ಗದಗ ಜಿಲ್ಲೆ): ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯುವ ಬದಲು ಕೂಲಿ ಕೆಲಸಕ್ಕೆ ಹೋಗಿದ್ದ ವಿದ್ಯಾರ್ಥಿನಿ ಪಲ್ಲವಿ ಹಳ್ಳಿಕೇರಿ ಅವರನ್ನು ಶಿಕ್ಷಣ ಇಲಾಖೆ ಅಧಿಕಾರಿಗಳೇ ಕರೆತಂದು ಪರೀಕ್ಷೆ ಬರೆಯಿಸಿದ್ದಾರೆ.

ತಾಲ್ಲೂಕಿನ ಪೇಠಾಲೂರು ಗ್ರಾಮದ ಪಲ್ಲವಿ ಹಳ್ಳಿಕೇರಿ ಮಾರ್ಚ್ 18ರಂದು ಕನ್ನಡ ಪರೀಕ್ಷೆಗೆ ಹಾಜರಾಗಿದ್ದರು. ಆದರೆ, ಸೋಮವಾರದ ವಿಜ್ಞಾನ ಪರೀಕ್ಷೆಗೆ ಬಂದಿರಲಿಲ್ಲ. ಬಿಇಒ ಗಂಗಾಧರ ಅಣ್ಣಿಗೇರಿ ಅವರು ಪಟ್ಟಣದ ವಿ.ಜಿ. ಲಿಂಬಿಕಾಯಿ ಶಾಲೆಗೆ ಪರಿಶೀಲನೆಗೆ ತೆರಳಿದ್ದಾಗ ಪಲ್ಲವಿ ಪರೀಕ್ಷೆಗೆ ಗೈರಾಗಿದ್ದು ಗೊತ್ತಾಯಿತು. ತಕ್ಷಣವೇ ದ್ರಾಕ್ಷಿ ತೋಟಕ್ಕೆ ತೆರಳಿ, ಕೂಲಿ ಕೆಲಸ ಮಾಡುತ್ತಿದ್ದ ಅವರನ್ನು ತಮ್ಮ ಕಾರಿನಲ್ಲಿ ಕರೆ ತಂದು ಪರೀಕ್ಷೆ ಬರೆಯಿಸಿದರು.

ಬೆಳಗಾವಿ: 1,400 ಮ್ಯೂಲ್ ಖಾತೆ ಪತ್ತೆ

ಬೆಳಗಾವಿ: ‘ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲೇ ಸುಮಾರು 1,400 ಮ್ಯೂಲ್ (ಅಮಾಯಕರ ಬ್ಯಾಂಕ್ ಖಾತೆಗಳ ದುರ್ಬಳಕೆ) ಖಾತೆಗಳು ಬಳಕೆಯಲ್ಲಿವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ. ರಾಮರಾಜನ್ ಸೋಮವಾರ ಇಲ್ಲಿ ತಿಳಿಸಿದರು.

‘3 ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ದಾಖಲಿಸಲಾಗಿದ್ದು, ತನಿಖೆ ಪ್ರಗತಿಯಲ್ಲಿದೆ’ ಎಂದು ಅವರು ನಗರದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಇಎಸ್‌ಐ, ಪಿಎಫ್ ಸೌಲಭ್ಯ ಕಲ್ಪಿಸಲು ಆಗ್ರಹ

ರಾಜ್ಯ ಅಂಗನವಾಡಿ ನೌಕರರ ಸಂಘದ ಪದಾಧಿಕಾರಿಗಳ ಪ್ರತಿಭಟನೆ; ಸರ್ಕಾರದ ವಿರುದ್ಧ ಘೋಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನಿಷ್ಠ ವೇತನ ಜಾರಿಗೊಳಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸಲು ಆಗ್ರಹಿಸಿ, ರಾಜ್ಯ ಅಂಗನವಾಡಿ ನೌಕರರ ಸಂಘದ ಪದಾಧಿಕಾರಿಗಳು ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದರು.

ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಪ್ರತಿಭಟನಾಕಾರರು ರಾಜ್ಯ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ಹೊರಹಾಕಿದರು.

2025ರ ನ.14ರಂದು ಶಿಕ್ಷಣ ಇಲಾಖೆ ಹೊರಡಿಸಿರುವ ಆದೇಶವನ್ನು ತಕ್ಷಣವೇ ರದ್ದು ಮಾಡಬೇಕು. ಬಜೆಟ್‌ನಲ್ಲಿ ಘೋಷಿಸಿರುವಂತೆ 800 ಪಬ್ಲಿಕ್ ಶಾಲೆಗಳಲ್ಲಿ ಎಲ್‌ಕೆಜಿ-ಯುಕೆಜಿ ಆರಂಭಿಸುವಾಗ ಆ ಗ್ರಾಮಗಳಲ್ಲಿ ಇರುವ ಅಂಗನವಾಡಿ ಕೇಂದ್ರಗಳ ಪರಿಸ್ಥಿತಿಯನ್ನು ಅವಲೋಕಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಅಂಗನವಾಡಿ ಕಾರ್ಯಕರ್ತೆಯರನ್ನು ‘ಕನಿಷ್ಠ ಕೂಲಿಯ ಕಾಯ್ದೆ’ಯ ವ್ಯಾಪ್ತಿಗೆ ತಂದು ಇಎಸ್‌ಐ ಹಾಗೂ ಪಿಎಫ್ ಸೌಲಭ್ಯ ಕಲ್ಪಿಸಬೇಕು. ಅಂಗನವಾಡಿ ಕೇಂದ್ರಕ್ಕೆ ಪೂರೈಸುವ ಆಹಾರ ಪದಾರ್ಥಗಳ ಗುಣಮಟ್ಟ ಸರಿಯಿಲ್ಲದ ಕಾರಣ ಬಿಐಎಸ್ ಪರವಾನಗಿ ರದ್ದು ಮಾಡಬೇಕು. ಆಯಾ ಪ್ರದೇಶಕ್ಕೆ ಅನುಗುಣವಾಗಿ ಸ್ಥಳೀಯ ಆಹಾರ ಪೂರೈಸಬೇಕು ಎಂದು ಆಗ್ರಹಿಸಿದರು.

ಖಾಲಿ ಇರುವ ಅಂಗನವಾಡಿ ಕಾರ್ಯಕರ್ತೆಯರು ಹಾಗೂ ಸಹಾಯಕಿಯರ ಹುದ್ದೆಗಳನ್ನು ಭರ್ತಿ ಮಾಡಬೇಕು. ಇಲಾಖೆಯಲ್ಲಿ ಖಾಲಿಯಿರುವ ಮೇಲ್ವಿಚಾರಕಿ, ಸಿಡಿಪಿಒ ಹುದ್ದೆಗಳನ್ನು ತುಂಬಬೇಕು. ಚುನಾವಣೆ ಕೆಲಸಗಳಿಂದ (ಬಿಎಲ್‌ಒ) ಅಂಗನವಾಡಿ ನೌಕರರನ್ನು ಬಿಡುಗಡೆ ಮಾಡಬೇಕು. ನಗರ ಪ್ರದೇಶಗಳಲ್ಲಿ ಸಹಾಯಕಿ ಆಯ್ಕೆಗೆ ಇರುವ ಮಾನದಂಡ ಬದಲಾವಣೆ ಮಾಡಬೇಕು. ಸಾಮೂಹಿಕ ಆರೋಗ್ಯ ವಿಮೆ ಜಾರಿಗೆ ತರಬೇಕು ಎಂದು ಆಗ್ರಹಿಸಿದರು.

‘ರಾಜ್ಯ ಸರ್ಕಾರಿ ನೌಕರರು ಹಾಗೂ ಖಾಸಗಿ ವಲಯಗಳಲ್ಲಿ ದುಡಿಯುವ ಮಹಿಳೆಯರಿಗೆ ಜಾರಿ ಮಾಡಿರುವ ಮುಟ್ಟಿನ ರಜೆಯನ್ನು ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರಿಗೂ ವಿಸ್ತರಿಸಬೇಕು. ಆರೋಗ್ಯ ಸಂಜೀವಿನಿ ಯೋಜನೆಯನ್ನೂ ನಮಗೂ ಅನ್ವಯ ಮಾಡಬೇಕು. ನಿವೃತ್ತರಾದವರಿಗೆ ಇಡುಗಂಟು ಹೆಚ್ಚಳ ಮಾಡಬೇಕು. ತಿಂಗಳಿಗೆ ₹10 ಸಾವಿರ ಪಿಂಚಣಿ ನೀಡಬೇಕು’ ಎಂದು ಆಗ್ರಹಿಸಿದರು.

ಪ್ರತಿಭಟನೆಯ ನೇತೃತ್ವವನ್ನು ಸಂಘದ ಅಧ್ಯಕ್ಷೆ ಎಸ್.ವರಲಕ್ಷ್ಮಿ ಹಾಗೂ ಪ್ರಧಾನ ಕಾರ್ಯದರ್ಶಿ ಎಚ್.ಎಸ್. ಸುನಂದಾ ವಹಿಸಿದ್ದರು.


ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಪ್ರತಿಭಟನೆ ನಡೆಸಿದ ರಾಜ್ಯ ಅಂಗನವಾಡಿ ನೌಕರರ ಸಂಘದ ಪದಾಧಿಕಾರಿಗಳು, ಸಚಿವ ಡಾ.ಶರಣಪ್ರಕಾಶ್ ಪಾಟೀಲ ಅವರಿಗೆ ಮನವಿ ಸಲ್ಲಿಸಿದರು

ಶೈಲಜಾ, ನೇಮಿಚಂದ್ರಗೆ ದತ್ತಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ ‘ವಿಜ್ಞಾನ ಲೇಖಕಿ ನಳಿನಿಮೂರ್ತಿ’ ದತ್ತಿ ಪ್ರಶಸ್ತಿಗೆ ವಿಜ್ಞಾನ ಲೇಖಕಿಯರಾದ ಬಿ.ಎಸ್. ಶೈಲಜಾ ಮತ್ತು ನೇಮಿಚಂದ್ರ ಅವರನ್ನು ಆಯ್ಕೆ ಮಾಡಲಾಗಿದೆ.


ಶೈಲಜಾ


ನೇಮಿಚಂದ್ರ

2024ನೇ ಸಾಲಿಗೆ ಶೈಲಜಾ ಹಾಗೂ 2025ನೇ ಸಾಲಿಗೆ ನೇಮಿಚಂದ್ರ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಸಂಘದ ಅಧ್ಯಕ್ಷೆ ಆರ್. ಸುನಂದಮ್ಮ ತಿಳಿಸಿದ್ದಾರೆ.

ಪ್ರಶಸ್ತಿಯು ₹25,000 ನಗದು, ಪ್ರಶಸ್ತಿ ಪತ್ರ ಮತ್ತು ಪ್ರಶಸ್ತಿ ಫಲಕಗಳನ್ನು ಒಳಗೊಂಡಿದ್ದು, ವಿಜ್ಞಾನ ಕ್ಷೇತ್ರಕ್ಕೆ ನೀಡಿದ ಕೊಡುಗೆಯನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಏಪ್ರಿಲ್ 9 ರಂದು ನಯನ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಸೌಜನ್ಯ ಪ್ರಕರಣ: ಸುಪ್ರೀಂ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಧರ್ಮಸ್ಥಳದ ಸೌಜನ್ಯ ಮೇಲಿನ ಅತ್ಯಾಚಾರ ಹಾಗೂ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಹಾಗೂ ಸಿಬಿಐಗೆ ಸುಪ್ರೀಂ ಕೋರ್ಟ್ ಸೋಮವಾರ ನೋಟಿಸ್ ಜಾರಿ ಮಾಡಿದೆ.

‘ಪ್ರಕರಣದ ಮರು ತನಿಖೆಗೆ ಆದೇಶಿಸಬೇಕು ಹಾಗೂ ಪ್ರಕರಣದಿಂದ ಆರೋಪಿ ಸಂತೋಷ್ ರಾವ್ ಅವರನ್ನು ಖುಲಾಸೆಗೊಳಿಸಿದ ಸಿಬಿಐ ವಿಶೇಷ ನ್ಯಾಯಾಲಯದ ಆದೇಶ ರದ್ದುಪಡಿಸಬೇಕು’ ಎಂದು ಕೋರಲಾಗಿದ್ದ ಪ್ರತ್ಯೇಕ ಅರ್ಜಿಗಳನ್ನು ಹೈಕೋರ್ಟ್ ವಜಾಗೊಳಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಸೌಜನ್ಯ ತಾಯಿ ಕುಸುಮಾವತಿ ಅವರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದರು.

ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸಂಜಯ್ ಕುಮಾರ್ ನೇತೃತ್ವದ ದ್ವಿಸದಸ್ಯ ಪೀಠವು, ನೋಟಿಸ್ ಜಾರಿ ಮಾಡಿ ವಿಚಾರಣೆಯನ್ನು ಏಪ್ರಿಲ್ 28ಕ್ಕೆ ಮುಂದೂಡಿತು.

ಇನ್‌ಸ್ಪೆಕ್ಟರ್ ವಿರುದ್ಧ ಸಿಐಡಿ ತನಿಖೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರ ಮೇಲೆ ದೌರ್ಜನ್ಯ ಎಸಗಿರುವ ಆರೋಪವು ಮೂಡುಬಿದಿರೆ ಪೊಲೀಸ್ ಇನ್‌ಸ್ಪೆಕ್ಟರ್ ಬಿ.ಜಿ.ಸಂದೇಶ್ ಮೇಲಿದ್ದು, ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲಾಗಿದೆ.

ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸುವಂತೆ ಗೃಹ ಸಚಿವ ಜಿ.ಪರಮೇಶ್ವರ ಅವರು ರಾಜ್ಯ ಪೊಲೀಸ್ ಮಹಾನಿರ್ದೇಶಕ ಎಂ.ಎ.ಸಲೀಂ ಅವರಿಗೆ ಸೂಚಿಸಿದ್ದರು.

‘ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮೀ ಚೌಧರಿ ಅವರನ್ನು ಸಂತ್ರಸ್ತೆ ಭೇಟಿ ಮಾಡಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಅನೇಕ ವಿಚಾರಗಳ ಬಗ್ಗೆಯೂ ತಿಳಿಸಿದ್ದಾರೆ. ಹೀಗಾಗಿ, ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸುವಂತೆ ಸೂಚಿಸಿದ್ದೇನೆ’ ಎಂದು ಪರಮೇಶ್ವರ ಅವರು ಸೋಮವಾರ ಬೆಳಿಗ್ಗೆ ಸುದ್ದಿಗಾರರಿಗೆ ತಿಳಿಸಿದ್ದರು.

‘ಇನ್‌ಸ್ಪೆಕ್ಟರ್ ವಿರುದ್ಧ ಆರೋಪ ಬಂದ ಬಳಿಕ ಅಮಾನತು ಮಾಡಿ, ವರದಿ ನೀಡುವಂತೆ ಸೂಚಿಸಲಾಗಿದೆ. ಇನ್ನೂ ಅನೇಕ ಆರೋಪ ಕೇಳಿ ಬಂದಿದ್ದರಿಂದ ಹೆಚ್ಚಿನ ತನಿಖೆಗಾಗಿ ಪ್ರಕರಣವನ್ನು ಸಿಐಡಿಗೆ ವಹಿಸಲಾಗಿದೆ. ತನಿಖೆ ಬಳಿಕ ಸತ್ಯಾಂಶ ಹೊರಬರುತ್ತದೆ. ಇನ್ನೂ ಎಷ್ಟು ಜನ ಸಂತ್ರಸ್ತರಿದ್ದಾರೆ ಎಂಬುದು ತನಿಖೆ ವೇಳೆ ಗೊತ್ತಾಗಲಿದೆ’ ಎಂದು ಹೇಳಿದರು.

ಶೃಂಗೇರಿ: 76ನೇ ವರ್ಧಂತಿ ಇಂದು

ಶೃಂಗೇರಿ (ಚಿಕ್ಕಮಗಳೂರು ಜಿಲ್ಲೆ): ಇಲ್ಲಿನ ಶಾರದಾ ಪೀಠದಲ್ಲಿ ಭಾರತೀತೀರ್ಥ ಸ್ವಾಮೀಜಿಯವರ 76ನೇ ವರ್ಧಂತಿ ಮಹೋತ್ಸವ ಮಂಗಳವಾರ ನಡೆಯಲಿದೆ.

ಮಾರ್ಚ್ 19ರಿಂದ ಧಾರ್ಮಿಕ ಕಾರ್ಯಕ್ರಮಗಳು ಆರಂಭವಾಗಿದ್ದು, 30ರವರೆಗೆ ನಡೆಯಲಿವೆ.

ಶೃಂಗೇರಿಯಲ್ಲಿ ಮಳೆ


ಶೃಂಗೇರಿ/ನರಸಿಂಹರಾಜಪುರ: ಚಿಕ್ಕಮಗಳೂರು ಜಿಲ್ಲೆಯ ಶೃಂಗೇರಿ ತಾಲ್ಲೂಕಿನಲ್ಲಿ ಸೋಮವಾರ ಗುಡುಗು, ಮಿಂಚು ಸಹಿತ ಸಾಧಾರಣ ಮಳೆಯಾಗಿದೆ. ನರಸಿಂಹರಾಜಪುರ ತಾಲ್ಲೂಕಿನ ಬಾಳೆಹೊನ್ನೂರು, ಮಾಗುಂಡಿ, ಹೇರೂರು, ಬನ್ನೂರು ಸುತ್ತಮುತ್ತ ಭಾರಿ ಮಳೆ ಸುರಿಯಿತು.

ಶೃಂಗೇರಿ ತಾಲ್ಲೂಕಿನ ಮೆಣಸೆ, ಬೆಟ್ಟಗೆರೆ, ತೆಕ್ಕೂರು, ವೈಕುಂಠಪುರ, ಕಲ್ಕಟ್ಟೆ, ಕುಂಚೇಬೈಲ್, ನೆಮ್ಮಾರ್, ಕಾವಡಿ, ತ್ಯಾವಣ, ಶಿಡ್ಲೆ, ಮಲ್ನಾಡ್ ಭಾಗಗಳಲ್ಲಿ ಮಳೆಯಾಗಿದೆ.

ಬಾಳೆಹೊನ್ನೂರು–ಜಯಪುರ ಬಸರೀಕಟ್ಟೆ ನಡುವಿನ ಗುಡ್ಡೇತೋಟದ ಬಳಿ ಮುಖ್ಯರಸ್ತೆಯಲ್ಲಿ ಬೃಹತ್ ಮರ ಬಿದ್ದು ಅರ್ಧ ಗಂಟೆ ವಾಹನ ಸಂಚಾರಕ್ಕೆ ಅಡಚಣೆ ಉಂಟಾಯಿತು.

ಮಾಜಿ ಶಾಸಕ ಕರಿಯಣ್ಣ ಸಂಗಟಿ ನಿಧನ

ಕೊಪ್ಪಳ: ವಿಧಾನ ಪರಿಷತ್ ಮಾಜಿ ಸದಸ್ಯ ಕೊಪ್ಪಳದ ಕರಿಯಣ್ಣ ಸಂಗಟಿ (62) ಸೋಮವಾರ ಬೆಳಗಿನ ಜಾವ ಬೆಂಗಳೂರಿನ ಅಪೋಲೊ ಆಸ್ಪತ್ರೆಯಲ್ಲಿ ನಿಧನರಾದರು.


ಕರಿಯಣ್ಣ ಸಂಗಟಿ

ಬಹುಅಂಗಾಂಗ ವೈಫಲ್ಯಗಳ ಸಮಸ್ಯೆಯಿಂದ ಅವರು ಬಳಲುತ್ತಿದ್ದರು. ಅವರಿಗೆ ಪತ್ನಿ, ಮೂವರು ಪುತ್ರರು ಹಾಗೂ ಮೂವರು ಪುತ್ರಿಯರು ಇದ್ದಾರೆ.

ಕೊಪ್ಪಳ 1997ರಲ್ಲಿ ಜಿಲ್ಲೆಯಾಗಿ ರಚನೆಯಾದಾಗ ನೂತನ ಜಿಲ್ಲೆಯ ಮೊದಲ ಜಿಲ್ಲಾ ಪಂಚಾಯಿತಿಗೆ ಅಧ್ಯಕ್ಷರಾಗಿದ್ದರು. ಎರಡು ಬಾರಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಿ ಪರಾಭವಗೊಂಡಿದ್ದರು. 2000ರಿಂದ 2006ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು.

ಸ್ವಂತ ಊರಾದ ಕೊಪ್ಪಳ ತಾಲ್ಲೂಕಿನ ಯಲಮಗೇರಿ ಗ್ರಾಮದಲ್ಲಿ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಅಂತ್ಯಕ್ರಿಯೆ ನಡೆಯಲಿದೆ.



ಹೇನು ಏನೆಂದು ಕಡೆಗಣಿಸಬೇಡಿ!

• ಡಾ.ಶ್ವೇತಾ

ವಿಜಯಪುರ ಸಮೀಪದ ಒಂದು ವಸತಿ ಶಾಲೆಯಲ್ಲಿ ಮಾರ್ಚ್‌ನ ಮೊದಲ ವಾರ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಹದಿಮೂರು ವರ್ಷದ ಅಜಯ್ ಅತಿಯಾದ ಜ್ವರ, ತೀವ್ರ ತಲೆನೋವು, ಮೈನೋವಿನಿಂದ ಬಳಲು ಪ್ರಾರಂಭಿಸಿದ್ದ. ಎರಡು ದಿನಗಳ ನಂತರ ಚರ್ಮದ ಮೇಲೆ ಕೆಂಪುಗುಳ್ಳೆಗಳು ಕಂಡುಬಂದವು. ಜ್ವರವನ್ನು ವೈರಾಣುಜ್ವರ ಎಂದು ಭಾವಿಸಲಾಯಿತು. ಕೆಲವೇ ದಿನಗಳಲ್ಲಿ ವಸತಿ ಶಾಲೆಯ ಇತರೆ ವಿದ್ಯಾರ್ಥಿಗಳಲ್ಲೂ ಇದೇ ರೀತಿಯ ಲಕ್ಷಣಗಳು ಕಂಡುಬಂದವು. ವೈದ್ಯಾಧಿಕಾರಿಗಳಿಗೆ ವಿಷಯ ಮುಟ್ಟಿಸಲಾಯಿತು. ಸೂಕ್ಷ್ಮವಾಗಿ ಪರಿಶೀಲಿಸಿದಾಗ ಮಕ್ಕಳ ಬಟ್ಟೆಗಳ ಹೊಲಿಗೆಯ ಭಾಗದಲ್ಲಿ ಹೇನು ಅಥವಾ ಕೂರೆ (body lice), ಕೂದಲಿನಲ್ಲಿ ಸೀರು (nits) ಕಂಡುಬಂದವು. 'ಎಪಿಡೆಮಿಕ್ ಟೈಫಸ್' ಎಂದು ಶಂಕಿಸಲಾಯಿತು. ತಕ್ಷಣ ಚಿಕಿತ್ಸೆಯನ್ನು ನೀಡಿ ನಿಯಂತ್ರಣ ಕ್ರಮ ಕೈಗೊಳ್ಳಲಾಯಿತು.

ಹೇನುಗಳು ಮಾನವದೇಹದಲ್ಲಿ ವಾಸಿಸುವ ಸಣ್ಣ ಪರೋಪಜೀವಿಗಳು. ಇವುಗಳು ಸಾಮಾನ್ಯವಾಗಿ ತಲೆಯ ಕೂದಲು, ದೇಹದ ಮೇಲೆ, ಬಟ್ಟೆಗಳ ನಡುವೆ, ಜನನಾಂಗದ ಭಾಗದಲ್ಲಿ ಕಂಡುಬರುತ್ತದೆ. ಈ ಹೇನುಗಳು ಮಾನವನ ರಕ್ತವನ್ನು ಹೀರಿಕೊಂಡು ಬದುಕುತ್ತವೆ. ಈ ಪ್ರಕ್ರಿಯೆಯಲ್ಲಿ ಅವು ಮನುಷ್ಯರಿಗೆ ಅಪಾಯಕಾರಿ ರೋಗಕಾರಕ ಜೀವಾಣುಗಳನ್ನು ಹರಡುವ ಸಾಧ್ಯತೆ ಇದೆ. ಇವುಗಳಿಂದ ಉಂಟಾಗುವ ರೋಗವನ್ನು 'ಲೌಸ್ ಬಾರ್ನ್ ಇನ್‌ಫೆಕ್ಷನ್' ಅಥವಾ 'ಹೇನುಗಳಿಂದ ಹರಡುವ ಸೋಂಕು' ಎಂದು ಕರೆಯಲಾಗುತ್ತದೆ.

ಹೇನುಗಳಲ್ಲಿ ಮೂರು ಪ್ರಕಾರಗಳಿವೆ. ಮೊದಲನೆಯದು, ತಲೆಯ ಹೇನು. ಈ ಹೇನುಗಳು ತಲೆಯ ಕೂದಲಿನಲ್ಲಿ ವಾಸಿಸುತ್ತವೆ. ತುರಿಕೆಯನ್ನು ಉಂಟುಮಾಡುತ್ತವೆ. ಎರಡನೆಯದು, ದೇಹದ ಹೇನು: ಇವು ದೇಹದ ಮೇಲೆ, ಬಟ್ಟೆಗಳ ಹೊಲಿಗೆ ಸಂದುಗಳಲ್ಲಿ ಕಂಡುಬರುತ್ತವೆ. ಇದನ್ನು 'ಕೂರೆ' ಎಂದೂ ಕರೆಯಲಾಗುತ್ತದೆ. ಇದು ಅಪಾಯಕಾರಿಯಾಗಬಲ್ಲದು. ಏಕೆಂದರೆ ಇವು ಗಂಭೀರ ಸೋಂಕನ್ನು ಹರಡುವ ಸಾಮರ್ಥ್ಯವನ್ನು ಹೊಂದಿವೆ. ಮೂರನೇ ವಿಧದ ಹೇನು, 'ಪ್ಯೂಬಿಕ್ ಲೌಸ್'. ಜನನಾಂಗದ ಬಳಿಯ ಕೂದಲಿನಲ್ಲಿ ವಾಸಿಸುವ ಇವುಗಳನ್ನು 'ಕ್ರಾಬ್ ಲೈಸ್' (crab lice) ಎಂದೂ ಕರೆಯಲಾಗುತ್ತದೆ. ಕೆಲವೊಮ್ಮೆ ಕಂಕುಳಿನ ಕೂದಲು, ಎದೆಯ ಮೇಲಿನ ಕೂದಲು, ಗಡ್ಡ ಮತ್ತು ಕಣ್ಣಿನ ರೆಪ್ಪೆಯ ಕೂದಲಿನಲ್ಲಿಯೂ ಇವು ಕಂಡುಬರುವ ಸಾಧ್ಯತೆ ಇದೆ.

ಇವು ನೇರ ದೇಹಸಂಪರ್ಕದ ಮೂಲಕ ಹರಡುತ್ತವೆ. ತೀವ್ರವಾದ ತುರಿಕೆ, ಚರ್ಮದ ಉರಿಯೂತಕ್ಕೆ ಕಾರಣವಾಗುತ್ತವೆ. ಹೆಚ್ಚಿನ ಕೆರೆತದಿಂದ ಗಾಯಗಳು ಉಂಟಾಗಬಹುದು. ಆ ಗಾಯಗಳ ಮೂಲಕ ಬ್ಯಾಕ್ಟೀರಿಯಾಗಳು ದೇಹದೊಳಗೆ ಪ್ರವೇಶಿಸಿ ದ್ವಿತೀಯ ಸೋಂಕು (ಸೆಕೆಂಡರಿ ಬ್ಯಾಕ್ಟೀರಿಯಲ್ ಇನ್‌ಫೆಕ್ಷನ್) ಉಂಟಾಗಿ ಕೀವು, ನೋವು ಉಂಟಾಗಬಹುದು.

ಇವುಗಳಲ್ಲಿ ದೇಹದ ಹೇನು ಹೆಚ್ಚು ಅಪಾಯಕಾರಿ. ಏಕೆಂದರೆ ಅವು ಕೆಲವು ಗಂಭೀರ ಸೋಂಕುಗಳನ್ನು ಹರಡುವ ಸಾಮರ್ಥ್ಯವನ್ನು ಹೊಂದಿವೆ. ಅವು ಹರಡಬಹುದಾದ ಪ್ರಮುಖ ರೋಗಗಳು ಮೂರು; ಎಪಿಡೆಮಿಕ್ ಟೈಫಸ್, ಟ್ರೆಂಚ್ ಫೀವರ್ ಮತ್ತು ರಿಲ್ಯಾಪ್ಸಿಂಗ್ ಫೀವರ್.

ಮೊದಲನೆಯದು, ಎಪಿಡೆಮಿಕ್ ಟೈಫಸ್. ರಿಕೆಟ್ಸಿಯೋ ಪ್ರೊವೋಝಾಕಿ ಎಂಬ ಬ್ಯಾಕ್ಟೀರಿಯಾದಿಂದ ಉಂಟಾಗುವ ಕಾಯಿಲೆ ಇದಾಗಿದ್ದು, ತೀವ್ರ ಜ್ವರ, ತಲೆನೋವು, ಮೈಕೈನೋವು, ಬಳಲಿಕೆ, ಚರ್ಮದ ಮೇಲೆ ಕೆಂಪುಗುಳ್ಳೆ ಕಾಣಿಸಿಕೊಳ್ಳುವುದು ಈ ರೋಗದ ಲಕ್ಷಣಗಳು.

ದೇಹದ ಹೇನುಸೋಂಕಿತ ವ್ಯಕ್ತಿಯ ರಕ್ತವನ್ನು ಹೀರಿಕೊಂಡಾಗ ಈ ಬ್ಯಾಕ್ಟೀರಿಯಾ ಹೇನುಗಳ ದೇಹವನ್ನು ಪ್ರವೇಶಿಸುತ್ತದೆ. ಹೇನುಗಳ ದೇಹದಲ್ಲಿ ಬ್ಯಾಕ್ಟೀರಿಯಾಗಳು ವೃದ್ಧಿಸುತ್ತವೆ. ನಂತರ ಹೇನಿನ ಮಲದ ಮೂಲಕ ಬ್ಯಾಕ್ಟೀರಿಯಾಗಳು ದೇಹದ ಮೇಲಿನ ಗಾಯದ ಮೂಲಕ ಮಾನವದೇಹವನ್ನು ಪ್ರವೇಶಿಸುತ್ತವೆ. ಈ ಸೋಂಕು ಗಂಭೀರವಾದರೆ ಜೀವಕ್ಕೆ ಅಪಾಯಕಾರಿಯಾಗಬಲ್ಲದು. ಎರಡನೆಯದು, ಟ್ರೆಂಚ್ ಫೀವರ್; ಇದು ಕೂಡ ಬ್ಯಾಕ್ಟೀರಿಯಾದಿಂದ ಉಂಟಾಗುವ ಕಾಯಿಲೆಯಾಗಿದ್ದು, ಮೊದಲ ಮಹಾಯುದ್ಧದ ವೇಳೆ ಸೈನಿಕರಲ್ಲಿ ಈ ರೋಗ ಕಂಡುಬಂದಿತ್ತು.

ಮೂರನೇಯದು, ರಿಲ್ಯಾಪ್ಸಿಂಗ್ ಫಿವರ್ ಕೂಡ ಬ್ಯಾಕ್ಟೀರಿಯಾದ ಮೂಲಕ ಹರಡುವ ಕಾಯಿಲೆ. ಈ ಕಾಯಿಲೆಯಲ್ಲಿ ಜ್ವರ ಕೆಲವು ದಿನ ಕಾಣಿಸಿಕೊಂಡು ಬಳಿಕ ಕಡಿಮೆಯಾಗುತ್ತದೆ. ಮರುಜ್ವರ, ತಲೆನೋವು ಈ ರೋಗದ ಪ್ರಮುಖ ಲಕ್ಷಣಗಳು.

ಕಾರಣವೇನು?

ಹೇನುಗಳು ಸಾಮಾನ್ಯವಾಗಿ ಸ್ವಚ್ಛತೆ ಕೊರತೆಯಾದ ಸಂದರ್ಭಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಜನಸಂದಣಿ ಹೆಚ್ಚಿರುವ ಸ್ಥಳಗಳು, ವಸತಿಶಾಲೆಗಳು, ನಿರಾಶ್ರಿತ ಶಿಬಿರಗಳಂಥವುಗಳಲ್ಲಿ ಹೆಚ್ಚು. ಶುದ್ಧ ಬಟ್ಟೆಗಳ ಕೊರತೆ, ಸರಿಯಾದ ವೈಯಕ್ತಿಕ ಸ್ವಚ್ಛತೆ ಇಲ್ಲದಿರುವುದು, ನಿಯಮಿತ ಸ್ನಾನದ ಅಭಾವ, ಸರಿಯಾಗಿ ಬಟ್ಟೆ ತೊಳೆಯದೇ ಇರುವುದೂ ಹೇನು ಹರಡುವಿಕೆಗೆ ಕಾರಣಗಳಾಗಬಹುದು.

ಸೋಂಕುತಡೆ

ವೈಯಕ್ತಿಕ ಸ್ವಚ್ಛತೆ ಬಹಳ ಮುಖ್ಯ. ನಿಯಮಿತವಾಗಿ ಸ್ನಾನ ಮಾಡುವುದು, ಸ್ವಚ್ಛವಾಗಿ ಬಟ್ಟೆಗಳನ್ನು ಬಿಸಿನೀರಿನಲ್ಲಿ ತೊಳೆದು, ಬಿಸಿಲಿನಲ್ಲಿ ಒಣಗಿಸುವುದು. ಕೂದಲನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು, ನಿಯಮಿತವಾಗಿ ತಲೆಸ್ನಾನ ಮಾಡುವುದು, ಹೇನು ಕಂಡುಬಂದಲ್ಲಿ ತಕ್ಷಣ ಚಿಕಿತ್ಸೆ ಪಡೆಯುವುದು ಅಗತ್ಯ.

ಹೇನುಗಳನ್ನು ನಿವಾರಿಸಲು ಔಷಧೀಯ ಶಾಂಪುಗಳು ಮತ್ತು ಲೋಷನ್‌ಗಳಿ ಲಭ್ಯವಿದ್ದು, ಅವುಗಳನ್ನು ವೈದ್ಯರ ಸಲಹೆಯಂತೆ ಬಳಸಬಹುದು. ಜೊತೆಗೆ ಸೋಂಕಿತ ವ್ಯಕ್ತಿಯ ಬಟ್ಟೆಗಳು ಮತ್ತು ಹಾಸಿಗೆಗಳನ್ನು ಕೂಡ ಚೆನ್ನಾಗಿ ತೊಳೆದು, ಬಿಸಿಲಿನಲ್ಲಿ ಒಣಗಿಸಬೇಕು.

ಒಟ್ಟಿನಲ್ಲಿ ಹೇನುಗಳು ಸಣ್ಣ ಜೀವಿಗಳಾಗಿದ್ದರೂ ಅವುಗಳಿಂದ ಹರಡುವ ಸೋಂಕುಗಳು ಮಾನವನ ಆರೋಗ್ಯಕ್ಕೆ ಗಂಭೀರ ಅಪಾಯವನ್ನು ಉಂಟುಮಾಡಬಹುದು.ಹಾಗಾಗಿ ವೈಯಕ್ತಿಕ ಸ್ವಚ್ಛತೆ. ಆರೋಗ್ಯರಕ್ಷಣೆ, ಸರಿಯಾದ ಚಿಕಿತ್ಸೆ ಮೂಲಕ ಹೇನುಗಳನ್ನು ನಿಯಂತ್ರಿಸುವುದು ಬಹಳ ಅಗತ್ಯ.



ಕಿವಿಗೆ 'ದನಿ'ಯಾಗುವ ಕಾಕ್ಲಿಯರ್ ಇಂಪ್ಲ್ಯಾಂಟ್

• ಡಾ.ವಾಸಂತಿ ಆನಂದ್

ಕಿವಿ ಎನ್ನುವುದು ಹೊರಜಗತ್ತಿಗೆ ತೆರೆದುಕೊಂಡ ಪ್ರಮುಖ ಅಂಗ. ಕಿವಿಗಳು ಸಮರ್ಪಕವಾಗಿ ಕೇಳಿಸಿಕೊಳ್ಳುವ ಶಕ್ತಿಯನ್ನು ಹೊಂದಿದ್ದಾಗಷ್ಟೆ, ಮಿದುಳು ಶಬ್ದಕ್ಕೆ ಸ್ಪಂದಿಸುತ್ತದೆ ಮತ್ತು ಅದು ಮಾತಾಗಿ ಹೊರಹೊಮ್ಮುತ್ತದೆ. ಹಾಗಾಗಿ ಕಿವಿ, ಮಿದುಳು, ಬಾಯಿ– ಈ ಮೂರಕ್ಕೂ ಪರಸ್ಪರ ಸಂಬಂಧವಿದೆ.

ಇಂಥ ಕಿವಿಗಳ ಕಾರ್ಯವೈಖರಿ ಮೇಲ್ನೋಟಕ್ಕೆ ಸರಳವೆನಿಸಿದರೂ ಬಹುಸೂಕ್ಷ್ಮವಾದ ಅಂಗವಿದು. ಅದರಲ್ಲಿಯೂ ಈ ಒಳಕಿವಿಗಳು ಶೇ 90ಕ್ಕಿಂತ ಹೆಚ್ಚು ಪ್ರಮಾಣದಲ್ಲಿ ತೀವ್ರತರದಲ್ಲಿ ಹಾನಿಗೆ ಒಳಗಾದರೆ 'ಕಾಕ್ಲಿಯರ್ ಇಂಪ್ಲ್ಯಾಂಟ್' ಎಂಬುದು ವರದಾನವಾಗುತ್ತದೆ. ಇಷ್ಟು ಪ್ರಮಾಣದ ಹಾನಿಗೆ ಒಳಗಾದರೆ ಒಳಕಿವಿಯನ್ನು ಬೇರೆ ಯಾವುದೇ ರೀತಿಯ ಚಿಕಿತ್ಸೆಯಿಂದಲೂ ಸರಿಪಡಿಸಲು ಸಾಧ್ಯವಿಲ್ಲ. ಹಾಗಾಗಿಯೇ ಕಾಕ್ಲಿಯರ್ ಇಂಪ್ಲ್ಯಾಂಟ್ ಎಂಬುದು ಬಹುಮುಖ್ಯ.

ಸಾಮಾನ್ಯವಾಗಿ ಮಕ್ಕಳು ಹಾಗೂ ದೊಡ್ಡವರಲ್ಲಿ ಬೇರೆ ಬೇರೆ ಕಾರಣಗಳಿಗೆ ಒಳಕಿವಿಗಳು ಹಾನಿಗೆ ಒಳಗಾಗುತ್ತವೆ. ಮಕ್ಕಳಿಗೆ ಹುಟ್ಟಿದಾಗಿನಿಂದಲೇ ಈ ಪ್ರಮಾಣದಲ್ಲಿ ಕಿವುಡತನ ಬರಲು ಹಲವಾರು ಕಾರಣಗಳಿವೆ. ಪ್ರಮುಖವಾಗಿ ಗರ್ಭಧಾರಣೆಯ ಸಮಯದಲ್ಲಿ ನಾಲ್ಕು ವಾರದಿಂದ ಹತ್ತು ವಾರಗಳವರೆಗೆ ಮಗುವಿನ ಕಿವಿಗಳು ಸಂಪೂರ್ಣವಾಗಿ ಬೆಳವಣಿಗೆ ಹೊಂದುತ್ತವೆ. ಈ ಹಂತದಲ್ಲಿ ಏನಾದರೂ ತಾಯಿಗೆ ವೈರಾಣುಜ್ವರ ಬಂದರೆ, ರುಬೆಲ್ಲಾ ಸೋಂಕು ಉಂಟಾದರೆ ಕಿವಿಗಳು ಸರಿಯಾಗಿ ರಚನೆಯಾಗುವುದಿಲ್ಲ. ರಚನೆಯಾದರೂ ಕೇಳಿಸುವ ಸಾಧ್ಯತೆ ಕಡಿಮೆ ಇರುತ್ತದೆ. ಇನ್ನು ರಕ್ತಸಂಬಂಧದಲ್ಲಿ ಮದುವೆಯಾದರೆ, ಕಡಿಮೆ ತೂಕ ಹೊಂದಿರುವ ಮಕ್ಕಳಿಗೆ, ಹೆರಿಗೆ ಸಮಯದಲ್ಲಿ ಮಗು ತಕ್ಷಣಕ್ಕೆ ಅಳದೇ ಇರುವುದು, ನವಜಾತ ಶಿಶುವಿಗೆ ಸಾಮಾನ್ಯವಾಗಿ ಇರುವ ಕಾಮಾಲೆಯ ಪ್ರಮಾಣ ಹೆಚ್ಚಳಗೊಂಡಾಗಲೂ ಒಳಕಿವಿಗಳಿಗೆ ತೊಂದರೆಯಾಗುವ ಸಾಧ್ಯತೆ ಹೆಚ್ಚು.

ಏನಿದು ಒಳಕಿವಿ?

ಈ ಒಳಕಿವಿಗಳಲ್ಲಿ ಕಾಕ್ಲಿಯಾ, ವೆಸ್ಟಬ್ಯೂಲ್, ಸೆಮಿಸರ್ಕ್ಯುಲರ್ ಕೆನಾಲ್ ಎನ್ನುವ ಸೂಕ್ಷ್ಮ ಅಂಗಗಳಿರುತ್ತವೆ. 'ಕಾಕ್ಲಿಯಾ' ನಮಗೆ ಸರಾಗವಾಗಿ ಕೇಳುವುದಕ್ಕೆ ಸಹಾಯ ಮಾಡುತ್ತದೆ. ವೆಸ್ಟಬ್ಯೂಲ್ ಹಾಗೂ ಸೆಮಿಸರ್ಕ್ಯುಲರ್ ಕೆನಾಲ್‌ಗಳು ದೇಹದ ಸಮತೋಲನವನ್ನು ಕಾಪಾಡಲು ನೆರವಾಗುತ್ತವೆ. ಇವೆಲ್ಲ ಸೇರಿದರೆ ಒಳಕಿವಿಯಾಗುತ್ತದೆ. ಈ ಒಳಕಿವಿಯ ನರ ಮಿದುಳಿಗೆ ನೇರವಾಗಿ ಸಂಪರ್ಕ ಹೊಂದಿರುತ್ತದೆ. ಈ ನರಗಳು ಸರಿಯಾಗಿದ್ದಾಗಷ್ಟೆ ಸಂದೇಶಗಳು ಸಮರ್ಪಕವಾಗಿ ಮಿದುಳಿಗೆ ತಲುಪುತ್ತವೆ. ಮಗು ಹುಟ್ಟುವಾಗಲೇ ಈ ನರಗಳು ಅಥವಾ ಕಾಕ್ಲಿಯಾ ಸಮರ್ಪಕವಾಗಿ ಬೆಳವಣಿಗೆ ಆಗದೇ ಇದ್ದಾಗ ಮಗುವಿಗೆ ಕಿವುಡುತನ ಬರುತ್ತದೆ.

ಯಾವುದೇ ಸಮಯದಲ್ಲಿಯಾದರೂ ಈ ಒಳಕಿವಿಗಳಲ್ಲಿ ತೊಂದರೆ ಉಂಟಾಗಿ ಕಿವುಡುತನ ಬರಬಹುದು. ವೈರಾಣುಜ್ವರ, ಮಿದುಳುಜ್ವರ, ಒಟೊಟಾಕ್ಸಿಕ್ ಇಂಜೆಕ್ಷನ್‌ಗಳ ಅಡ್ಡಪರಿಣಾಮ, ಅನಿಯಂತ್ರಿತ ಮಧುಮೇಹ, ವಯೋಸಹಜ ಕಾರಣಗಳಿಂದಲೂ ಶೇ 90ರಷ್ಟು ಶ್ರವಣದೋಷ ಉಂಟಾಗಬಹುದು. ಇಂಥ ಸಮಯಗಳಲ್ಲಿ ಕಾಕ್ಲಿಯರ್ ಇಂಪ್ಲ್ಯಾಂಟ್ ನೆರವಾಗಬಲ್ಲದು.

ಕಾಕ್ಲಿಯರ್ ಇಂಪ್ಲ್ಯಾಂಟ್ ಯಾಕಾಗಿ?

ಹಲವು ಬಾರಿ ಮಗುವಿಗೆ ಕಿವಿಯ ರಚನೆ ಸರಿ ಇರುತ್ತದೆ. ಆದರೆ, ಕೇಳುವಿಕೆಯಲ್ಲಿ ಸಮಸ್ಯೆ ಇರುತ್ತದೆ. ಕಿವುಡುತನ ಹೊಂದಿರುವ ಮಗು ತನ್ನ ದೃಶ್ಯಗಳನ್ನು ಅರ್ಥೈಸುವ ಕೌಶಲದಿಂದಾಗಿ ಮಾತಿಗೆ ಪ್ರತಿಕ್ರಿಯೆ ನೀಡಿದ ಹಾಗೆ ಅನಿಸುತ್ತದೆ. ನವಜಾತ ಶಿಶುವಿಗೆ ಶ್ರವಣ ಪರೀಕ್ಷೆಯನ್ನು ಮಾಡಿಸುವುದು ಕಡ್ಡಾಯವಾಗಿದ್ದರೂ ಹಲವು ಪೋಷಕರು ಇದನ್ನು ನಿರ್ಲಕ್ಷ್ಯ ಮಾಡುತ್ತಾರೆ. ಹೆಚ್ಚಿನ ಪ್ರಕರಣಗಳಲ್ಲಿ ಐದು ವರ್ಷಗಳಾಗುವವರೆಗೂ ಪೋಷಕರು ಮಗು ಮಾತಾಡದೇ ಇರುವುದರ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ.

ಹುಟ್ಟಿದ ಎರಡು ವರ್ಷಗಳ ಒಳಗೆ ಮಿದುಳಿನ ಬೆಳವಣಿಗೆ ಇರುತ್ತದೆ. ಈ ಸಂದರ್ಭದಲ್ಲಿ ಸಂವಹನಕ್ಕೆ ಅಗತ್ಯವಿರುವ ಬೆಳವಣಿಗೆಗಳೂ ನಡೆಯುತ್ತವೆ. ಇಂಥ ಸಮಯದಲ್ಲಿ ಪ್ರೊಫಂಡ್ ಲಾಸ್ ಇರುವ ಮಗುವಿಗೆ ಕಾಕ್ಲಿಯರ್ ಇಂಪ್ಲ್ಯಾಂಟ್‌ನ ಅಗತ್ಯವಿರುತ್ತದೆ. ಒಂದು ತಿಳಿದುಕೊಳ್ಳಬೇಕು ಶೇ 90ರಷ್ಟು ಶ್ರವಣ ದೋಷವಿರುವವರಿಗೆ ಶ್ರವಣಸಾಧನಗಳು ಯಾವುದೇ ರೀತಿಯಲ್ಲಿಯೂ ಸಹಾಯ ಮಾಡುವುದಿಲ್ಲ.

'ಓಎಇ', 'ಬೆರಾ' ಮುಂತಾದ ಪರೀಕ್ಷೆಗಳ ಮೂಲಕ ಹುಟ್ಟಿದ ಒಂದು ತಿಂಗಳ ಒಳಗೆ ಶ್ರವಣದೋಷವನ್ನು ಪತ್ತೆ ಹಚ್ಚಲಾಗುತ್ತದೆ. ಒಂದೊಮ್ಮೆ ಶ್ರವಣದೋಷವಿದ್ದರೆ, ಆ ಭಾಗದ ನರಗಳು ಕ್ರಿಯಾಶೀಲವಾಗಿರಬೇಕು ಎನ್ನುವ ಕಾರಣಕ್ಕೆ ಮೂರನೇ ತಿಂಗಳಿಗೆ ಮಗುವಿಗೆ ಶ್ರವಣಸಾಧನಗಳನ್ನು ಅಳವಡಿಸಲಾಗುತ್ತದೆ. ಮಗುವಿಗೆ ಆರನೇ ತಿಂಗಳ ನಂತರ ಸರ್ಜರಿ ಮಾಡಲಾಗುತ್ತದೆ. ಚಿಕ್ಕ ವಯಸ್ಸಿನಲ್ಲಿ ಕಾಕ್ಲಿಯರ್ ಇಂಪ್ಲ್ಯಾಂಟ್ ಮಾಡಿದರೆ ಮಕ್ಕಳು ಮಾತು ಕಲಿಯುವ ಪ್ರಕ್ರಿಯೆಗೆ ತೆಗೆದುಕೊಳ್ಳುವ ಸಮಯ ಕಡಿಮೆಯಾಗುತ್ತದೆ ಮತ್ತು ಮಿದುಳಿನ ಬೆಳವಣಿಗೆಗೆ ಪೂರಕವಾಗಿರುತ್ತದೆ.

ಇಂಪ್ಲ್ಯಾಂಟ್ ಹೇಗಿರುತ್ತದೆ?

ಮೊದಲಿಗೆ ಇಂಪ್ಲ್ಯಾಂಟ್ ಮಾಡುವ ಮುನ್ನ ಶ್ರವಣದೋಷದ ಪ್ರಮಾಣವನ್ನು ಅರಿತುಕೊಳ್ಳಲಾಗುತ್ತದೆ. ಕಿವಿ ಮತ್ತು ಮಿದುಳಿನ ಎಂಆರ್‌ಐ ಹಾಗೂ ಸಿ.ಟಿ. ಸ್ಕ್ಯಾನ್ ಮಾಡಿಸಲಾಗುತ್ತದೆ. ಕಾಕ್ಲಿಯರ್‌ನಲ್ಲಿರುವ ನರ ಚೆನ್ನಾಗಿ ಬೆಳೆದಿದೆಯೇ ಇಲ್ಲವೇ ಎಂಬುದನ್ನೂ ಪರೀಕ್ಷಿಸಲಾಗುತ್ತದೆ. ವಾಕ್ ತಜ್ಞರು ಹಾಗೂ ಮನಃಶಾಸ್ತ್ರಜ್ಞರು ಮಗುವಿನ ಬೆಳವಣಿಗೆಯನ್ನು ಪರಿಶೀಲನೆ ನಡೆಸುತ್ತಾರೆ.

ಇಂಪ್ಲ್ಯಾಂಟ್ ಎರಡು ಬಗೆಯದ್ದಾಗಿರುತ್ತದೆ. ಒಂದು ಆಂತರಿಕವಾಗಿ ಕಾಂಪೊನೆಂಟ್ ಅನ್ನು ಅಳವಡಿಸಲಾಗುತ್ತದೆ. ಈ ಕಾಂಪೊನೆಂಟ್ ಅನ್ನು ಹಾಕಿ ಒಂದು ದಿನದ ಒಳಗೆ ಮನೆಗೆ ಕಳಿಸಲಾಗುತ್ತದೆ. ವಾರದ ನಂತರ ಬಾಹ್ಯವಾಗಿ ಮ್ಯಾಗ್ನೆಟ್ ಇರುವ ಕಾಂಪೊನೆಂಟ್ ಅನ್ನು ಅಳವಡಿಸಲಾಗುತ್ತದೆ. ಇದರೊಳಗೆ ಮೈಕ್ರೋಫೋನ್ ಇರುತ್ತದೆ. ಇಲ್ಲಿಂದ ಆ ಮಗುವಿನ ಕೇಳುವಿಕೆಯ ಪಯಣ ಆರಂಭಗೊಳ್ಳುತ್ತದೆ. ಮಗು ಹೊರಜಗತ್ತಿಗೆ ತೆರೆದುಕೊಳ್ಳುತ್ತದೆ. ಇದಾದ ಮೇಲೆ 'ಆಡಿಟರಿ ವರ್ಬಲ್ ಥೆರಪಿ'ಯನ್ನು ಹಂತ ಹಂತವಾಗಿ ನೀಡಲಾಗುತ್ತದೆ. ಈ ಥೆರಪಿ ನೀಡುವವರು ಮಗುವಿನ ಇಡೀ ಕುಟುಂಬಕ್ಕೂ ಥೆರಪಿಯ ತರಬೇತಿ ನೀಡುತ್ತಾರೆ. ಶಸ್ತ್ರಚಿಕಿತ್ಸೆಯ ನಂತರ, ಮಗುವು ಉತ್ತಮ ಫಲಿತಾಂಶಗಳನ್ನು ಪಡೆಯಲು ಕನಿಷ್ಠ ಎರಡು ವರ್ಷಗಳ ಕಾಲ ನಿರಂತರವಾಗಿ ಥೆರಪಿಯನ್ನು ಪಡೆಯಬೇಕಾಗುತ್ತದೆ. ಈ ಥೆರಪಿಯ ಅವಧಿ ಮಗುವಿನಿಂದ ಮಗುವಿಗೆ ಭಿನ್ನವಾಗಿರುತ್ತದೆ. ಈ ಥೆರಪಿ ತೆಗೆದುಕೊಂಡು ಮಗು ತನ್ನ ವಯಸ್ಸಿಗೆ ಅನುಗುಣವಾಗಿ ಮಾತನಾಡಿದರೆ ಅಲ್ಲಿಗೆ ಸರ್ಜರಿ ಯಶಸ್ವಿಯಾದಂತೆ.

ಹೀಗೆ ಸರ್ಜರಿ ಯಶಸ್ವಿಯಾಗಲು ಪ್ರಮುಖ ಅಂಶವೇ ಶ್ರವಣದೋಷವನ್ನು ಬೇಗ ಪತ್ತೆ ಹಚ್ಚುವುದು ಮತ್ತು ಮಗುವಿಗೆ ಎರಡು ವರ್ಷ ತುಂಬುವುದರೊಳಗೆ ಈ ಕಾಕ್ಲಿಯರ್ ಇಂಪ್ಲ್ಯಾಂಟ್ ಸರ್ಜರಿ ಮಾಡಿಸುವುದು. ಇದರಿಂದ ಮಗು ವಯೋಸಹಜವಾಗಿ ಮಾತನಾಡು ವಂತೆ ಮಾಡುವ ಸಾಧ್ಯತೆ ಹೆಚ್ಚು. ಅಲ್ಲದೆ ಸಾಮಾನ್ಯರಂತೆ ಮಗು ಜೀವನವನ್ನು ನಡೆಸಬಲ್ಲದು.

'ನೀಟ್' ದಿಕ್ಸೂಚಿ — ಪಿಯುಸಿ/ಸಿಇಟಿ ಪರೀಕ್ಷೆ

CHEMISTRY

1) Which of the following statements are true?

A) Unlike Ga that has a very high melting point, Cs has a very low melting point.
B) On Pauling scale, the electronegativity values of N and Cl are not the same.
C) Ar, K^+, Cl^-, Ca^{2+}, and S^{2-} are all isoelectronic species.
D) The correct order of the first ionization enthalpies of Na, Mg, Al, and Si is Si >Al > Mg > Na.
E) The atomic radius of Cs is greater than that of Li and Rb.

Choose the correct answer from the options given below:

(a) A, B, and E only **(b) C and E only**
(c) C and D only **(d) A, C, and E only**

Ans (b)

Expln:- Both Ga and Cs have low melting points.

Element	Melting point/K
Ga	303
Cs	302

* On Pauling scale, the electronegativity value of N and Cl have same (3.0).
*Ar, K^+, Cl^-, Ca^{2+} and S^{2-} have 18 electrons. So these are isoelectronic species.
* The correct order of first ionization enthalpy is Si > Mg > Al > Na First ionisation enthalpy of Mg is higher than Al because the penetration of a 3s-electron to the nucleus is more than that of a 2p-electron.
* Generally down the group atomic radii increases

Atom	Atomic radius/pm
Li	152
Rb	244
CS	262

2) The pair of compounds having identical shapes for their molecules is

a) CH_4, SF_4 b) BCl_2, ClF_3
c) XeF_2, $ZnCl_2$ d) Sl_2, CO_2

Ans:- (c)

Expln:- XeF_2 is linear in shape with 2 bond pairs and 3 lone pairs of electrons.
$ZnCl_2$ is also linear in shape with 2 bond pairs of electrons.

3) Intermolecular forces are forces of attraction and repulsion between interacting particles that will include:

A. dipole-dipole forces.
B. dipole - induced dipole forces,
C. hydrogen bonding.
D. covalent bonding.
E. dispersion forces.

Choose the most appropriate answer from the options given below:

a) A, C, D, E are correct.
b) B, C, D, E are correct.
c) A, B, C, D are correct.
d) A, B, C, E are correct.

Ans:- (d) Covalent bonding is NOT an intermolecular force while rest all are considered as intermolecular forces.





4) Using MOT, compare O_2^+ and O_2^- species and choose the incorrect option

a) O_2^- is less stable.
b) Both O_2^+ and O_2^- are paramagnetic.
c) O_2^+ has higher bond order than O_2^-
d) O_2^+ is diamagnetic while O_2^- is paramagnetic.

Ans: (d)


Expl:- O_2^+ has 15 electrons and O_2^- has 17 electrons, both of them are paramagnetic.


5) The compound that will undergo S_N1 reaction with the fastest rate is

a)

b)

c)

d)


Ans:- d

Expln:- Reactivity towards S_N1 depends upon stability of carbocation. Order of stability is



Hence

is most reactive

6) While charging the lead storage battery,

a) $PbSO_4$ on cathode is reduced to Pb
b) $PbSO_4$ on anode is oxidized to PbO_2
c) $PbSO_4$ on anode is reduced to Pb
d) $PbSO_4$ on cathode is oxidized to Pb.

Ans: (C)

Expln:- During charging of lead storage battery, at the anode: $PbSO_4 + 2e^- \rightarrow Pb + SO_4^{2-}$

7) Sucrose is NOT a reducing sugar since

a) it is chemically stable
b) it contains no free aldehydes or keto group adjacent to a CH-OH group
c) it is built up of a fructose unit
d) it is optically active **Ans:- (b)**

PHYSICS

26) In a permanent magnet at room temperature (.....Contd)

Expln:- Due to thermal agitation, with increase in temperature randomness of the molecules increases and magnetic field moments get partially aligned. Hence the domains are partially aligned.

27) A linearly polarised electromagnetic wave given as $E = E_0 \hat{i} \cos(kz - \omega t)$ is incident normally on a perfectly reflecting infinite wall at z= a. Assuming that the material of the wall is optically inactive, the reflected wave will be given as-

a) $E_r = -E_0 \hat{i} \cos(kz - \omega t)$
b) $E_r = E_0 \hat{i} \cos(kz + \omega t)$
c) $E_r = -E_0 \hat{i} \cos(kz + \omega t)$
d) $E_r = E_0 \hat{i} \sin(kz - \omega t)$

Ans :b

28) Light with an energy flux of 20 W/cm^2 falls on a non-reflecting surface at normal incidence. If the surface has an area of 30 cm^2. The total momentum delivered (for complete absorption) during 30 minutes is

a) 36×10^{-5} kg m/s b) 36×10^{-4} kg m/s
c) 108×10^4 kg m/s d) 1.08×10^7 kg m/s

Ans:- b

29) The intensity of electric field inside a charged spherical shell is ....

a) 1 .b) 0
c) ∝ d) none

Ans:-b

30) A car moving with a velocity of 20 ms^{-1} is stopped in a distance of 40 m. If the same car is travelling at double the velocity, the distance travelled by it for the same retardation is

a) 640 m b) 320 m
c) 1280 m d) 160 m

Ans: (d)

Expln:- Let the initial speed of car be $u = 20\ m/s$
Final speed of car; $V = 0\ m/s$
Retardation = a

Case – I

$V^2 = u^2 + 2as$
$0 = u^2 + 2as$
$-400/[2 * 40] = a$
$[a = -5\ m/s^2]$

Case – II

$u = 40\ m/s$
$v = 0\ m/s$
$a = -5\ m/s^2$
$s = ?$
$V^2 = u^2 + 2as$
$0 = (40)^2 + 2(-5).S$
$S = 1600/10$
$S = 160\ m$

31) A hollow metal sphere of radius 10 cm is charged such that the potential on its surface is 5V. What is the potential at the centre of sphere?

.a) 5 V b) 10 V
c) ∝ d) 0

Ans:- a

32) What is the electrostatic potential due to an electric dipole at an equatorial point?

a) 1 b) 0
c) ∝ d) none

Ans:- b

33) Consider a current carrying wire (current *I*) in the shape of a circle. Note that as the current progresses along the wire, the direction of j (current density) charges in an exact manner, while the current *I* remain unaffected. The agent that is *essentially* responsible for is ....

a) source of emf.
b) electric field produced by charges accumulated on the surface of wire.
c) the charges just behind a given segment of wire which push them just the right way by repulsion.
d) the charges ahead.

Ans:-b

34) A solenoid of inductance 2 H carries a current of 1 A. What is the magnetic energy stored in a solenoid?

(a) 4 J (b) 2 J
(c) 5 J (d) 1 J

Ans: (d)

Expln : Here, Inductance, $L = 2$ H, current, $I = 1$ A
Magmnetic energy stored in the solenoid is
$U = \frac{1}{2}LI^2 = \frac{1}{2} \times 2 \times (1)^2 = 1\ J$

35) The angle between velocity and acceleration of a particle describing uniform circular motion is

a) 45° b) 60°
c) 90° d). 180°

Ans: (c)

Expln:- In a circular motion, velocity is always tangential to the circular path. Also in a uniform circular motion, tangential acceleration is zero. Hence, the net acceleration will be centripetal acceleration which always acts towards the centre of the circular path. Hence, velocity and acceleration of a particle describing uniform circular motion are at a right angle to each other.

36) The self inductance L of a solenoid of length *l* and area of cross section A, with a fixed number of turns N increases as (Contd....)

ಬೃಂದಾವಿಹಾರಿಯಾದ ಗಣೇಶ್

• ಅಭಿಲಾಷ್ ಪಿ.ಎಸ್.

'ದಂಡುಪಾಳ್ಯ' ಸಿನಿಮಾ ನಿರ್ದೇಶಕ ಶ್ರೀನಿವಾಸರಾಜು ಈ ಹಿಂದೆ 'ಕೃಷ್ಣಂ ಪ್ರಣಯ ಸಖಿ' ಸಿನಿಮಾವನ್ನು ಟ್ರೇಲರ್ ಬಿಡುಗಡೆಗೊಳಿಸಿದ ತೆರೆಗೆ ತಂದಿದ್ದರು. 'ದ್ವಾಪರ..', 'ಚಿನ್ನಮ್ಮ..' ಹಾಡುಗಳು ಈ ಸಿನಿಮಾಗೆ ಅಮಿತಪ್ರಾಣವಾಗಿದ್ದವು. ಇದೀಗ ಮತ್ತೊಮ್ಮೆ ಹಾಡುಗಳ ಲೋಕದಲ್ಲೇ 'ಬೃಂದಾವಿಹಾರಿ'ಯ ದರ್ಶನ ಮಾಡಿಸಲು ಅವರು ಸಜ್ಜಾಗಿದ್ದಾರೆ.

ಶ್ರೀನಿವಾಸರಾಜು ಮತ್ತೊಮ್ಮೆ ಗಣೇಶ್ ಅವರೊಂದಿಗೆ ಸಿನಿಮಾ ಮಾಡಿದ್ದು, ಇತ್ತೀಚೆಗೆ ಸಿನಿಮಾದ ಶೀರ್ಷಿಕೆ ಘೋಷಣೆಯಾಗಿದೆ. 'ಬೃಂದಾವಿಹಾರಿ' ಸಿನಿಮಾ ಸದ್ಯ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ. ಸಮೃದ್ಧಿ ವಿ.ಮಂಜುನಾಥ್ ನಿರ್ಮಾಣ ಮಾಡುತ್ತಿರುವ ಈ ಸಿನಿಮಾ ಪ್ರೇಮಕಥೆಯನ್ನು ಹೊತ್ತ ಕೌಟುಂಬಿಕ ಸಿನಿಮಾವಾಗಿದೆ. ಗಣೇಶ್ ಅವರಿಗೆ ನಾಯಕಿಯರಾಗಿ ದೇವಿಕಾ ಭಟ್ ಹಾಗೂ ಮಾಳವಿಕ ಶರ್ಮ ಅಭಿನಯಿಸಿದ್ದಾರೆ. ಚಿತ್ರಕ್ಕೆ ಕಥೆ, ಚಿತ್ರಕಥೆಯನ್ನೂ ಶ್ರೀನಿವಾಸರಾಜು ಬರೆದಿದ್ದು, ಸಿನಿಮಾ ಬಗ್ಗೆ ಅವರು ಮಾತಿಗಿಳಿದಾಗ...

'ಹಾಡುಗಳು, ಶೀರ್ಷಿಕೆ ಹಾಗೂ ಸಿನಿಮಾ ಬಂದ ಮೇಲೆ ಸದ್ದು ಮಾಡಬೇಕು. ಸದ್ಯ 'ಬೃಂದಾವಿಹಾರಿ' ಸಿನಿಮಾ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದ್ದು, ಐಪಿಎಲ್ ಮುಗಿದ ಕೂಡಲೇ ಅಂದರೆ ಎರಡು ತಿಂಗಳ ನಂತರ ತೆರೆಗೆ ಬರಲಿದೆ. ಗಣೇಶ್ ಅವರ ಎರಡು ಸಿನಿಮಾಗಳು ಆದ ಬಳಿಕ ನನ್ನ ಸಿನಿಮಾ ಬರಲಿದೆ ಎಂದುಕೊಂಡಿದ್ದೆ. ಆದರೆ ಕಾರಣಾಂತರಗಳಿಂದ ಅವುಗಳು ವಿಳಂಬವಾದವು. ಹೀಗಾಗಿ 'ಬೃಂದಾವಿಹಾರಿ'ಯು ಗಣೇಶ್ ಅವರ ಮುಂದಿನ ಸಿನಿಮಾವಾಗಲಿದೆ. ಸರಣಿಯಾಗಿ ಸಿನಿಮಾ ಮಾಡಲು ನಾನು ಗಣೇಶ್ ಮಾತನಾಡಿಕೊಂಡಿದ್ದೆವು. ನಾನು ನನ್ನ ಮಾದರಿಯ ಸಿನಿಮಾದಲ್ಲಿ ತೊಡಗಿಸಿಕೊಂಡಿದ್ದೆ. ಅದರ ಬರವಣಿಗೆಯಲ್ಲಿ ಇನ್ನೂ ಕೊಂಚ ಬದಲಾವಣೆ, ತಯಾರಿ ಬೇಕೆಂದೆನಿಸಿತು. ಈ ಅಂತರದಲ್ಲಿ 'ಬೃಂದಾವಿಹಾರಿ' ಕಥೆ ಮಾಡಿದೆ. ಒಂದು ಹಿಟ್ ನೀಡಿದ ನಟ–ನಿರ್ದೇಶಕನ ಕಾಂಬಿನೇಷನ್‌ನ ಸಿನಿಮಾಗೆ ಜನ ಕಾಯುತ್ತಿರುತ್ತಾರೆ. ಗಣೇಶ್ ಅವರ ಮುಂದಿನ ಸಿನಿಮಾ ನನ್ನದೇ ಆಗಲಿದೆ ಎಂದುಕೊಂಡಿರಲಿಲ್ಲ. ಅದು ಆಕಸ್ಮಿಕ' ಎನ್ನುತ್ತಾರೆ ಶ್ರೀನಿವಾಸರಾಜು.

ಸಿನಿಮಾದಲ್ಲಿ ಏಳು ಹಾಡುಗಳು


ಶ್ರೀನಿವಾಸರಾಜು

'ಕೃಷ್ಣಂ ಪ್ರಣಯ ಸಖಿ'ಯಲ್ಲಿ ಏಳಕ್ಕೂ ಹಾಡುಗಳಿದ್ದವು. ಅದರಲ್ಲಿ ವಿ.ನಾಗೇಂದ್ರಪ್ರಸಾದ್ ಅವರು ಬರೆದ 'ದ್ವಾಪರದಾಟುತ..' ಹಾಡು ಹಿಟ್ ಆಗಿತ್ತು. 'ಬೃಂದಾವಿಹಾರಿ' ಯಲ್ಲೂ ಏಳು ಹಾಡುಗಳು ಇರಲಿವೆ. ಇವುಗಳೆಲ್ಲವುದಕ್ಕೂ ವಿ.ನಾಗೇಂದ್ರ ಪ್ರಸಾದ್ ಅವರೇ ಸಾಹಿತ್ಯ ಬರೆಯಲಿದ್ದಾರೆ. 'ಎಲ್ಲಾ ಕೌಟುಂಬಿಕ, ಪ್ರೇಮಕಥೆಯ ಸಿನಿಮಾಗಳಿಗೂ ಹಾಡುಗಳೇ ಅಮೃತಪ್ರಾಣ. ಇದೊಂದು ಸಂಪೂರ್ಣ ಬದಲಾದ ಹಾಡುಗಳು ನಮ್ಮ ರಕ್ತದಲ್ಲೇ ಇವೆ. ಎಲ್ಲಾ ಹಾಡುಗಳನ್ನು ನಾಗೇಂದ್ರ ಪ್ರಸಾದ್ ಅವರೇ ಬರೆದಿದ್ದಾರೆ. ಸಾಹಿತ್ಯ ಬರೆಯುವವರು ಕಥೆಯ ಜೊತೆ ಕೊನೆಯವರೆಗೂ ಪ್ರಯಾಣ ಮಾಡಿ, ಅನುಭವಿಸಿ ಬರೆಯಬೇಕು ಎನ್ನುವ ಕಾರಣಕ್ಕೆ ಒಬ್ಬರಿಂದಲೇ ಬರೆಸಿದ್ದೇನೆ' ಎನ್ನುತ್ತಾರೆ ನಿರ್ದೇಶಕರು.

ಎಲ್ಲಾ ಹಾಡುಗಳಿಗೂ ವಿ.ನಾಗೇಂದ್ರ ಪ್ರಸಾದ್ ಸಾಹಿತ್ಯ

ಕೌಟುಂಬಿಕ ಸಿನಿಮಾ ಬೇಕಾಗಿದೆ

ಗಣೇಶ್ ಅವರು ಈ ಹಿಂದೆ 'ಕೃಷ್ಣ', 'ಕೃಷ್ಣಂ ಪ್ರಣಯ ಸಖಿ' ಮಾಡಿ ಇದೀಗ ಮತ್ತೊಮ್ಮೆ ಕೊಳಲು ಹಿಡಿದಿದ್ದಾರೆ. ಈ ಬಗ್ಗೆ ವಿವರ ನೀಡಿದ ಶ್ರೀನಿವಾಸರಾಜು, 'ಶೀರ್ಷಿಕೆ ಜನರನ್ನು ಸೆಳೆಯುವಂತಿರಬೇಕು, ಭಿನ್ನವಾಗಿರಬೇಕು. ಅದು ಕೇಳಲೂ ಇಂಪಾಗಿರಬೇಕು. ಹೀಗಾಗಿ ಈ ಶೀರ್ಷಿಕೆ ಇಟ್ಟೆ. ಕಥೆ, ಅದರೊಳಗಿನ ಗಣೇಶ್ ಅವರ ಪಾತ್ರವು ಶೀರ್ಷಿಕೆಗೆ ಬಹಳ ಹತ್ತಿರದ ಸಂಬಂಧ ಹೊಂದಿದೆ. ಸದ್ಯ ಕೌಟುಂಬಿಕ ಸಿನಿಮಾಗಳು ಹೆಚ್ಚಿನ ಸಂಖ್ಯೆಯಲ್ಲಿ ಬರಬೇಕಿದೆ. ಜನರೂ ಈ ಶೀರ್ಷಿಕೆ ಮೆಚ್ಚಿದ್ದಾರೆ' ಎಂದರು.

'ಈ ರೀತಿ ಪ್ರೇಮಕಥೆಯ ಜೊತೆಗೆ ನನ್ನ ಮಾದರಿಯ, ಅಂದರೆ 'ದಂಡುಪಾಳ್ಯ' ಜಾನರ್‌ನ ಸಿನಿಮಾಗಳನ್ನು ಮಾಡುವುದು ನನ್ನ ಆಸೆ. ಅಂತಹ ಕಥೆಯೊಂದನ್ನು ಸಿದ್ಧಪಡಿಸಿದ್ದೇನೆ. ಅದರ ಬರವಣಿಗೆ ಇನ್ನಷ್ಟು ಗಟ್ಟಿ ಮಾಡಿಕೊಳ್ಳಬೇಕಿದೆ. 'ಬೃಂದಾವಿಹಾರಿ' ಬಳಿಕ ಆ ಕಥೆಯನ್ನೇ ಕೈಗೆತ್ತಿಕೊಳ್ಳಲಿದ್ದೇನೆ' ಎಂದರು ಶ್ರೀನಿವಾಸರಾಜು.

ಚಿತ್ರಕ್ಕೆ ಮಲಯಾಳದ 'ಹೃದಯಂ' ಸಿನಿಮಾ ಖ್ಯಾತಿಯ ಹೇಶಮ್ ಅಬ್ದುಲ್ ವಹಾಬ್ ಸಂಗೀತ ಸಂಯೋಜಿಸಿದ್ದಾರೆ, ವೆಂಕಟ್ ಪ್ರಸಾದ್ ಛಾಯಾಚಿತ್ರಗ್ರಹಣವಿದೆ. ❖


ಗಣೇಶ್

₹500 ಕೋಟಿ ದಾಟಿದ 'ಧುರಂಧರ್–2' ಗಳಿಕೆ

ಆದಿತ್ಯ ಧಾರ್ ನಿರ್ದೇಶನದ, ರಣ್‌ವೀರ್ ಸಿಂಗ್ ನಟನೆಯ 'ಧುರಂಧರ್–ದಿ ರಿವೇಂಜ್' ಸಿನಿಮಾ ಬಿಡುಗಡೆಯಾದ ನಾಲ್ಕು ದಿನಗಳಲ್ಲಿ ಭಾರತದಲ್ಲಿ ₹541 ಕೋಟಿಗೂ ಅಧಿಕ ಹಣ ಗಳಿಸಿದೆ.

ಸಿನಿಮಾವು ಪೇಯ್ಡ್ ಪ್ರಿವ್ಯೂವ್ ಮೂಲಕವೇ ₹43 ಕೋಟಿ ಗಳಿಸಿದ್ದು, ಬಿಡುಗಡೆಯಾದ ದಿನ(ಮಾರ್ಚ್ 19) ₹102.55 ಕೋಟಿ ಗಳಿಸಿತ್ತು. ವಿಶ್ವದಾದ್ಯಂತ ಸಿನಿಮಾದ ಒಟ್ಟಾರೆ ಗಳಿಕೆಯು ₹751 ಕೋಟಿ ದಾಟಿದೆ ಎಂದು ಸ್ಯಾಕ್ನಿಲ್ಕ್ ವೆಬ್‌ಸೈಟ್ ಉಲ್ಲೇಖಿಸಿದೆ. 2025ರ ಡಿಸೆಂಬರ್‌ನಲ್ಲಿ ತೆರೆಕಂಡ 'ಧುರಂಧರ್'ನ ಮುಂದುವರಿದ ಕಥೆ ಈ ಸಿನಿಮಾದಲ್ಲಿದ್ದು, ಮೊದಲನೇ ಭಾಗ ಬಾಕ್ಸ್ ಆಫೀಸ್‌ನಲ್ಲಿ ₹1000 ಕೋಟಿಗೂ ಅಧಿಕ ಗಳಿಸಿತ್ತು. ಚಿತ್ರದಲ್ಲಿ ಆರ್.ಮಾಧವನ್, ಅರ್ಜುನ್ ರಾಮ್‌ಪಾಲ್, ಸಂಜಯ್ ದತ್ ನಟಿಸಿದ್ದಾರೆ. ಸಿನಿಮಾವನ್ನು ಬಿ62 ಸ್ಟುಡಿಯೊಸ್ ನಿರ್ಮಾಣ ಮಾಡಿದ್ದು, ಹಿಂದಿ, ಕನ್ನಡ ಸೇರಿದಂತೆ ಐದು ಭಾಷೆಗಳಲ್ಲಿ ತೆರೆಕಂಡಿದೆ. ❖


ರಣ್‌ವೀರ್ ಸಿಂಗ್


ರಿತೇಶ್ ದೇಶ್‌ಮುಖ್

'ಶಿವಾಜಿ'ಯಾದ ರಿತೇಶ್

ಛತ್ರಪತಿ ಶಿವಾಜಿ ಮಹಾರಾಜರ ಜೀವನದ ಕುರಿತು ಈಗಾಗಲೇ ಹಲವು ಸಿನಿಮಾಗಳು ಬಂದಿವೆ. ನಟ ರಿಷಬ್ ಶೆಟ್ಟಿ ಅವರೂ ತಮ್ಮ ಮುಂದಿನ ಸಿನಿಮಾದಲ್ಲಿ ಶಿವಾಜಿಯಾಗಿ ಕಾಣಿಸಿಕೊಳ್ಳಲಿದ್ದಾರೆ. ಇದೀಗ ಬಾಲಿವುಡ್ ನಟ ರಿತೇಶ್ ವಿಲಾಸ್‌ರಾವ್ ದೇಶ್‌ಮುಖ್ 'ಶಿವಾಜಿ'ಯಾಗಿ ತೆರೆ ಮೇಲೆ ಬರಲು ಸಜ್ಜಾಗಿದ್ದಾರೆ.


'ರಾಜಾ ಶಿವಾಜಿ' ಎಂಬ ಚಿತ್ರವನ್ನು ಜಿಯೋ ಸ್ಟುಡಿಯೊಸ್ ಪ್ರಸ್ತುತಪಡಿಸಿದ್ದು, ಮುಂಬೈ ಫಿಲ್ಮ್ ಕಂಪನಿ ಬ್ಯಾನರ್ ಅಡಿಯಲ್ಲಿ ಜ್ಯೋತಿ ದೇಶಪಾಂಡೆ ಮತ್ತು ಜೆನೆಲಿಯಾ ದೇಶಮುಖ್ ಜಂಟಿಯಾಗಿ ನಿರ್ಮಾಣ ಮಾಡಿದ್ದಾರೆ. ರಿತೇಶ್ ಅವರೇ ಸಿನಿಮಾವನ್ನು ನಿರ್ದೇಶಿಸಿದ್ದು, 'ಧುರಂದರ್–ದಿ ರಿವೇಂಜ್' ಚಿತ್ರ ಪ್ರದರ್ಶನವಾಗುತ್ತಿರುವ ಎಲ್ಲಾ ತೆರೆಗಳಲ್ಲಿ ಸಿನಿಮಾದ ಟೀಸರ್ ಬಿಡುಗಡೆ ಮಾಡಿದೆ ಚಿತ್ರತಂಡ.

ತಾರಾಗಣದಲ್ಲಿ ಸಂಜಯ್ ದತ್, ಅಭಿಷೇಕ್ ಬಚ್ಚನ್, ವಿದ್ಯಾ ಬಾಲನ್ ಮುಂತಾದವರು ನಟಿಸಿದ್ದಾರೆ. ಅಜಯ್-ಅತುಲ್ ಸಂಗೀತ, ಸಂತೋಷ್ ಶಿವನ್ ಛಾಯಾ-ಚಿತ್ರಗ್ರಹಣ ಚಿತ್ರಕ್ಕಿದೆ. ಸಿನಿಮಾವು ಮೇ 1ರಂದು ಪ್ಯಾನ್ ಇಂಡಿಯಾ ಮಟ್ಟದಲ್ಲಿ ತೆರೆಗೆ ಬರಲಿದೆ. ❖

'ದೇವಿ ಮಹಾತ್ಮೆ'ಯ ಸೆಟ್‌ನಲ್ಲಿ...

'ಮರ್ಯಾದೆ ಪ್ರಶ್ನೆ' ಸಿನಿಮಾ ನಿರ್ದೇಶಿಸಿದ್ದ ನಾಗರಾಜ್ ಸೋಮಯಾಜಿ ನಿರ್ದೇಶನದ 'ದೇವಿ ಮಹಾತ್ಮೆ' ಸಿನಿಮಾದ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಂಡಿದೆ.

ಕುಂದಾಪುರ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದ್ದು, ನಟ ರಂಗಾಯಣ ರಘು ಭಾಗವಹಿಸಿದ್ದರು. ಶೀಘ್ರದಲ್ಲೇ ಚಿತ್ರತಂಡ ಎರಡನೇ ಹಂತದ ಶೂಟಿಂಗ್ ಆರಂಭಿಸಲಿದೆ. ಈ ಚಿತ್ರದ ಮೂಲಕ ಕಾಮಿಡಿ ಥ್ರಿಲ್ಲರ್ ಕಥೆ ಹೇಳಲಿದ್ದಾರೆ ನಿರ್ದೇಶಕರು. 'ದೇವಿ ಮಹಾತ್ಮೆ' ಚಿತ್ರಕ್ಕೆ ನಾಗರಾಜ್ ಅವರೇ ಚಿತ್ರಕಥೆ ಬರೆದಿದ್ದು, ಬರವಣಿಗೆಯಲ್ಲಿ ಅರವಿಂದ್ ಕುಪ್ಳೀಕರ್, ಭಾಸ್ಕರ್ ಬಂಗೇರ ಹಾಗೂ ಗುರು ಆರ್ಯ ಹಾಗೂ ವಾದಿರಾಜ ಶೆಟ್ಟಿ ಜೊತೆಯಾಗಿದ್ದಾರೆ. ಯುವಿಜಿ ಸ್ಟುಡಿಯೊ ಬ್ಯಾನರ್‌ನಡಿ ವಿದ್ಯಾ ಗಾಂಧಿರಾಜನ್ ಸಿನಿಮಾಗೆ ಬಂಡವಾಳ ಹೂಡಿದ್ದಾರೆ. ಎಸ್.ಕೆ.ರಾವ್ ಛಾಯಾಚಿತ್ರಗ್ರಹಣ, ಲಿಖಿತ್ ಪ್ರಸಾದ್ ಕೆ.ಶೆಟ್ಟಿ ಸಂಗೀತ ನಿರ್ದೇಶನ ಚಿತ್ರಕ್ಕಿದೆ. ❖


ರಂಗಾಯಣ ರಘು





ಬಾಗಲಕೋಟೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ನಡೆದ ಬೃಹತ್ ಮೆರವಣಿಗೆ (ಎಡಚಿತ್ರ) ದಾವಣಗೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಪರವಾಗಿ ಬೃಹತ್ ಮೆರವಣಿಗೆ ನಡೆಯಿತು. ಸಚಿವ ಎಸ್‌.ಎಸ್‌.ಮಲ್ಲಿಕಾರ್ಜುನ್ ಹಾಗೂ ಮುಖಂಡರು ಭಾಗವಹಿಸಿದ್ದರು – ಪ್ರಜಾವಾಣಿ ಚಿತ್ರಗಳು

ಕಡೇ ದಿನ 43 ಮಂದಿ ನಾಮಪತ್ರ

ಒಂದನೇ ಪುಟದಿಂದ...

ಬಾಗಲಕೋಟೆ ಕ್ಷೇತ್ರದ ಉಪ ಚುನಾವಣೆ ಕಣದಲ್ಲಿ 16 ಅಭ್ಯರ್ಥಿಗಳಿದ್ದು, 26 ನಾಮಪತ್ರ ಸಲ್ಲಿಕೆ ಯಾಗಿವೆ. ಸೋಮವಾರ 13 ಅಭ್ಯರ್ಥಿಗಳಿಂದ 19 ನಾಮಪತ್ರ ಸಲ್ಲಿಕೆಯಾದವು.

'ಬಿಜೆಪಿಯಿಂದ ವೀರಣ್ಣ ಚರಂತಿಮಠ ಮೂರು ಸೆಟ್ ಮತ್ತು ಕಾಂಗ್ರೆಸ್‌ನಿಂದ ಉಮೇಶ ಮೇಟಿ ನಾಲ್ಕು ಸೆಟ್ ನಾಮಪತ್ರ ಸಲ್ಲಿಸಿದ್ದಾರೆ' ಎಂದು ಚುನಾವಣಾಧಿಕಾರಿ ಸಂತೋಷ ಜಗಲಾಸರ ತಿಳಿಸಿದ್ದಾರೆ.

ಕಾಂಗ್ರೆಸ್‌ನಿಂದ ಗೋವಿಂದರಾಜ ಬಳ್ಳಾರಿ, ಕರ್ನಾಟಕ ರಾಷ್ಟ್ರ ಸಮಿತಿಯಿಂದ ನಾಗರಾಜ ಕಲಕುಟಗರ, ಜನತಾ ಚಳವಳಿ ಭಾರತ ಪಕ್ಷದಿಂದ ತೇಜೋರಾಮ ಶೆಟ್ಟಿ, ಆಲ್ ಇಂಡಿಯಾ ಜನರಕ್ಷಾ ಪಾರ್ಟಿಯಿಂದ ಸಿದ್ದಪ್ಪ ಗೋಡಿ, ಪಕ್ಷೇತರರಾಗಿ ಶಿವಪ್ಪ ಪಡಸಲಗಿ, ಯಂಕಪ್ಪ ಕಮತಗಿ, ಅಬ್ದುಲ್ ರಜಾಕ್ ಬಾಳಿಕಾಯಿ, ಆಯುಬ್‌ಖಾನ್ ಲಾಲಸಾಬ್ ಬಾಗೇವಾಡಿ, ಪರಶುರಾಮ ನೀಲನಾಯಕ, ಬಾಬುಷಾ ರೊಳ್ಳಿ, ಪ್ರಶಾಂತ ರಾವ್ ನಾಮಪತ್ರ ಸಲ್ಲಿಸಿದ್ದಾರೆ.

ಗೌರವ್ ಗೊಗೊಯ್ ನಾಮಪತ್ರ ಸಲ್ಲಿಕೆ

ಗುವಾಹಟಿ (ಪಿಟಿಐ): ಅಸ್ಸಾಂ ವಿಧಾನಸಭಾ ಚುನಾವಣೆಗೆ ನಾಮಪತ್ರ ಸಲ್ಲಿಕೆಯ ಕೊನೆ ದಿನದಂದು ಸಚಿವರು, ಮಾಜಿ ಸಂಸದರು ಸೇರಿದಂತೆ ಎಲ್ಲ ರಾಜಕೀಯ ಪಕ್ಷಗಳ ಪ್ರಮುಖ ಮುಖಂಡರು ತಮ್ಮ ಉಮೇದುವಾರಿಕೆ-ಯನ್ನು ಸೋಮವಾರ ಸಲ್ಲಿಸಿದರು.

ಜೊರ್ಹಾಟ್ ವಿಧಾನಸಭಾ ಕ್ಷೇತ್ರದಿಂದ ಲೋಕಸಭೆಯ ವಿರೋಧ ಪಕ್ಷದ ಉಪನಾಯಕ ಗೌರವ್ ಗೊಗೊಯ್ ನಾಮಪತ್ರ ಸಲ್ಲಿಸಿದರು.

ಉಪ ಚುನಾವಣೆ: ರಂಗೇರಿದ ಕಣ

ಉಪ ಚುನಾವಣೆ ನಡೆಯುತ್ತಿರುವ ದಾವಣಗೆರೆ ದಕ್ಷಿಣ, ಬಾಗಲಕೋಟೆ ಕ್ಷೇತ್ರದಲ್ಲಿ ಸೋಮವಾರ ಪ್ರಮುಖಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸಿದ್ದು, ಚುನಾವಣೆ ಕಣ ರಂಗೇರಿದೆ. ಪಕ್ಷಗಳ ಮುಖಂಡರು ಪರಸ್ಪರರ ವಿರುದ್ಧ ವಾಗ್ದಾಳಿ ನಡೆಸುವ ಮೂಲಕ ಪ್ರಚಾರ ಕಾರ್ಯಕ್ಕೆ ಚಾಲನೆ ನೀಡಿದ್ದಾರೆ

ಹಣಕ್ಕೆ ಮರುಳಾಗಬೇಡಿ: ವಿಜಯೇಂದ್ರ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ ಸಚಿವ ಸಂಪುಟದ ಸದಸ್ಯರೆಲ್ಲ ಇಲ್ಲಿಯೇ ಇರುತ್ತಾರೆ. ಗೋಣಿಚೀಲದಲ್ಲಿ ಹಣ ತರುತ್ತಾರೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಬಾಗಲಕೋಟೆ ಉಪಚುನಾವಣೆಗೆ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಅವರು ಸೋಮವಾರ ನಾಮಪತ್ರ ಸಲ್ಲಿಸಿದ ಬಳಿಕ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು. 'ಈ ಹಿಂದೆ ಶಿರಾ, ಕೆ.ಆರ್.ಪೇಟೆ ಉಪಚುನಾವಣೆಯಲ್ಲಿ ಕಾಂಗ್ರೆಸ್ ಮುಖಂಡರು ಮಾಡಿದ ತಂತ್ರ, ಕುತಂತ್ರ ನೋಡಿದ್ದೇನೆ. ವಾಲ್ಮೀಕಿ ಅಭಿವೃದ್ಧಿ ನಿಗಮ, ಎಸ್‌ಸಿಪಿಟಿಎಸ್‌ಪಿ ಲೂಟಿ ಮಾಡಿದ ಹಣ ತರುತ್ತಾರೆ. ಅದಕ್ಕೆ ಮರುಳಾಗಬೇಡಿ' ಎಂದರು.

'ಇದು ಭ್ರಷ್ಟ ಸರ್ಕಾರ. ರಾಜ್ಯ ಸರ್ಕಾರದ ಆಡಳಿತದಿಂದ ಜನ ಬೇಸತ್ತಿದ್ದು ಬಿಜೆಪಿ ಬೆಂಬಲಿಸುವರು. 2028ರ ಚುನಾವಣೆಗೆ ಈ ಉಪಚುನಾವಣೆ ಫಲಿತಾಂಶಗಳು ದಿಕ್ಸೂಚಿಯಾಗಲಿವೆ' ಎಂದರು.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮಾತನಾಡಿ, 'ಬಾಗಲಕೋಟೆಯಲ್ಲಿ ಮಗ, ದಾವಣಗೆರೆಯಲ್ಲಿ ಮೊಮ್ಮಗ ಮನೆಗೆ ಹೋಗಲಿದ್ದಾರೆ. ಪಕ್ಷದ ನಾಯಕರೆಲ್ಲ ಈ ಬಾರಿ ಒಗ್ಗಟ್ಟಿನಿಂದ ಗೆಲುವು ಸಾಧಿಸಲಿದ್ದೇವೆ' ಎಂದರು.

ಇದಕ್ಕೂ ಮೊದಲು ಬೃಹತ್ ಮೆರವಣಿಗೆ ನಡೆಯಿತು. ಅಭ್ಯರ್ಥಿ ವೀರಣ್ಣ ಚರಂತಿಮಠ ಅವರೊಂದಿಗೆ ಬಿ.ವೈ.ವಿಜಯೇಂದ್ರ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಸದರಾದ ಜಗದೀಶ ಶೆಟ್ಟರ್, ಪಿ.ಸಿ. ಗದ್ದಿಗೌಡರ, ಗೋವಿಂದ ಕಾರಜೋಳ ಮತ್ತಿತರರು ಪಾಲ್ಗೊಂಡಿದ್ದರು.

ಪ್ರಜಾಮತ
ಜನತಂತ್ರದ ಹಬ್ಬ
ವಿಧಾನಸಭಾ ಉಪ ಚುನಾವಣೆ - 2026

ಬಂಡಾಯ ಅಭ್ಯರ್ಥಿ ಸಾದಿಕ್ ಅಖಾಡಕ್ಕೆ

ದಾವಣಗೆರೆ: ದಕ್ಷಿಣ ಕ್ಷೇತ್ರದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಟಿಕೆಟ್ ಕೈತಪ್ಪಿರುವುದರಿಂದ ಬೇಸರಗೊಂಡಿರುವ ಸಾದಿಕ್ ಪೈಲ್ವಾನ್, ಬಂಡಾಯ ಅಭ್ಯರ್ಥಿಯಾಗಿ ಸೋಮವಾರ ಉಮೇದುವಾರಿಕೆ ಸಲ್ಲಿಸಿದರು.

'ಯಾವುದೇ ಒತ್ತಡಕ್ಕೆ ಮಣಿಯುವುದಿಲ್ಲ ಕಣದಿಂದ ಯಾವುದೇ ಕಾರಣಕ್ಕೂ ಹಿಂದೆ ಸರಿಯುವುದಿಲ್ಲ' ಎಂದರು.

'ಅಪಪ್ರಚಾರಕ್ಕೆ ಬಿಜೆಪಿ ನಿಸ್ಸೀಮ'

ಬಾಗಲಕೋಟೆ: 'ಸುಳ್ಳೇ ಬಿಜೆಪಿಯವರ ಮನೆ ದೇವರು. ಅವರೆಲ್ಲ ಬುರುಡೆ ದಾಸರು. ಅಪಪ್ರಚಾರ ಮಾಡುವುದರಲ್ಲಿ ನಿಸ್ಸೀಮರು. 2018ರ ಪ್ರಣಾಳಿಕೆಯಲ್ಲಿ ನೀಡಿದ 600ರಲ್ಲಿ ಶೇ 10ರಷ್ಟು ಭರವಸೆಯನ್ನು ಅವರು ಈಡೇರಿಸಲಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ವಾಗ್ದಾಳಿ ನಡೆಸಿದರು.

ಬಾಗಲಕೋಟೆ ಕ್ಷೇತ್ರದ ಉಪಚುನಾವಣೆಗೆ ಸೋಮವಾರ ಪಕ್ಷದ ಅಭ್ಯರ್ಥಿ ಉಮೇಶ ಮೇಟಿ ಅವರ ನಾಮಪತ್ರ ಸಲ್ಲಿಸಿದ ಬಳಿಕ ನಡೆದ ಬಹಿರಂಗ ಸಭೆಯಲ್ಲಿ ಅವರು ಮಾತನಾಡಿದರು.

'ತಬ್ಬಲಿ ಮಗ ಉಮೇಶ ಮೇಟಿ ಅವರನ್ನು ನಿಮ್ಮ ಜೋಳಿಗೆಗೆ ಹಾಕಿದ್ದೇವೆ. ಅವರ ಗೆಲುವು ನಿಮ್ಮ ಜವಾಬ್ದಾರಿ' ಎಂದರು. 'ಬಿಜೆಪಿಯವರು ಹಿಂದೂಗಳ ವಾರಸುದಾರರು ಎನ್ನುತ್ತಾರೆ. ನಾವು, ಮೇಟಿ ಹಿಂದೂಗಳಲ್ಲವಾ? ಬಿಜೆಪಿಯವರು ತೋರಿಕೆಗೆ ಮಾತ್ರ ಹೇಳಿಕೆ ನೀಡುತ್ತಾರೆ' ಎಂದು ವಾಗ್ದಾಳಿ ನಡೆಸಿದರು.

'ಮಹಿಳೆಯರಿಗೆ, ದಲಿತರಿಗೆ, ಅಲ್ಪ ಸಂಖ್ಯಾತರಿಗೆ ಶಕ್ತಿ ತುಂಬುವ ಕೆಲಸ ಮಾಡಿದ್ದೇವೆ. ಬಿಜೆಪಿಯವರು ಗ್ಯಾರಂಟಿ ಲಾಭ ಪಡೆಯುತ್ತಿಲ್ಲವೇ? ಎಲ್ಲರಿಗೂ ಸಾಮಾಜಿಕ ನ್ಯಾಯಒದಗಿಸಿರುವುದು ಕಾಂಗ್ರೆಸ್ ಮಾತ್ರ' ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮಾತನಾಡಿ, 'ಇದು ಧರ್ಮ, ಅಧರ್ಮ ಹಾಗೂ ಸತ್ಯ, ಸುಳ್ಳಿನ ನಡುವೆ ನಡೆಯುವ ಚುನಾವಣೆ. ಬಿಜೆಪಿಯವರದ್ದು ಬರೀ ಸುಳ್ಳು, ನಾವು ನುಡಿದಂತೆ ನಡೆದಿದ್ದೇವೆ' ಎಂದರು.

ಸಚಿವ ಎಂ.ಬಿ. ಪಾಟೀಲ ಮಾತನಾಡಿ, ಗ್ಯಾರಂಟಿ ಯೋಜನೆಗಳ ಮೂಲಕ ನುಡಿದಂತೆ ನಡೆದಿದ್ದೇವೆ. ಮೇಟಿ ಅವರ ಪುತ್ರನಿಗೆ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಸಚಿವರಾದ ಸತೀಶ ಜಾರಕಿಹೊಳಿ, ಶಿವಾನಂದ ಪಾಟೀಲ, ಆರ್.ಬಿ. ತಿಮ್ಮಾಪುರ ಇದ್ದರು. ಇದಕ್ಕೂ ಉಮೇಶ ಮೇಟಿ ಅವರ ನೇತೃತ್ವದಲ್ಲಿ ಕಾರ್ಯಕರ್ತರು ಮತ್ತು ಬೆಂಬಲಿಗರ ಮೆರವಣಿಗೆ ನಡೆಯಿತು.

> ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆ ಫಲಿತಾಂಶವು 2028ರ ವಿಧಾನಸಭೆಯ ಸಾರ್ವತ್ರಿಕ ಚುನಾವಣೆಗೆ ದಿಕ್ಸೂಚಿ ಆಗಲಿದೆ
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> ಪಕ್ಷಕ್ಕೆ ದುಡಿದವರು ಅವಕಾಶ ಕೇಳುವುದು ತಪ್ಪಲ್ಲ. ಗೆಲುವಿನ ಮಾನದಂಡ ಆಧರಿಸಿ ಟಿಕೆಟ್ ನೀಡಲಾಗಿದೆ. ಮುಸ್ಲಿಂ ನಾಯಕರ ಮನವೊಲಿಸುತ್ತೇವೆ
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

> ಎರಡೂ ಕ್ಷೇತ್ರಗಳಲ್ಲಿ ಬಿಜೆಪಿಗೆ ಪೂರಕ ವಾತಾವರಣವಿದೆ. ಈ ಸರ್ಕಾರದ ಬಗ್ಗೆ ಜನ ಬೇಸತ್ತಿದ್ದಾರೆ. 'ಕೈ' ಆಡಳಿತದ ಅಂತ್ಯಕ್ಕೆ ಈ ಚುನಾವಣೆ ನಾಂದಿ ಹಾಡಲಿದೆ
> **ಬಿ.ಎಸ್.ಯಡಿಯೂರಪ್ಪ,** ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ

- **ಉಮೇಶ ಮೇಟಿ**
- ವಿದ್ಯಾರ್ಹತೆ; **ಪಿಯುಸಿ**
- ವಾಹನ; **ಮಾರುತಿ ಗ್ರ್ಯಾಂಡ್ ವಿಟಾರಾ, ಸ್ವಿಫ್ಟ್ ಡಿಜೈರ್, ಮಾರುತಿ ಆಲ್ಟೊ, ಟಿವಿಎಸ್ ಜುಪಿಟರ್**
- ನಗದು; ₹**21.49** ಲಕ್ಷ
- ಚರ ಆಸ್ತಿ; ₹**85.03** ಲಕ್ಷ (200 ಗ್ರಾಂ ಬಂಗಾರ ಇತ್ಯಾದಿ)
- ಸ್ಥಿರ ಆಸ್ತಿ; ₹**5.30** ಕೋಟಿ (ನಿವೇಶನಗಳು, ಮನೆಗಳು, ಭೂಮಿ)
- ಸಾಲ; ₹**2.96** ಲಕ್ಷ
- **ಪತ್ನಿ; ರುಕ್ಮಿಣಿ**
- ನಗದು; ₹**25** ಸಾವಿರ
- ಚರ ಆಸ್ತಿ; ₹**60.86** ಲಕ್ಷ (400 ಗ್ರಾಂ ಬಂಗಾರ)
- ಸ್ಥಿರ ಆಸ್ತಿ; ₹**3.35** ಕೋಟಿ

ತಮಿಳುನಾಡು: ಬಿಜೆಪಿ 27, ಪಿಎಂಕೆ 18ರಲ್ಲಿ ಸ್ಪರ್ಧೆ

ಚೆನ್ನೈ (ಪಿಟಿಐ): ತಮಿಳುನಾಡು ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಎಐಎಡಿಎಂಕೆ ನೇತೃತ್ವದಲ್ಲಿ ಎನ್‌ಡಿಎ ಮೈತ್ರಿ ಕೂಟದ ಪ್ರಮುಖ ಪಕ್ಷಗಳ ಸೀಟು ಹಂಚಿಕೆ ಪ್ರಕ್ರಿಯೆ ಸೋಮವಾರ ಅಂತಿಮಗೊಂಡಿದೆ.

ಎಐಎಡಿಎಂಕೆಯು ಮಿತ್ರ ಪಕ್ಷಗಳಾದ ಬಿಜೆಪಿ, ಪಿಎಂಕೆ ಮತ್ತು ಎಎಂಎಂಕೆಗೆ ಒಟ್ಟು 56 ಕ್ಷೇತ್ರಗಳನ್ನು ನೀಡಿದೆ. ಇದರಲ್ಲಿ ಬಿಜೆಪಿ 27, ಪಿಎಂಕೆ 18 ಮತ್ತು ಎಎಂಎಂಕೆ ಪಕ್ಷಕ್ಕೆ 11 ಸ್ಥಾನಗಳು ದೊರೆತಿವೆ.

ಎನ್‌ಡಿಎ ಮೈತ್ರಿಕೂಟದಲ್ಲಿ ಕೇಂದ್ರದ ಮಾಜಿ ಸಚಿವ ಜಿ.ಕೆ.ವಾಸನ್ ಅವರ 'ತಮಿಳು ಮಾನಿಲ ಕಾಂಗ್ರೆಸ್' ಮತ್ತು ಐಜೆಕೆ ಪಕ್ಷಗಳೂ ಸೇರಿವೆ. ಎಐಎಡಿಎಂಕೆ ಎಷ್ಟು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ ಎಂಬ ಪ್ರಶ್ನೆಗೆ, ಮೈತ್ರಿ ಕೂಟದ ಇತರ ಪಕ್ಷಗಳ ಜತೆ ಮಾತುಕತೆ ನಡೆಯುತ್ತಿದೆ ಎಂದು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ ವಿವರಿಸಿದರು. ಕೇಂದ್ರ ಸಚಿವ ಪೀಯೂಷ್ ಗೋಯಲ್, ಪಿಎಂಕೆ ನಾಯಕ ಅನ್ಬುಮಣಿ ರಾಮದಾಸ್, ಎಎಂಎಂಕೆ ಮುಖ್ಯಸ್ಥ ಟಿ.ಟಿ.ವಿ ದಿನಕರನ್ ಇದ್ದರು.

ಸಿಪಿಎಂ–ಬಿಜೆಪಿ ಒಪ್ಪಂದ: ಪಿಣರಾಯಿ ನಿರಾಕರಣೆ

ತಿರುವಲ್ಲಾ (ಕೇರಳ) (ಪಿಟಿಐ): ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸಿಪಿಎಂ ಮತ್ತು ಬಿಜೆಪಿ ನಡುವೆ ಒಪ್ಪಂದ ನಡೆದಿದೆ ಎಂಬ ಕಾಂಗ್ರೆಸ್ ಆರೋಪವನ್ನು ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಳ್ಳಿಹಾಕಿದ್ದಾರೆ.

'2016ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆಯೇ ಒಳ ಒಪ್ಪಂದ ನಡೆದಿತ್ತು. ಇದೇ ಕಾರಣಕ್ಕೆ ನೇಮಂ ಕ್ಷೇತ್ರದಲ್ಲಿ ಬಿಜೆಪಿ ಗೆಲುವು ಸಾಧಿಸಿತ್ತು' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಆರೋಪಿಸಿದ್ದಾರೆ.

'ಬಿಜೆಪಿ ಜೊತೆ ರಹಸ್ಯ ಸಂಬಂಧ ಹೊಂದಿರುವ ಇತಿಹಾಸ ಕಾಂಗ್ರೆಸ್‌ಗೆ ಇದೆ. ನೇಮಂ ಕ್ಷೇತ್ರದಲ್ಲಿ ಕಾಂಗ್ರೆಸ್ ಮತಗಳು ಗಣನೀಯವಾಗಿ ಕುಸಿದವು. ಈ ಮೂಲಕ ವಿಧಾನಸಭಾ ಚುನಾವಣೆಯಲ್ಲಿ ತನ್ನ ಏಕೈಕ ಕ್ಷೇತ್ರದಲ್ಲಿ ಬಿಜೆಪಿ ಜಯ ಸಾಧಿಸಿತು' ಎಂದು ಆರೋಪಿಸಿದ್ದಾರೆ.

'ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧ ಎಡಪಕ್ಷಗಳು ಅದರಲ್ಲೂ ಮುಖ್ಯವಾಗಿ ಸಿಪಿಎಂ ಎಂದಿಗೂ ರಾಜಿ ಮಾಡಿಕೊಳ್ಳದ ನಿಲುವನ್ನು ತಳೆದಿವೆ. ಇದನ್ನು ಯಾರೂ ನಿರಾಕರಿಸಲು ಸಾಧ್ಯವಿಲ್ಲ. ಆದರೆ, ಈ ಹಿಂದೆ ಕಾಂಗ್ರೆಸ್ ಕೂಡ ಆರ್‌ಎಸ್‌ಎಸ್ ಜತೆ ಸಂಪರ್ಕ ಸಾಧಿಸಲು ಪ್ರಯತ್ನಿಸಿತ್ತು' ಎಂದಿದ್ದಾರೆ.

ದೆಹಲಿ ಸ್ಫೋಟ: ಜಮ್ಮು–ಕಾಶ್ಮೀರದಲ್ಲಿ ಶೋಧ

ನವದೆಹಲಿ (ಪಿಟಿಐ): ದೆಹಲಿ ಕೆಂಪುಕೋಟೆ ಬಳಿ ಸಂಭವಿಸಿದ್ದ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಜಮ್ಮು ಮತ್ತು ಕಾಶ್ಮೀರದ ಹಲವೆಡೆ ರಾಷ್ಟ್ರೀಯ ತನಿಖಾ ದಳ(ಎನ್‌ಐಎ) ಸೋಮವಾರ ಶೋಧ ನಡೆಸಿದೆ.

'ಕುಪ್ವಾಡ ಜಿಲ್ಲೆಯ ಹಂದ್ವಾಡ, ಬಾರಾಮುಲ್ಲಾ ಜಿಲ್ಲೆಯ ರಫಿಯಾಬಾದ್, ಕುಲಗಾಮ್ ಮತ್ತು ಶ್ರೀನಗರ ಜಿಲ್ಲೆ ಸೇರಿದಂತೆ 9 ಸ್ಥಳಗಳಲ್ಲಿ ಶೋಧ ನಡೆಸಲಾಗಿದೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಳೆದ ವರ್ಷ ನವೆಂಬರ್ 10ರಂದು ನಡೆದಿದ್ದ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿದಂತೆ ಈವರೆಗೆ 11 ಮಂದಿಯನ್ನು ಭದ್ರತಾ ಸಿಬ್ಬಂದಿ ಬಂಧಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ದುಃಖವೆಂಬುದು ಜಾಡ್ಯದಂತೆ. ಇದ್ದಾಗ ಅದರಿಂದ ಎಣಿಸಲಾಗದ ಕಷ್ಟ–ನಷ್ಟ; ಇಲ್ಲದಿರುವಾಗ ಅದು ಎಲ್ಲಿ ಬಂದು ತಟ್ಟುವುದೋ ಎಂಬ ಭೀತಿ. –ಎಸ್.ವಿ. ರಂಗಣ್ಣ

ಸಂಪಾದಕೀಯ

ಮರ್ಯಾದೆಗೇಡು ಹತ್ಯೆ ತಡೆ ಯತ್ನ 'ಇವ ನಮ್ಮವ' ಮಸೂದೆ ಸಕಾಲಿಕ

ಮರ್ಯಾದೆಯ ಹೆಸರಿನಲ್ಲಿ ನಡೆಯುವ ಮರ್ಯಾದೆಗೇಡು ಹತ್ಯೆಗಳು ಉತ್ತರ ಭಾರತಕ್ಕೆ ಸೀಮಿತವಾದ ವಿದ್ಯಮಾನಗಳು ಹಾಗೂ ಅವು ದಕ್ಷಿಣ ಭಾರತಕ್ಕೆ ಅಪರಿಚಿತವಾಗಿರುವ ಸಾಮಾಜಿಕ ಹಿಂದುಳಿದಿರುವಿಕೆಯ ಫಲಶ್ರುತಿ ಎಂದು ಇದುವರೆಗೂ ನಂಬಲಾಗಿತ್ತು. ಈ ನಂಬಿಕೆ ಸುಳ್ಳು ಎನ್ನುವುದನ್ನು ಗೃಹ ಸಚಿವ ಜಿ. ಪರಮೇಶ್ವರ ಅವರು ನೀಡಿರುವ ಅಂಕಿಅಂಶಗಳು ಸಾಬೀತುಪಡಿಸುವಂತಿವೆ. 2021ರಿಂದ 2025ರ ಅವಧಿಯಲ್ಲಿ ರಾಜ್ಯದಲ್ಲಿ ಕನಿಷ್ಠ 15 ಮರ್ಯಾದೆಗೇಡು ಹತ್ಯೆಗಳು ದಾಖಲಾಗಿವೆ ಎಂದು ಗೃಹ ಸಚಿವರು ತಿಳಿಸಿರುವುದು, ಜಾತಿ ಮತ್ತು ಪಿತೃಪ್ರಧಾನ ವ್ಯವಸ್ಥೆ ಎಲ್ಲೆಡೆಯೂ ಜಾಗೃತಗೊಂಡಿರುವುದಕ್ಕೆ ಉದಾಹರಣೆಯಂತಿದೆ. ದಲಿತ ಯುವಕನನ್ನು ಮದುವೆಯಾದ ಕಾರಣಕ್ಕೆ ಮಾನ್ಯ ಎನ್ನುವ 19 ವರ್ಷದ ಯುವತಿಯನ್ನು ಆಕೆಯ ತಂದೆ ಹಾಗೂ ಸಂಬಂಧಿಕರು ಕೊಲೆ ಮಾಡಿರುವ ಘಟನೆ ಇತ್ತೀಚೆಗಷ್ಟೇ ಹುಬ್ಬಳ್ಳಿ ತಾಲ್ಲೂಕಿನಲ್ಲಿ ನಡೆದಿದೆ. ಪ್ರಗತಿಪರ ಮನೋಧರ್ಮ ಹಾಗೂ ವಿಚಾರಗಳನ್ನು ಹೆಮ್ಮೆಯಿಂದ ಪ್ರತಿಪಾದಿಸುವ ನಾಡಿನಲ್ಲಿ ಇಂಥ ಅಪರಾಧ ಕೃತ್ಯಗಳು ನಡೆಯುತ್ತಿರುವುದು ನೈತಿಕ ಅಧಃಪತನದ ಸಂಕೇತವಾಗಿದೆ. ಸಮಾನತೆಯನ್ನು ಸಾರಿದ ಹಾಗೂ 'ಇವ ನಮ್ಮವ' ಎನ್ನುವ ಬಹುತ್ವದ ತಾತ್ತ್ವಿಕತೆಯನ್ನು ಪ್ರತಿಪಾದಿಸಿದ ಬಸವಣ್ಣನ ನಾಡಿನಲ್ಲಿ ಮರ್ಯಾದೆಯ ಹೆಸರಿನಲ್ಲಿ ಕೊಲೆಗಳು ನಡೆಯುತ್ತಿರುವುದು ದುರದೃಷ್ಟಕರ. ಈ ಘೋರ ವಾಸ್ತವವೇ, 'ವಿವಾಹದಲ್ಲಿ ಆಯ್ಕೆಯ ಸ್ವಾತಂತ್ರ್ಯ ಹಾಗೂ ಮರ್ಯಾದೆ ಮತ್ತು ಸಂಪ್ರದಾಯದ ಹೆಸರಿನಲ್ಲಿ ಅಪರಾಧಗಳ ಪ್ರತಿಬಂಧಕ ಮತ್ತು ನಿಷೇಧ (ಇವ ನಮ್ಮವ ಇವ ನಮ್ಮವ) ಮಸೂದೆ-2026' ರೂಪಿಸುವ ಅನಿವಾರ್ಯತೆಯನ್ನು ಸಿದ್ದರಾಮಯ್ಯ ಸರ್ಕಾರಕ್ಕೆ ಸೃಷ್ಟಿಸಿದೆ. ವಿವಾಹದ ಕೇಂದ್ರದಲ್ಲಿ ವೈಯಕ್ತಿಕ ಸ್ವಾಯತ್ತತೆಯನ್ನು ಗುರ್ತಿಸುವ ಮೂಲಕ, ಮರ್ಯಾದೆಯ ಹೆಸರಿನಲ್ಲಿ ನಡೆಯುವ ಅಪರಾಧಗಳನ್ನು ನಿರ್ದಿಷ್ಟವಾಗಿ ಉಲ್ಲೇಖಿಸುವ ಈ ಮಸೂದೆಯನ್ನು ಸರ್ಕಾರ ವಿಧಾನಸಭೆಯಲ್ಲಿ ಮಂಡಿಸಿದೆ. ಜಾತಿ ಮೀರಿ ಪ್ರೀತಿಸಿ ಮದುವೆಯಾದವರನ್ನು ಮರ್ಯಾದೆ ಹೆಸರಿನಲ್ಲಿ ಹಲ್ಲೆ, ಹತ್ಯೆ ಮಾಡುವ ಹಾಗೂ ಬಹಿಷ್ಕರಿಸುವವರನ್ನು ಕಠಿಣ ಶಿಕ್ಷೆಗೆ ಗುರಿಪಡಿಸುವ ಉದ್ದೇಶವನ್ನು ಮಸೂದೆ ಹೊಂದಿದೆ.



'ಇವ ನಮ್ಮವ, ಇವ ನಮ್ಮವ' ಮಸೂದೆ ಬಸವಣ್ಣ ಮತ್ತು ಕುವೆಂಪು ಅವರ ಆದರ್ಶಗಳನ್ನು ಎತ್ತಿಹಿಡಿಯುವ ಹಾಗೂ ಮರ್ಯಾದೆಗೇಡು ಹತ್ಯೆ ತಡೆಯುವ ನಿಟ್ಟಿನಲ್ಲಿ ಅಗತ್ಯವಾಗಿದ್ದ ಕ್ರಮ.

ರಾಜ್ಯದಲ್ಲಿ ಮಾತ್ರವಲ್ಲ, ದೇಶವ್ಯಾಪಿಯಾಗಿಯೂ ಈ ಸಮಸ್ಯೆ ಆಳವಾಗಿ ಬೇರೂರಿದೆ. ಮಾನವ ಹಕ್ಕುಗಳ ಸಂಘಟನೆಗಳು ಹಾಗೂ ನಾಗರಿಕ ಸಮಾಜದ ವರದಿಗಳಿಗಿಂತಲೂ ಅಧಿಕೃತ ಅಂಕಿಅಂಶಗಳು ಸಮಸ್ಯೆಯ ತೀವ್ರತೆಯನ್ನು ಕಡಿಮೆ ಅಂದಾಜು ಮಾಡುವಂತಿವೆ. ಮರ್ಯಾದೆಗೇಡು ಹತ್ಯೆಗಳಲ್ಲಿ ಉತ್ತರ ಪ್ರದೇಶ ಮೊದಲ ಸ್ಥಾನದಲ್ಲಿದೆ. ಮಧ್ಯಪ್ರದೇಶ, ಜಾರ್ಖಂಡ್, ಪಂಜಾಬ್ ಹಾಗೂ ಹರಿಯಾಣದಲ್ಲೂ ಗಣನೀಯ ಪ್ರಮಾಣದಲ್ಲಿ ಮರ್ಯಾದೆಗೇಡು ಹತ್ಯೆಗಳು ಸಂಭವಿಸುತ್ತಿವೆ. ಇಂಥ ಯಾವುದೇ ಘಟನೆ ತಮಿಳುನಾಡಿನಲ್ಲಿ ಸಂಭವಿಸಿಲ್ಲ ಎಂದು ಅಧಿಕೃತ ಮಾಹಿತಿ ಹೇಳುತ್ತಿದ್ದರೂ, ಐದು ವರ್ಷಗಳ ಅವಧಿಯಲ್ಲಿ ಇನ್ನೂರು ಮರ್ಯಾದೆಗೇಡು ಹತ್ಯೆಗಳು ಸಂಭವಿಸಿರುವುದನ್ನು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವ ಸಂಸ್ಥೆಗಳು ದಾಖಲಿಸಿವೆ. ನಿರಂತರವಾಗಿ ನಡೆಯುತ್ತಿರುವ ಈ ಹತ್ಯೆಗಳು, ಸಾಂವಿಧಾನಿಕ ಹಕ್ಕುಗಳು ಹಾಗೂ ಆಳವಾಗಿ ಬೇರು ಬಿಟ್ಟಿರುವ ಸಾಮಾಜಿಕ ಅನಿಷ್ಟ ಪದ್ಧತಿಗಳ ನಡುವಿನ ಘರ್ಷಣೆಯನ್ನು ಸಂಕೇತಿಸುವಂತಿವೆ.

ಮರ್ಯಾದೆಗೇಡು ಹತ್ಯೆಗಳನ್ನು ತಡೆಯುವ ನಿಜವಾದ ಸವಾಲು ಇರುವುದು ಹೊಸ ಕಾನೂನಿಗೆ ಸಂಬಂಧಿಸಿದಂತಲ್ಲ, ಅದರ ಅನುಷ್ಠಾನದಲ್ಲಿ. ತನಿಖೆಗಳು ದುರ್ಬಲವಾಗಿದ್ದಾಗ, ವಿಚಾರಣೆ ವಿಳಂಬವಾದಾಗ ಹಾಗೂ ಶಿಕ್ಷೆ ಖಚಿತ ಎನ್ನುವ ಪರಿಸ್ಥಿತಿ ಇಲ್ಲದೆ ಹೋದಾಗ ಕಾನೂನು ಎಷ್ಟೇ ಪ್ರಗತಿಪರವಾಗಿದ್ದರೂ ಅದು ಸಾಂಕೇತಿಕವಾಗಿಯಷ್ಟೇ ಉಳಿದುಬಿಡುತ್ತದೆ. ತ್ವರಿತ ಹಾಗೂ ನಿಶ್ಚಿತ ಶಿಕ್ಷೆಯೇ ಅಪರಾಧವನ್ನು ತಡೆಗಟ್ಟುವಲ್ಲಿ ವಿಶ್ವಾಸಾರ್ಹ ದಾರಿಯಾಗಿದೆ. ಕಾನೂನು ಅನುಷ್ಠಾನದ ಜೊತೆಗೆ ಕರ್ನಾಟಕ ತನ್ನದೇ ಆದ ಬೌದ್ಧಿಕ ಹಾಗೂ ನೈತಿಕ ಪರಂಪರೆ ಹೊಂದಿರುವುದನ್ನು ಗಮನಿಸಬೇಕು. ರಾಷ್ಟ್ರಕವಿ ಕುವೆಂಪು ಅವರ 'ವಿಶ್ವಮಾನವ ಸಂದೇಶ'ವು ಮತೀಯ ಹಾಗೂ ಧಾರ್ಮಿಕ ಸಂಕೇತಗಳಿಂದ ಹೊರಬಂದು, ಮಾನವೀಯ ಮೌಲ್ಯಗಳನ್ನು ಬುನಾದಿಯಾಗುಳ್ಳ ಸಮಾಜದ ಪರಿಕಲ್ಪನೆಯನ್ನು ಹೊಂದಿದೆ. ಮರ್ಯಾದೆಗೇಡು ಹತ್ಯೆಗಳಂಥ ಹಿಂಸಾತ್ಮಕ ಘಟನೆಗಳಿಗೆ 'ಸರ್ವ ಜನಾಂಗದ ಶಾಂತಿಯ ತೋಟ' ಎನ್ನುವ ಕುವೆಂಪು ಅವರ ಆದರ್ಶ ಪ್ರಬಲ ಪ್ರತಿರೋಧ ಆಗಬಲ್ಲದು. ಬಸವಣ್ಣ ಮತ್ತು ಕುವೆಂಪು ಅವರ ಸಮಾನತೆ–ಸೌಹಾರ್ದದ ಆದರ್ಶಗಳನ್ನು ಕರ್ನಾಟಕ ಅಳವಡಿಸಿಕೊಳ್ಳಬೇಕಾದರೆ, ಸಾಮಾಜಿಕ–ಸಾಂಪ್ರದಾಯಿಕ ಪೂರ್ವಗ್ರಹಗಳಿಂದ ಹೊರಬರುವುದು ಅಗತ್ಯ. ಕಾನೂನುಗಳು ಅಪರಾಧಿಗಳನ್ನು ಶಿಕ್ಷಿಸಬಹುದು. ಆದರೆ, ಸಮಾನತೆ, ಆತ್ಮಗೌರವ ಹಾಗೂ ಸಾಂವಿಧಾನಿಕತೆಯನ್ನು ಒಳಗೊಂಡ ಸಾಮಾಜಿಕ ಪರಿವರ್ತನೆಯಷ್ಟೇ ನೈಜ ಬದಲಾವಣೆಯನ್ನು ತರಬಲ್ಲದು.

ಚುರುಮುರಿ / ಚಾಟಿ

ಹಣದ ಮದ



ಜನ ದಂಗೆ ಎದ್ದಾಗ ಯಾವುದೇ ರಾಜ, ರಾಣಿ, ಯುವರಾಜ, ಯುವರಾಣಿಯರನ್ನು ಅವರು ಕಟ್ಟಿಕೊಂಡ ಕೋಟೆ ಕೊತ್ತಲಗಳು ಕಾಪಾಡಲಾರವು. ಕರ್ನಾಟಕದ ಹಣ ಮದದ ಪುಂಡ ಪಾಳೆಯಗಾರರು ಇದನ್ನು ನೆನಪಿಟ್ಟುಕೊಳ್ಳಬೇಕು.

ರವಿ ಕೃಷ್ಣಾರೆಡ್ಡಿ, ಗೌರವಾಧ್ಯಕ್ಷ, ಕೆಆರ್‌ಎಸ್ ರಾಜ್ಯ ಘಟಕ

ಕಿಡಿನುಡಿ



ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಕಲ್ಯಾಣಕ್ಕಾಗಿ ಮೀಸಲಿಟ್ಟಿರುವ ಅನುದಾನದಲ್ಲಿ ಬರೋಬ್ಬರಿ ₹14,200 ಕೋಟಿಯನ್ನು ರಾಜ್ಯ ಸರ್ಕಾರವು 'ಗ್ಯಾರಂಟಿ' ಯೋಜನೆಗಳಿಗೆ ಬಳಸಿಕೊಳ್ಳುತ್ತಿದೆ. ಇದು ದಲಿತ ಸಮುದಾಯಕ್ಕೆ ಮಾಡಿರುವ ಬಹುದೊಡ್ಡ ದ್ರೋಹ.

ಛಲವಾದಿ ನಾರಾಯಣಸ್ವಾಮಿ, ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 24-3-2001

• ಭವಿಷ್ಯ ನಿಧಿಗೆ ಶೇ 10.25 ಬಡ್ಡಿದರ ನೀಡಲು ಶಿಫಾರಸು

ನವದೆಹಲಿ, ಮಾರ್ಚ್ 23 (ಪಿಟಿಐ)– ಉದ್ಯೋಗಿಗಳ ಕಡ್ಡಾಯ ಭವಿಷ್ಯ ನಿಧಿಗೆ ನೀಡಲಾಗುವ ಬಡ್ಡಿಯಲ್ಲಿ ಶೇ 0.75ರಷ್ಟು ಕಡಿಮೆ ಮಾಡಿ, ಶೇ 10.25ರಷ್ಟು ಬಡ್ಡಿ ನೀಡಲು ಭವಿಷ್ಯ ನಿಧಿ ವಿಶ್ವಸ್ಥ ಮಂಡಳಿಯು ಶಿಫಾರಸು ಮಾಡಿದೆ.

ಕೇಂದ್ರ ಹಣಕಾಸು ಸಚಿವ ಯಶವಂತ ಸಿನ್ಹಾ ಅವರು ಪ್ರಸಕ್ತ ಸಾಲಿನ ಮುಂಗಡ ಪತ್ರದಲ್ಲಿ ಶೇ 1.5ರಷ್ಟು ಬಡ್ಡಿದರ ಕಡಿಮೆ ಮಾಡಲು ಪ್ರಸ್ತಾವ ಮಂಡಿಸಿದ್ದಾರೆ. ಭವಿಷ್ಯ ನಿಧಿಗೆ ಸರ್ಕಾರ ನೀಡಲು ಉದ್ದೇಶಿಸಿರುವ ಬಡ್ಡಿದರಕ್ಕಿಂತಲೂ ವಿಶ್ವಸ್ಥ ಮಂಡಳಿಯು ಹೆಚ್ಚಿನ ದರದಲ್ಲಿ ಬಡ್ಡಿ ನಿಗದಿ ಮಾಡಿದೆ.

• ಕೋಲಾರ: ಅಕ್ಕಿ ವ್ಯಾಪಾರಿಯ ಕತ್ತು ಕೊಯ್ದು ಹಣ ಅಪಹರಣ

ಕೋಲಾರ, ಮಾರ್ಚ್ 23– ಕೋಲಾರದ ಅಕ್ಕಿ ಸಗಟು ವ್ಯಾಪಾರಿ ಜನಾರ್ದನ ಬಾಬು ಅವರು ಮಾಲೂರಿಗೆ ಹೋಗಿ ಹಣ ಸಂಗ್ರಹಿಸಿ ಹಿಂದಿರುಗುತ್ತಿದ್ದಾಗ ಅಪರಿಚಿತ ದುಷ್ಕರ್ಮಿಗಳು ಅವರ ಕತ್ತು ಕೊಯ್ದು ಹಳ್ಳದಲ್ಲಿ ಬಿಸುಟು ಅವರ ಬಳಿ ಇದ್ದ ಸುಮಾರು ಒಂದು ಲಕ್ಷ ರೂಪಾಯಿಗೂ ಹೆಚ್ಚಿನ ನಗದು ಅಪಹರಿಸಿರುವ ಪ್ರಕರಣ ಲಕ್ಷ್ಮೀಪುರದ ಬಳಿ ಜರುಗಿದೆ.

75 ವರ್ಷಗಳ ಹಿಂದೆ

ಶನಿವಾರ, 24-3-1951

• ಜಪಾನಿನ 'ಬೆಂಕಿ ಮೊಸಳೆ' ಮೈಸೂರು ಮೃಗಾಲಯದಲ್ಲಿ

ಮೈಸೂರು, ಮಾರ್ಚ್ 23– ಭಾರತ ಕಾಣಿಕೆ ನೀಡಿದ್ದ ಆನೆ 'ಇಂದಿರಾ'ಗೆ ಬದಲಾಗಿ ಜಪಾನ್ ಕಳುಹಿಸಿದ್ದ ದೈತ್ಯ 'ಬೆಂಕಿ ಮೊಸಳೆ' ಮತ್ತಿತರ ಪ್ರಾಣಿಗಳು ಈಗ ಮೈಸೂರು ಮೃಗಾಲಯದಲ್ಲಿ ಸಾವಿರಾರು ಪ್ರೇಕ್ಷಕರನ್ನು ಆಕರ್ಷಿಸುತ್ತಿವೆ.

ಮೈಸೂರು ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರು ಮೃಗಾಲಯಕ್ಕೆ ಭೇಟಿಯಿತ್ತು ರಾಷ್ಟ್ರಕ್ಕೆ ನೀಡಿರುವ ಈ ಕಾಣಿಕೆಗಳು ಸರಿಯಾಗಿ ಇಡಲ್ಪಟ್ಟಿವೆಯೆ ಎಂಬುದನ್ನು ನೋಡಿದರು.

'ಬೆಂಕಿ ಮೊಸಳೆ' ಜೋಡಿ ಹಲ್ಲಿಯ ಜಾತೀಯ ಪ್ರಾಣಿಗಳು. ಇವು 18 ಡಿಗ್ರಿ ಸೆಂಟಿಗ್ರೇಡ್‌ಗಿಂತಲೂ ಕಡಿಮೆ ಇರುವ ತಣ್ಣೀರಿನಲ್ಲಿ ವಾಸಿಸುವುವು. ಮೈಸೂರು ಮೃಗಾಲಯದಲ್ಲಿ ಇಂಥ ಪರಿಸ್ಥಿತಿಯಲ್ಲಿ ಅವನ್ನು ಇಡಲಾಗಿದೆ. ಜೊತೆಯ ಮಂಡಾರಿಯಂ ಬಾತುಗಳಿಗೆ ಕಾಮನಬಿಲ್ಲಿನ ಪುಕ್ಕವಿದೆ. ಮರಿ ಕರಡಿಗಳಂಥ ರಾಕೂನ್‌ಗಳನ್ನು ಅನುಕೂಲಕರ ಸ್ಥಿತಿಯಲ್ಲಿ ಇಡಲಾಗಿದೆ.

ವಾಗ್ದಂಡನೆ ಯತ್ನ ಅರ್ಥಪೂರ್ಣ



ವಿಶ್ಲೇಷಣೆ

ಯೋಗೇಂದ್ರ ಯಾದವ್

ವಾಗ್ದಂಡನೆಗೆ ಒಳಗಾಗಲು ಮುಖ್ಯ ಚುನಾವಣಾ ಆಯುಕ್ತರು (ಸಿಇಸಿ) ಇನ್ನೇನನ್ನಾದರೂ ಮಾಡಬೇಕಿದೆಯೆ? ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರ ವಿರುದ್ಧ ವಾಗ್ದಂಡನೆ ನೋಟಿಸ್ ನೀಡಿದ ವಿರೋಧ ಪಕ್ಷಗಳ ಕ್ರಮವನ್ನು ಪತ್ರಿಕೆಯೊಂದರ ಸಂಪಾದಕೀಯದಲ್ಲಿ ಖಂಡಿಸಿರುವುದು ನನ್ನಲ್ಲಿ ಅಚ್ಚರಿ ಮೂಡಿಸಿದೆ.

ರಾಜಕೀಯಪೂರ್ವಗ್ರಹ, ಅತಿರೇಕದನಡವಳಿಕೆ, ಸಕಾಲಿಕವಲ್ಲದ ಮತ್ತು ಕಳಪೆಯಾದ 'ಎಸ್‌ಐಆರ್' ಮುಂತಾದ ಆರೋಪಗಳಲ್ಲಿ ಹುರುಳಿದೆ ಎಂಬುದನ್ನು ಒಪ್ಪಿಕೊಳ್ಳಲಾಗಿದೆ; ಹಾಗಿದ್ದರೂ ವಿರೋಧ ಪಕ್ಷಗಳು ಸಾಂಕೇತಿಕ ಸಂದೇಶವೊಂದನ್ನು ನೀಡುವುದಕ್ಕಾಗಿ ಕೊಟ್ಟ ಕೊನೆಯಲ್ಲಿ ಬಳಸಬೇಕಿದ್ದ ಅಸ್ತ್ರವನ್ನು ಆತುರಾತುರವಾಗಿ ಬಳಸುವ ಮೂಲಕ ಅತ್ಯುನ್ನತ ಸಾಂವಿಧಾನಿಕ ಸಂಸ್ಥೆಯೊಂದನ್ನು ಎದುರುಹಾಕಿಕೊಂಡು ತನ್ನನ್ನು ತಾನೇ ದುರ್ಬಲಪಡಿಸಿಕೊಂಡಿದೆ ಎಂದು ಬರೆಯಲಾಗಿದೆ. ನಾನು ಸಂವಿಧಾನವನ್ನು ಪರಿಶೀಲಿಸಿದೆ. ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಯೊಬ್ಬರನ್ನು ಪದಚ್ಯುತಗೊಳಿಸುವ ರೀತಿಯಲ್ಲಿ ಮಾತ್ರವೇ ಮುಖ್ಯ ಚುನಾವಣಾ ಆಯುಕ್ತರ ಪದಚ್ಯುತಿ ಸಾಧ್ಯ ಎಂದು ಸಂವಿಧಾನದ 324 (5)ನೇ ವಿಧಿಯಲ್ಲಿ ಸ್ಪಷ್ಟವಾಗಿ ವಿವರಿಸಲಾಗಿದೆ. ದುರ್ನಡತೆ ಅಥವಾ ಅದಕ್ಷತೆ ಸಾಬೀತಾಗಿರುವುದರ ಆಧಾರದಲ್ಲಿ ವಾಗ್ದಂಡನೆಯೇ ಅವರ ಪದಚ್ಯುತಿ ಪ್ರಕ್ರಿಯೆಯಾಗಿದೆ. ಅದೃಷ್ಟವಶಾತ್, ಪ್ರಸಿದ್ಧ ಪ್ರಕರಣವೊಂದರಲ್ಲಿ (ಅನೂಪ್ ಬರಮ್‌ವಾಲ್ ಮತ್ತು ಕೇಂದ್ರ ಸರ್ಕಾರ) ಚುನಾವಣಾ ಆಯುಕ್ತರ ನೇಮಕಾತಿ ಪ್ರಕ್ರಿಯೆಯನ್ನು ಸುಪ್ರೀಂ ಕೋರ್ಟ್ ಸ್ಪಷ್ಟವಾಗಿ ವಿವರಿಸಿದೆ. ಬಹುಮತದ ತೀರ್ಪನ್ನು ದಾಖಲಿಸಿರುವ ನ್ಯಾಯಮೂರ್ತಿ ಕೆ.ಎಂ. ಜೋಸೆಫ್ ಅವರು ಚುನಾವಣಾ ಆಯುಕ್ತರಿಂದ ಯಾವ ರೀತಿಯ ನಡವಳಿಕೆಯನ್ನು ನಿರೀಕ್ಷಿಸಲಾಗುತ್ತದೆ ಎಂಬುದನ್ನು ವಿವರಿಸಿದ್ದಾರೆ. ಈ ಮಾನದಂಡಗಳ ಮೂಲಕವೇ ಜ್ಞಾನೇಶ್ ಕುಮಾರ್ ಅವರನ್ನು ನಾವು ಅಳೆಯಬೇಕಿದೆ: 'ಪ್ರಾಮಾಣಿಕ ಮತ್ತು ಸ್ವತಂತ್ರವಾದ ವ್ಯಕ್ತಿಯಾಗಿದ್ದು, ಸಾರ್ವಜನಿಕರ ನಂಬಿಕೆಯನ್ನು ಗಳಿಸಿರಬೇಕು', 'ನಿಷ್ಪಕ್ಷಪಾತವಾಗಿ ನಡೆದುಕೊಳ್ಳುವ ಸಾಮರ್ಥ್ಯ ಹೊಂದಿರಬೇಕು', 'ಕಾರ್ಯಾಂಗದ ಪ್ರಭಾವಗಳನ್ನು ಮೀರಿ ನಿಲ್ಲುವವರಾಗಿರಬೇಕು', 'ಪಕ್ಷಪಾತ ಅಥವಾ ಭೀತಿ ಇಲ್ಲದೆ ಕೆಲಸ ಮಾಡುವವರಾಗಿರಬೇಕು' ಮತ್ತು 'ಯಾವುದೇ ರಾಜಕೀಯ ಒತ್ತಡಗಳನ್ನು ಮೀರಿ ನಿಲ್ಲುವ ವ್ಯಕ್ತಿತ್ವ ಮತ್ತು ಶಕ್ತಿಯನ್ನು ಹೊಂದಿರಬೇಕು'.

ಒಳ್ಳೆಯ ನಡವಳಿಕೆಯ ಜೊತೆಗೆ, ಚುನಾವಣಾ ಆಯುಕ್ತರನ್ನು ಹುದ್ದೆಯಿಂದ ಅನರ್ಹಗೊಳಿಸಲು ಕಾರಣವಾಗಬಹುದಾದ ನಕಾರಾತ್ಮಕ ಅಂಶಗಳನ್ನೂ ಗಣನೆಗೆ ತೆಗೆದುಕೊಳ್ಳಬೇಕು. ಅದಕ್ಕಾಗಿ ನಾನು, ನವೀನ್ ಚಾವ್ಲಾ ಅವರ ನೇಮಕದ ವಿರುದ್ಧ ರಾಷ್ಟ್ರಪತಿಯವರಿಗೆ ಬಿಜೆಪಿ ಸಲ್ಲಿಸಿದ್ದ ಮನವಿಯನ್ನು ಪರಿಶೀಲಿಸಿದೆ. ಮೊದಲಿಗೆ ಚುನಾವಣಾ ಆಯುಕ್ತರಾಗಿ ಮತ್ತು ನಂತರ ಮುಖ್ಯ ಚುನಾವಣಾ ಆಯುಕ್ತರಾಗಿ ನೇಮಕ ಮತ್ತು ಮುಂದುವರಿಕೆಗೆ ಇರುವ ಆಕ್ಷೇಪಗಳನ್ನು ಬಿಜೆಪಿ ವಿವರವಾಗಿ ಪ್ರತಿಪಾದಿಸಿತ್ತು. 2006ರ ಏಪ್ರಿಲ್ 8ರಂದು ಬಿಜೆಪಿ ಬರೆದ ಈ ಪತ್ರದ ಅಂಶಗಳನ್ನು ಗಮನಿಸೋಣ: 'ಇಲ್ಲಿ ಅವರ ಮುಂದುವರಿಕೆಗೆ ಇರುವ ವಾದ ಕಾನೂನುಬದ್ಧತೆಗೆ ಸಂಬಂಧಿಸಿದ್ದಲ್ಲ, ಬದಲಿಗೆ ಸರಿಯಾದ ನಡವಳಿಕೆಗೆ ಸಂಬಂಧಿಸಿದ್ದಾಗಿದೆ'. ಬಿಜೆಪಿ ಮುಖಂಡ ಜಸ್ವಂತ್ ಸಿಂಗ್ ಅವರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯಲ್ಲಿ 'ಚುನಾವಣಾ ಆಯುಕ್ತರಿಂದ ನಿರೀಕ್ಷಿಸಬಹುದಾದ ತಟಸ್ಥ ನಿಲುವು ಅವರಲ್ಲಿ ಇಲ್ಲ ಮತ್ತು ಅವರು ಪೂರ್ವಗ್ರಹ ಹೊಂದಿದ್ದಾರೆ ಎಂಬುದಕ್ಕೆ ಅಗತ್ಯ ಕಾರಣಗಳಿವೆ' ಎಂದು ವಾದಿಸಿದ್ದರು. ಅಂತಿಮವಾಗಿ, 2008ರಲ್ಲಿ ಆಗಿನ ಮುಖ್ಯ ಚುನಾವಣಾ ಆಯುಕ್ತ ಎನ್.ಗೋಪಾಲಸ್ವಾಮಿ ಅವರು ರಾಷ್ಟ್ರಪತಿಗೆ ಪತ್ರ ಬರೆದು ಚಾವ್ಲಾ ಅವರನ್ನು ಪದಚ್ಯುತ ಗೊಳಿಸುವಂತೆ ಕೋರುತ್ತಾರೆ; 'ಅವರು ರಾಜಕೀಯವಾಗಿ ತಟಸ್ಥ ಎಂಬುದರ ಕುರಿತು ಗಂಭೀರ ಸಂದೇಹಗಳಿವೆ' ಮತ್ತು ಅವರ ನಡವಳಿಕೆಯು 'ರಾಜಕೀಯ ಪಕ್ಷಪಾತಿ ಎಂಬ ಭಾವನೆ ಮೂಡಿಸುತ್ತದೆ' ಎಂದು ಪತ್ರದಲ್ಲಿ ವಾದಿಸಲಾಗಿತ್ತು. ಅಂತಿಮವಾಗಿ, ಚಾವ್ಲಾ ಅವರ ಪದಚ್ಯುತಿ ಆಗುವುದಿಲ್ಲ; ಆದರೆ, ಯಾವ ರೀತಿಯ ನಿಯಮಗಳನ್ನು ರೂಪಿಸಿಕೊಳ್ಳಬೇಕು ಎಂಬುದಕ್ಕೆ ಈ ಪ್ರಕರಣ ನಮಗೆ ನೆರವಾಗುತ್ತದೆ.

> ಶೋಷಣೆಗೆ ಒಳಗಾದ ಭಾರತೀಯರು ಸ್ವತಂತ್ರ ಭಾರತದಲ್ಲಿ ಹೊಂದಿದ್ದ ಏಕೈಕ ಪರಿಣಾಮಕಾರಿ ಹಕ್ಕಾಗಿದ್ದ ಮತದಾನದ ಹಕ್ಕನ್ನು ಹಲವರಿಂದ ಕಸಿದುಕೊಂಡಿರುವ ಕುಖ್ಯಾತಿ ಮುಖ್ಯ ಚುನಾವಣಾ ಆಯುಕ್ತರದು. ಅವರಿಗೆ ವಾಗ್ದಂಡನೆ ವಿಧಿಸುವ ಕ್ರಮ ಸಾಂಕೇತಿಕವೇ ಆಗಿದ್ದರೂ 'ಭಾರತೀಯ ಜನತೆ'ಗೆ ಎಸಗಲಾದ ಅನ್ಯಾಯವನ್ನು ಅದು ಗುರ್ತಿಸುತ್ತದೆ.

ಮುಖ್ಯ ಚುನಾವಣಾ ಆಯುಕ್ತರಾಗಿ ಜ್ಞಾನೇಶ್ ಕುಮಾರ್ ಅವರ ನಡವಳಿಕೆಯನ್ನು ಸಾಬೀತಾದ 'ದುರ್ನಡತೆ ಮತ್ತು ಅದಕ್ಷತೆ'ಯನ್ನು ಒಳಗೊಂಡ ನಿಯಮಗಳ ಆಧಾರದಲ್ಲಿ ತೀರ್ಮಾನಿಸಬೇಕಿದೆ. ಇಲ್ಲಿ ದುರ್ನಡತೆ ಎಂದರೆ, ಅವರು ಸಾರ್ವಜನಿಕವಾಗಿ ಹೇಗೆ ನಡೆದುಕೊಳ್ಳುತ್ತಾರೆ ಎಂಬುದಲ್ಲ. ರಾಜಕೀಯ ನಾಯಕರತ್ತ ಬೆರಳು ತೋರುವಿಕೆ, ಜನರೇ ಇಲ್ಲದಲ್ಲಿ ಕೈಬೀಸಿ ಶುಭಾಶಯ ಹೇಳುವಿಕೆ, ಮಾಧ್ಯಮಗೋಷ್ಠಿಯಲ್ಲಿ ರಾಜಕೀಯ ಭಾಷಣಗಳೆಲ್ಲವೂ ಹಾಸ್ಯಾಸ್ಪದ ಮತ್ತು ಅಪಮಾನಕರವಾಗಿದೆ. ಹೇಗೆಯೇ ನೋಡಿದರೂ ಈ ಆಡಂಬರವು ಅಸಾಂವಿಧಾನಿಕ ಅಲ್ಲದೇ ಇದ್ದರೂ ಹುದ್ದೆಗೆ ತಕ್ಕ ನಡವಳಿಕೆ ಅಲ್ಲ. ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ನೀಡುವುದರಿಂದ ತಪ್ಪಿಸಿಕೊಳ್ಳಲು ಅವರು ಕೊಟ್ಟಿದ್ದ 'ಬೆಹನ್–ಬೇಟಿ ಕಿ ಫೋಟೊ' ವಾದವು ಸಮರ್ಪಕವಾದ ವಾದ ಮುಂದಿಡುವಲ್ಲಿ ಅವರ ಅದಕ್ಷತೆಯನ್ನು ಸಾಬೀತು ಮಾಡುತ್ತದೆ. ಹಾಗಿದ್ದರೂ ಇದು ಸಾಂವಿಧಾನಿಕವಾಗಿ ವ್ಯಾಖ್ಯಾನಿಸಲಾದ 'ಅದಕ್ಷತೆ'ಯ ವ್ಯಾಪ್ತಿಗೆ ಬರಲಿಕ್ಕಿಲ್ಲ. ಏನೇ ಆದರೂ ಸಣ್ಣ ಜನರು ದೊಡ್ಡ ಹುದ್ದೆಗೆ ಹೋಗುವುದನ್ನು ನಿಷೇಧಿಸಿದರೆ, ನಮ್ಮ ಬಹುಪಾಲು ಸಾಂವಿಧಾನಿಕ ಹುದ್ದೆಗಳು ಖಾಲಿ ಉಳಿಯುತ್ತವೆ.

ಜ್ಞಾನೇಶ್ ಕುಮಾರ್ ಅವರ 'ದುರ್ನಡತೆ'ಯ ಹೆಚ್ಚು ಗಂಭೀರವಾದ ಅಂಶವೆಂದರೆ, ಎದ್ದು ಕಾಣುವ ರಾಜಕೀಯ ಪಕ್ಷಪಾತ. ಈಗ ಕುಪ್ರಸಿದ್ಧವಾಗಿರುವ 'ಮತಕಳವು' ವಿಚಾರಕ್ಕೆ ಸಂಬಂಧಿಸಿ ಅವರು ನಡೆಸಿದ ಮಾಧ್ಯಮಗೋಷ್ಠಿಯನ್ನು ನೆನಪಿಸಿಕೊಳ್ಳಿ; ಆ ಮಾಧ್ಯಮಗೋಷ್ಠಿಯಲ್ಲಿ ಅವರು, 'ಪ್ರಮಾಣಪತ್ರ ಸಲ್ಲಿಸಿ ಇಲ್ಲವೇ ದೇಶದ ಕ್ಷಮೆಯಾಚಿಸಿ' ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕನನ್ನು ಆಗ್ರಹಿಸಿದ್ದರು. ಇದಾದ ಬಳಿಕ ಅವರಿಗೆ ಉಳಿದಿರುವುದು ಬಿಜೆಪಿ ಟಿಕೆಟ್ ಪಡೆದುಕೊಂಡು ಸ್ವತಃ ಚುನಾವಣೆಗೆ ಸ್ಪರ್ಧಿಸುವುದು. ಇದು ಇಂತಹ ಏಕೈಕ ಘಟನೆಯೇನೂ ಅಲ್ಲ. ಇಂತಹ ಸಂಘರ್ಷಾತ್ಮಕ ಮುಖಾಮುಖಿಗಳು ಅಸಂಖ್ಯ ಮತ್ತು ಟಿಎಂಸಿ ಮುಖಂಡರ ಜೊತೆಗಿನ ಮುಖಾಮುಖಿ ತೀರಾ ಇತ್ತೀಚಿನದ್ದು. ಪಶ್ಚಿಮ ಬಂಗಾಳದಲ್ಲಿ ನಡೆದ ಎಸ್‌ಐಆರ್, ಬಿಜೆಪಿಗೆ ಅನುಕೂಲಕರವಲ್ಲದ ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ಸಾಮೂಹಿಕವಾಗಿ ತೆಗೆದುಹಾಕುವ ಚುನಾವಣಾ ಆಯೋಗದ ಹತಾಶ ಯತ್ನವಾಗಿದೆ. ಪಶ್ಚಿಮ ಬಂಗಾಳದ ಮುಖ್ಯ ಕಾರ್ಯದರ್ಶಿ ಮತ್ತು ಗೃಹ ಕಾರ್ಯದರ್ಶಿಯವರನ್ನು ಬದಲಾಯಿಸುವ ನಿರ್ಧಾರವು ಬಿಜೆಪಿ ಜೊತೆಗಿನ ಜುಗಲ್‌ಬಂದಿಯನ್ನು ತೋರಿಸುತ್ತದೆ. ಪ್ರಧಾನಿಗೆ ವಿರೋಧಕ್ಕಿಂತಲೂ ಹೆಚ್ಚಾಗಿ ದೇಶದ ವಿರೋಧ ಪಕ್ಷಗಳನ್ನು ಒಟ್ಟಿಗೆ ಸೇರಿಸುವ ಒಂದು ವಿಚಾರ ಇದ್ದರೆ ಅದು ಮುಖ್ಯ ಚುನಾವಣಾ ಆಯುಕ್ತರ ಮೇಲಿನ ನಂಬಿಕೆಯ ಕೊರತೆ. ಚುನಾವಣಾ ಆಯೋಗದ ಮೇಲೆ ಜನರು ಇರಿಸಿದ್ದ ವಿಶ್ವಾಸವು ವರ್ಷದಿಂದ ವರ್ಷಕ್ಕೆ ಕುಸಿಯುತ್ತಲೇ ಇದೆ. ಒಂದು ಕಾಲದಲ್ಲಿ ಪಾವಿತ್ರ್ಯ ಹೊಂದಿದ್ದ ಸಂಸ್ಥೆಯಾಗಿದ್ದ ಚುನಾವಣಾ ಆಯೋಗವನ್ನು ಹಾಸ್ಯಾಸ್ಪದಗೊಳಿಸಿದ ಕೀರ್ತಿಯು ಜ್ಞಾನೇಶ್ ಕುಮಾರ್ ಅವರಿಗೇ ಸಲ್ಲಬೇಕು. ಔಚಿತ್ಯ ಮತ್ತು 'ತಟಸ್ಥವಾಗಿರುವಿಕೆ'ಯು ಮಾನದಂಡವಾಗಿದ್ದರೆ ಮುಖ್ಯ ಚುನಾವಣಾ ಆಯುಕ್ತರ ಹುದ್ದೆಯಲ್ಲಿ ಜ್ಞಾನೇಶ್ ಕುಮಾರ್ ಅವರು ಇರುವುದಕ್ಕೆ ಸಾಧ್ಯವೇ ಇಲ್ಲ. ಯಾವುದೇ ಸಕ್ರಿಯ ಪ್ರಜಾಪ್ರಭುತ್ವದಲ್ಲಿ, ಸಾರ್ವಜನಿಕವಾಗಿ ಆಗಿರುವ ಅವಮಾನದಿಂದಾಗಿ ಜ್ಞಾನೇಶ್ ಕುಮಾರ್ ಅವರಂಥವರು ಈ ಹೊತ್ತಿಗೆ ರಾಜೀನಾಮೆ ಕೊಟ್ಟು ಆಗಬೇಕಿತ್ತು.

ಔಚಿತ್ಯಹೀನತೆ, ಪಕ್ಷಪಾತ ಮತ್ತು ಅದಕ್ಷತೆಯಂತಹ ಅತ್ಯಂತ ಕೆಟ್ಟ ವಿಚಾರಗಳು ಕೂಡ ತಾವೇ ರಕ್ಷಿಸಬೇಕಿದ್ದ ಪ್ರಜಾಪ್ರಭುತ್ವಕ್ಕೆ ಜ್ಞಾನೇಶ್ ಕುಮಾರ್ ಕೊಟ್ಟ ಅತಿದೊಡ್ಡ ಏಟಾದ 'ಎಸ್‌ಐಆರ್'ನ ಮುಂದೆ ಮಸುಕಾಗಿಬಿಡುತ್ತವೆ. ಎಸ್‌ಐಆರ್ ಹೆಸರಿನಲ್ಲಿ ಮಾಡಿದ ರೀತಿಯಲ್ಲಿ ಮತದಾರರ ಪಟ್ಟಿಯನ್ನು ಸಂಪೂರ್ಣವಾಗಿ ಬದಲಾಯಿಸುವ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆಯೇ ಎಂಬುದರ ಕಾನೂನು–ತಾಂತ್ರಿಕ ಆಯಾಮ ಕುರಿತ ತೀರ್ಪನ್ನು ಸುಪ್ರೀಂ ಕೋರ್ಟ್ ಇನ್ನಷ್ಟೇ ನೀಡಬೇಕಿದೆ. ನ್ಯಾಯಾಲಯದ ತೀರ್ಪು ಏನೇ ಆಗಿರಲಿ, ಈ ಇಡೀ ಪ್ರಕ್ರಿಯೆಯ ಪರಿಣಾಮ ಏನು ಎಂಬುದು ನಮ್ಮ ಕಣ್ಣ ಮುಂದೆಯೇ ಇದೆ. ಸುಮಾರು ಐದು ಕೋಟಿ ಮತದಾರರ ಹೆಸರನ್ನು ಮತದಾರರ ಪಟ್ಟಿಯಿಂದ ಈಗಾಗಲೇ ತೆಗೆದುಹಾಕಲಾಗಿದೆ. ದೇಶದ ಮೂರನೇ ಒಂದರಷ್ಟು ಪ್ರದೇಶದಲ್ಲಿ ಈ ಪ್ರಕ್ರಿಯೆ ಇನ್ನಷ್ಟೇ ನಡೆಯಬೇಕಿದೆ. ಪ್ರತಿಯೊಂದು ರಾಜ್ಯದಲ್ಲಿಯೂ ರಾಜ್ಯದ ವಯಸ್ಕ ಜನಸಂಖ್ಯೆಗೆ ಹೋಲಿಸಿದರೆ ಎಸ್‌ಐಆರ್ ಬಳಿಕ ಮತದಾರರ ಪಟ್ಟಿಯು ಕಿರಿದಾಗಿದೆ. ಎಸ್‌ಐಆರ್‌ನಿಂದಾಗಿ ಮತದಾರರ ಪಟ್ಟಿಯಲ್ಲಿ ಸೇರಿರುವ ಮಹಿಳಾ ಮತದಾರರ ಪ್ರಮಾಣದಲ್ಲಿ ಕುಸಿತವಾಗಿದೆ.

ಶೋಷಣೆಗೆ ಒಳಗಾದ ಭಾರತೀಯರು– ಬಡವರು, ವಲಸಿಗರು, ಬುಡಕಟ್ಟು ಜನರು– ಸ್ವತಂತ್ರ ಭಾರತದಲ್ಲಿ ಹೊಂದಿದ್ದ ಪರಿಣಾಮಕಾರಿಯಾಗಿದ್ದ ಏಕೈಕ ಹಕ್ಕಾಗಿದ್ದ ಮತದಾನದ ಹಕ್ಕನ್ನು ಕಸಿದುಕೊಳ್ಳಲಾಗಿದೆ. ಯಾವುದೇ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅತ್ಯಂತ ದೊಡ್ಡದಾದ ಮತದಾನದ ಹಕ್ಕು ನಿರಾಕರಣೆಯ ಪ್ರಕ್ರಿಯೆಯನ್ನು ಯಾವ ಪೂರ್ವನಿದರ್ಶನ, ಸಮಾಲೋಚನೆ ಅಥವಾ ಸಿದ್ಧತೆ ಇಲ್ಲದೆ ಜ್ಞಾನೇಶ್ ಕುಮಾರ್ ಅವರು ಏಕಾಂಗಿಯಾಗಿ ನಡೆಸಿದ್ದಾರೆ. ಸಾರ್ವತ್ರಿಕ ಮತದಾನದ ಹಕ್ಕಿನ ಮೇಲಿನ ಈ ಪ್ರಹಾರವು ಕಪ್ಪು ವರ್ಣೀಯರಿಗೆ ಮತದಾನದ ಹಕ್ಕು ನಿರಾಕರಿಸಿದ ಅಮೆರಿಕದ ಜಿಮ್ ಕ್ರೋ ಕಾನೂನನ್ನೂ ನಾಚಿಸುತ್ತದೆ. ಜ್ಞಾನೇಶ್ ಕುಮಾರ್ ಅವರಿಗೆ ವಾಗ್ದಂಡನೆ ವಿಧಿಸುವ ಕ್ರಮವು ಅದು ಸಾಂಕೇತಿಕವೇ ಆಗಿದ್ದರೂ 'ಭಾರತೀಯ ಜನತೆ'ಯ ಮೇಲೆ ಎಸಗಲಾದ ಅಪರಾಧವನ್ನು ಗುರ್ತಿಸುತ್ತದೆ ಮತ್ತು ಪರಿಹರಿಸಲು ಪ್ರಯತ್ನಿಸುತ್ತದೆ.



ವಾಚಕರ ವಾಣಿ

ಮುಸ್ಲಿಂ ನಾಯಕತ್ವದ ಅವಜ್ಞೆ ಸರಿಯೆ?

ಪ್ರಜಾಪ್ರಭುತ್ವದಲ್ಲಿ ನೈಜ ಪ್ರತಿನಿಧಿತ್ವವು ಪ್ರತ್ಯಕ್ಷ ಚುನಾವಣೆಯ ಮೂಲಕವೇ ಬರಬೇಕು. ಅಲ್ಪಸಂಖ್ಯಾತರು, ವಿಶೇಷವಾಗಿ ಮುಸ್ಲಿಮರಿಗೆ ನೇರ ಚುನಾವಣೆಯಲ್ಲಿ ಅವಕಾಶ ಕಡಿಮೆ ಮಾಡಲಾಗುತ್ತಿದೆ. ರಾಜ್ಯಸಭೆಗೆ ನೇಮಕದಂತಹ ಪರೋಕ್ಷ ಮಾರ್ಗದಲ್ಲಿ ಅವಕಾಶ ನೀಡುವುದು ಅವರ ರಾಜಕೀಯ ಬೆಳವಣಿಗೆಯನ್ನು ಸೀಮಿತಗೊಳಿಸುತ್ತದೆ. ದಾವಣಗೆರೆ, ಬಾಗಲಕೋಟೆ ಉಪಚುನಾವಣೆಯು ಇದಕ್ಕೆ ಕನ್ನಡಿ ಹಿಡಿದಿವೆ. ಮುಸ್ಲಿಂ ಸಮುದಾಯದಿಂದ ಟಿಕೆಟ್‌ಗಾಗಿ ಬೇಡಿಕೆ ಇದ್ದರೂ ಪರಿಗಣಿಸಿಲ್ಲ. ಎಲ್ಲಾ ಪಕ್ಷಗಳು ನೈಜ ಸಮಾನತೆ ತೋರಿಸಬೇಕಾದರೆ ಗೆಲ್ಲುವ ಕ್ಷೇತ್ರಗಳಲ್ಲಿ ಸಮಾನ ಅವಕಾಶ ನೀಡಬೇಕಿದೆ. ಅಲ್ಪಸಂಖ್ಯಾತರನ್ನು ನಿರ್ಲಕ್ಷಿಸಿದರೆ ಆ ಸಮುದಾಯದಲ್ಲಿ ಸಮರ್ಥ ರಾಜಕೀಯ ನಾಯಕರು ಬೆಳೆಯುವುದು ಹೇಗೆ?

ಗುರಣ್ಣಗೌಡ ಪಾಟೀಲ, ಝಳಕಿ

ಸರ್ಕಾರಿ ಶಾಲೆಗಳ ವಿಲೀನ ಅವೈಜ್ಞಾನಿಕ

ಮಕ್ಕಳ ಸಂಖ್ಯೆ ಕಡಿಮೆ ಇರುವ ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳೊಂದಿಗೆ ವಿಲೀನಗೊಳಿಸುವುದು ಅವೈಜ್ಞಾನಿಕ. ಇದು ಪರೋಕ್ಷವಾಗಿ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳನ್ನು ಮುಚ್ಚುವ ಹುನ್ನಾರ. ಬಡ ಮತ್ತು ಶೋಷಿತ ವರ್ಗದ ಮಕ್ಕಳಿಗೆ ಮನೆ ಬಾಗಿಲಲ್ಲಿ ಸಿಗುತ್ತಿದ್ದ ಶಿಕ್ಷಣವನ್ನು ಕಸಿದುಕೊಂಡು ದೂರದ ಶಾಲೆಗಳಿಗೆ ಹೋಗುವಂತೆ ಮಾಡುವುದು ಮಕ್ಕಳ ಹಕ್ಕುಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಮಕ್ಕಳಿಗೆ ಸಾರಿಗೆ ವ್ಯವಸ್ಥೆ ಮಾಡುವುದಾಗಿ ಸರ್ಕಾರ ಹೇಳಿದೆ. ಆದರೆ, ಗ್ರಾಮೀಣ ರಸ್ತೆಗಳು ಉತ್ತಮವಾಗಿಲ್ಲ. ಹೆಣ್ಣುಮಕ್ಕಳನ್ನು ದೂರದ ಊರುಗಳಿಗೆ ಕಳುಹಿಸಲು ಪೋಷಕರು ಇಷ್ಟಪಡಲಾರರು. ಇದರಿಂದ ಶಾಲೆ ಬಿಡುವ ಮಕ್ಕಳ ಸಂಖ್ಯೆ ಹೆಚ್ಚಲಿದೆ. ಶಾಲೆ ಮುಚ್ಚುವ ಬದಲು ಮೂಲಸೌಕರ್ಯಕ್ಕೆ ಒತ್ತು ನೀಡಬೇಕಿದೆ.

ಕೆ.ಎಸ್. ಈಶ್ವರಪ್ಪ, ದಾವಣಗೆರೆ

ಕೊಲ್ಲಿ ಯುದ್ಧ ನಿಲ್ಲಿಸುವರೇ ಮೋದಿ?

ಭಾರತ ಸರ್ಕಾರಕ್ಕಷ್ಟೆ ಇಸ್ರೇಲ್–ಇರಾನ್ ನಡುವಿನ ಯುದ್ಧ ಅಂತ್ಯಗೊಳಿಸುವ ಸಾಮರ್ಥ್ಯವಿದೆ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ನಾಗಪುರದಲ್ಲಿ ಹೇಳಿದ್ದಾರೆ. ಕೆಲವು ದಿನಗಳ ಹಿಂದೆ ಅರಬ್ ರಾಷ್ಟ್ರದ ಮಾಜಿ ರಾಯಭಾರಿಯೊಬ್ಬರು ಪ್ರಧಾನಿ ನರೇಂದ್ರ ಮೋದಿ ಅವರು ಮನಸ್ಸು ಮಾಡಿದರೆ ಯುದ್ಧ ನಿಲ್ಲಿಸಬಲ್ಲರು ಎಂದು ಹೇಳಿದ್ದು ವರದಿಯಾಗಿತ್ತು. ಹೇಗೋ ಭಾರತಕ್ಕೆ ಇಸ್ರೇಲ್ ಮತ್ತು ಇರಾನ್ ನಡುವೆ ಉತ್ತಮ ಸಂಬಂಧವಿದೆ. ಹೀಗಿರುವಾಗ ಫಲಿತಾಂಶ ಏನೇ ಇರಲಿ; ಯುದ್ಧ ನಿಲ್ಲಿಸುವ ಬಗ್ಗೆ ಭಾಗವತ್ ಅವರು ಪ್ರಧಾನಿಯವರ ಜೊತೆಗೆ ನೇರವಾಗಿ ಮಾತಾಡಬಹುದಲ್ಲವೇ?

ವೈ. ಯಮುನೇಶ್, ಹೊಸಪೇಟೆ

ಅಸಾಂವಿಧಾನಿಕ ಹುದ್ದೆಗಳಿಗೆ ದುಂದುವೆಚ್ಚ

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷದ ಬಲವರ್ಧನೆಗಾಗಿ ಸರ್ಕಾರವು ಅಸಾಂವಿಧಾನಿಕವಾಗಿ ಹಲವಾರು ಹುದ್ದೆಗಳನ್ನು ಸೃಜಿಸಿದೆ. ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಹುದ್ದೆ ಇದಕ್ಕೊಂದು ನಿದರ್ಶನ. ಜಿಲ್ಲಾ, ತಾಲ್ಲೂಕುಮಟ್ಟದಲ್ಲೂ ಈ ಪ್ರಾಧಿಕಾರಕ್ಕೆ ಪದಾಧಿಕಾರಿಗಳನ್ನು ನೇಮಿಸಲಾಗಿದೆ. ಕೆಲವು ನಿಗಮ, ಮಂಡಳಿಗಳ ಅಧ್ಯಕ್ಷರಿಗೆ ಲಕ್ಷಾಂತರ ರೂಪಾಯಿ ಭತ್ಯೆ ನೀಡುತ್ತಿದೆ. ರಾಜ್ಯದ ಹಲವು ಶಾಲೆಗಳಿಗೆ ಸುಸಜ್ಜಿತ ಕೊಠಡಿಗಳಿಲ್ಲ. ಹಳ್ಳಿಗಳಲ್ಲಿ ಸರಿಯಾದ ರಸ್ತೆಗಳಿಲ್ಲ. ಅನಗತ್ಯ ಹುದ್ದೆಗಳಿಗೆ ಜನರ ತೆರಿಗೆ ಹಣವನ್ನು ದುಂದುವೆಚ್ಚ ಮಾಡುವ ಸರ್ಕಾರದ ನಿಲುವು ಖಂಡನೀಯ.

ವಿ.ಜಿ. ಇನಾಮದಾರ, ಸಾರವಾಡ

ಮೇಕೆ ಬಾಯಿಗೆ ಬೆಣ್ಣೆ ಒರೆಸದಿದ್ದರೆ ಸಾಕು

ಮೇಕೆದಾಟು ಯೋಜನೆಯಲ್ಲಿ ಮುಳುಗಡೆಯಾಗುವ ಅರಣ್ಯಕ್ಕೆ ಬದಲೀ ಅರಣ್ಯ ಬೆಳೆಸಲೆಂದು ಬೆಂಗಳೂರು ಮತ್ತು ಆಸುಪಾಸಿನ ಜಿಲ್ಲೆಗಳಲ್ಲಿ 7,400 ಹೆಕ್ಟೇರ್ ಭೂಮಿಯನ್ನು ಕಾಯ್ದಿಡಲು ರಾಜ್ಯ ಸರ್ಕಾರ ನಿರ್ಧರಿಸಿದೆಯೆಂಬ ಸುದ್ದಿ ಪ್ರಕಟವಾಗಿದೆ (ಪ್ರ.ವಾ., ಮಾರ್ಚ್ 22). ಅಂಥ ಬದಲೀ ಜಾಗವನ್ನು ಅರಣ್ಯ ಇಲಾಖೆಯ ಮುಷ್ಟಿಯಿಂದ ಬಿಡಿಸಿ, ಸ್ಪಷ್ಟ ಫಲಕ ಹಾಕಿ, ಅಲ್ಲಿ ಗ್ರಾಮ ಪಂಚಾಯಿತಿಗಳ ಮೂಲಕ ಸ್ಥಳೀಯರೇ ಕಾಡು ಬೆಳೆಸಲು ಈಗಿನಿಂದಲೇ ಅನುಕೂಲ ಮಾಡಿಕೊಡಬೇಕು. ಇಲ್ಲದಿದ್ದರೆ ಇದು ಮೇಕೆ ಬಾಯಿಗೆ ಬೆಣ್ಣೆ ಒರೆಸಿದ ಕೋತಿಯ ಕತೆ ಆಗುತ್ತದೆ.

ಮಹಾರಾಷ್ಟ್ರದಲ್ಲಿ ಬೃಹತ್ ನೀರಾವರಿ ಯೋಜನೆಗಳ ಸಂತ್ರಸ್ತರಿಗೆ ಪೂರ್ಣ ಮರು ವಸತಿ ವ್ಯವಸ್ಥೆ ಆಗುವವರೆಗೂ ಅಣೆಕಟ್ಟೆಗೆ ನೀರು ತುಂಬಿಸಬಾರದೆಂಬ ಕಾನೂನೇ ಜಾರಿಯಲ್ಲಿದೆ. ಅದು ನಮಗೂ ಮಾದರಿಯಾಗಬೇಕು. ಕಾವೇರಿ ವನ್ಯಧಾಮದ ಮತ್ತು ಆಸುಪಾಸಿನ ಮೃಗಪಕ್ಷಿ–ಗಿಡಮರಗಳಿಗೆ ಬದಲೀ ಆಸರೆ ಮೊದಲೇ ಸೃಷ್ಟಿ ಆಗಬೇಕು. ಮೇಕೆದಾಟು ಯೋಜನೆಗೆ ಕೇಂದ್ರದ ಒಪ್ಪಿಗೆ ಸಿಗದಿದ್ದರೂ ಪರ್ಯಾಯ ಅರಣ್ಯಗಳ ಮರುಸೃಷ್ಟಿ ಮಾಡಿಟ್ಟುಕೊಂಡರೆ ಅದು ಲೋಕಕಲ್ಯಾಣದ ಕೆಲಸವೇ ಆಗುತ್ತದೆ. ಮೇಲಾಗಿ ಮುಂದಿನ ಪೀಳಿಗೆಗೆ ಅನುಕರಣಯೋಗ್ಯ ಆದರ್ಶವೂ ಆಗುತ್ತದೆ.

ನಾಗೇಶ ಹೆಗಡೆ, ಕೆಂಗೇರಿ

ಫಿಲ್ಟರ್ ನೀರು: ಗುಣಮಟ್ಟ ಪರೀಕ್ಷೆ ಅಗತ್ಯ

ರಾಜ್ಯದಲ್ಲಿ ದಿನೇ ದಿನೇ ಬಿಸಿಲಿನ ತಾಪ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ಸಾರ್ವಜನಿಕರು ದೂರ ಪ್ರಯಾಣ ಮಾಡುವ ವೇಳೆ ಕುಡಿಯಲು ನೀರಿನ ಬಾಟಲ್ ಖರೀದಿಸುವುದು ಅನಿವಾರ್ಯ. ಆದರೆ, ಕೆಲವು ವ್ಯಾಪಾರಿಗಳು ಹಣದಾಸೆಗಾಗಿ ಫಿಲ್ಟರ್ ನೀರು ಎಂದು ಬಾಟಲ್‌ಗಳಿಗೆ ಯಾವುದೋ ಕಂಪನಿಯ ಲೇಬಲ್ ಅಂಟಿಸಿ, ಬಸ್‌ನಿಲ್ದಾಣ, ಹೋಟೆಲ್, ರೆಸ್ಟೋರೆಂಟ್‌ಗಳಲ್ಲಿ ಮಾರಾಟ ಮಾಡುತ್ತಿದ್ದಾರೆ. ಈ ನೀರನ್ನು ವೈಜ್ಞಾನಿಕವಾಗಿ ಶುದ್ಧೀಕರಿಸಲಾಗಿದೆಯೇ ಎಂಬ ಬಗ್ಗೆ ಗ್ರಾಹಕರಿಗೆ ಖಾತರಿ ಇರುವುದಿಲ್ಲ. ಬಾಟಲ್‌ಗಳ ಮೇಲಿನ ಲೇಬಲ್‌ನಲ್ಲೂ ತಯಾರಿಕೆಗೆ ಸಂಬಂಧಿಸಿದ ವಿವರಗಳು ಸ್ಪಷ್ಟವಾಗಿರುವುದಿಲ್ಲ. ಈ ಬಗ್ಗೆ ಸರ್ಕಾರ ತಜ್ಞರ ಸಮಿತಿ ರಚಿಸಿ ಪರಿಶೀಲಿಸಬೇಕಿದೆ.

ಸುರೇಶ ಅರಳಿಮರ, ಬಾದಾಮಿ

ಚುರುಮುರಿ



ಟ್ರಂಪೈದನ ಕೆತ್ತೆಬಜೆ

• ಲಿಂಗರಾಜು ಡಿ.ಎಸ್.

ಹೊರ್ಮುಜ್ ತೊರೆ ಮೂಲಕವೇ ಎಣ್ಣೆ, ಗ್ಯಾಸು ಯಾಪಾರ ನಡಿತಿತ್ತು. ಸಣ್ಣೈದ ಇರಾನಿಯ ಹಮಾಸು, ಹಿಜ್ಬುಲ್ಲಗಳು ನಮಗೆ ಯಾಪಾರಕ್ಕೆ ತೊಂದರೆ ಕೊಡ್ತಾವೆ. ಕದ್ದು ಪರಮಾಣು ಮಾಡಿಕತ್ತಾವನೆ ಅಂತ ಚಿಕ್ಕೈದ ಇಸ್ರೇಲಿಯು ಟ್ರಂಪು ದೊಡ್ಡೈದನಿಗೆ ಚಾಡಿ ಹೇಳಿ ಆಹ್ವಾನ ಕೊಟ್ಟ. ಬ್ರಿಟಿಷಣ್ಣನ ಜಲಾಂತರ್ಗಾಮಿ ಬಂದು ಹೊರ್ಮುಜ್ ಗೇಟುತಾವು ನಿಂತುದ್ದು ಕಂಡು ಇವರಿಗೆ ತುಂಬಾ ಬಲ ಬಂದಿತ್ತು.

'ಹೊರ್ಮುಜ್ ಗೇಟು ನಮಗೆ ಮಾತ್ರ ಯಾಕ್ಲಾ ಬಂದು ಮಾಡಿದ್ದಯ್? ಇನ್ನೆಡು ದಿನದಾಗೆ ಓಪನ್ ಮಾಡು. ಇಲ್ಲದಿದ್ರೆ ನಿನಗೆ ಮುಂದದೆ ಮಾರಿ ಹಬ್ಬ' ಅಂತ ದೊಡ್ಡೈದನು ಇರಾನಿಗೆ ಧಮಕಿ ಹಾಕಿದ. ಹೊರ್ಮುಜಲ್ಲಿ ಯಜಮಾನಿಕೆಗೆ ಜಾಗ ಒಳ್ಳೆ ಹೊರುವಾಗದೆ ಅನ್ನೋದು ದೊಡ್ಡೈದನ ಕೆತ್ತೆಬಜೆಯಾಗಿತ್ತು.

'ಸಣ್ಣೈದ ಸ್ಯಾನೆ ಕಿತಾಪತಿ ಮಾಡ್ತಾವನೆ. ದುಬೈದ, ಓಮಣ್ಣ, ಯಮಣ್ಣನ, ಕತಾರಣ್ಣನ ಕಾಂಪ್ರೋಂಡಗಿರೋ ನಮ್ಮ ಅಂಗಡಿ ಮ್ಯಾಲೆಲ್ಲಾ ಬಾಂಬು ಹಾಕ್ತಾವನೆ' ಅಂತ ದೊಡ್ಡೈದ ಎಲ್ಲಾರಿಗೂ ಚಾಡಿ ಹೇಳಿಕ್ಯಂದು ಬಂದ. ದೊಡ್ಡೈದನ ಕಿತಾಪತಿಗೆ ನಾವ್ಯಾಕೆ ನಿಷ್ಠೂರಾಗನ ಅಂತ ಯಾರೂ ಕ್ಯಾರೆ ಅನ್ನಲಿಲ್ಲ. ದೊಡ್ಡೈದ, ಚಿಕ್ಕೈದ ತೊರೆ ತಾವು ನಿಂತಕಂದು ಜಗಳ ಸುರು ಮಾಡಿದ್ರು.

'ನಿನ್ನ ಹಿಜ್ಬುಲ್ಲಾ, ಹಮಾಸುಗಳ ಕಾಟ ತಡೆಯಕ್ಕಾಯ್ತಿಲ್ಲ ಕಲಾ. ನಾನು ದೊಡ್ಡೈದ ಅನ್ನೋ ಗೌರವ ಇಲ್ದೆ ನನ್ನ ಇಮಾನಗಳ್ನೇ ಹೊಡದಾಕುವಷ್ಟು ಧಿಮಾಕು ಬಂದದ ನಿನಗೆ' ದೊಡ್ಡೈದ ಕಿರುಚಾಡಿದ.

'ಲೇ ದೊಡ್ಡೈದ, ಇಸ್ರೇಲಿಗೇಳಿ ಮೋಸದ ಪಡೆ ನೆರಳಲ್ಲಿ ನಮ್ಮ ತಾತನ್ನ, ನಮ್ಮಿಸ್ಕೂಲು ಮಕ್ಕಳುನ್ನ ಮುಗಿಸಿದೆ, ನಮ್ಮನೆ ಕೆಡವಿಸ್ದೆ. ಇದು ನನ್ನ ಏರಿಯಾ ಕನೋ. ನನ್ನ ಕೋಟೇಲೆ ನನಗೆ ಆಪು ಇಡಕ್ಕೆ ಬಂದಿದ್ದೀಯಾ?' ಅಂತ ಸಣ್ಣೈದ ಖಂಡಾಂತರ ಕ್ಷಿಪಣಿ ತೆಗೆದ. ದೊಡ್ಡೈದ, ಚಿಕ್ಕೈದ ಗಾಬರಿಯಾಗಿ 'ಲೇ ಸಣ್ಣೈದ, ನಿನ್ನ ನೆಣ ಇಳಿಸ್ತೀವಿ ಕಲಾ' ಅಂತ ಓಡೋದ್ರು.

ಸಂಗತ


ಅನ್ಯಾಯದ ಸಾವು! ಜವಾಬ್ದಾರಿ ಯಾರದು?

ನೀರಾನೆ ದಾಳಿಯಿಂದ ಯುವ ವೈದ್ಯೆ ಸಾವಿಗೀಡಾಗಿರುವುದು ಆಕಸ್ಮಿಕ ಘಟನೆ ಆಗಿದ್ದರೂ, ಆ ದುರಂತ ಸಂಭವಿಸಲು ವ್ಯವಸ್ಥೆಯ ನಿರ್ಲಕ್ಷ್ಯ, ಲೋಪಗಳೂ ಕಾರಣ.

• ಡಾ. ಮುರಳೀಧರ ಕಿರಣಕೆರೆ

ಶಿವಮೊಗ್ಗದ ತ್ಯಾವರೆಕೊಪ್ಪ ಹುಲಿ–ಸಿಂಹಧಾಮದಲ್ಲಿ ತರಬೇತಿಯಲ್ಲಿದ್ದ ಪಶುವೈದ್ಯೆ ಡಾ. ಸಮೀಕ್ಷಾ ರೆಡ್ಡಿಯ ಮೇಲೆ ನಡೆದ ನೀರಾನೆ (ಹಿಪ್ಪೊಪೊಟಾಮಸ್) ದಾಳಿ ನೋವಿನ ಸಂಗತಿ. ಯುಗಾದಿಯಂದು ನಡುರಾತ್ರಿಯಲ್ಲಿ ನಡೆದ ಆಘಾತಕಾರಿ ಘಟನೆಯಲ್ಲಿ ಉತ್ಸಾಹಿ ಯುವ ವೈದ್ಯೆ ಪ್ರಾಣ ಕಳೆದುಕೊಂಡಿದ್ದಾರೆ. ಗರ್ಭಿಣಿ ನೀರಾನೆಯ ಶರೀರದ ಉಷ್ಣಾಂಶ ದಾಖಲಿಸುವ ಸಂದರ್ಭದಲ್ಲಿ ನಡೆದ ಅವಘಡ, ವ್ಯವಸ್ಥೆಯ ಹಲವು ಲೋಪಗಳತ್ತ ಬೆಟ್ಟು ಮಾಡಿದೆ.

ನೀರಾನೆ ನೋಡಲು ಶಾಂತವಾಗಿ ಕಂಡರೂ ಆಕ್ರಮಣಕಾರಿ ಸ್ವಭಾವದ ಪ್ರಾಣಿ. ಅದರಲ್ಲೂ ರಾತ್ರಿ ವೇಳೆ ಅವು ಹೆಚ್ಚು ಜಾಗರೂಕವಾಗಿರುತ್ತವೆ ಮತ್ತು ಸುಲಭವಾಗಿ ಪ್ರಚೋದನೆಗೆ ಒಳಗಾಗುತ್ತವೆ. ತುರ್ತು ಇಲ್ಲದ ಹೊರತು ರಾತ್ರಿ ತಪಾಸಣೆಗಳನ್ನು ತಪ್ಪಿಸಬೇಕು ಎನ್ನುತ್ತದೆ ಸರ್ಕಾರದ ಮಾರ್ಗಸೂಚಿ. ಅತಿ ಅಗತ್ಯವಿದ್ದಾಗಷ್ಟೇ ಅನುಭವಿ ವೈದ್ಯರು ರಕ್ಷಣಾ ತಂಡದೊಂದಿಗೆ ತಪಾಸಣೆ ನಡೆಸಬೇಕು. ಅಂತಹ ಜರೂರು ಇಲ್ಲದಿದ್ದರೂ ಅಪರಾತ್ರಿಯಲ್ಲಿ ವೈದ್ಯೆ ನೀರಾನೆಯ ಆವರಣದೊಳಗೆ ಹೋಗಿದ್ದಾದರೂ ಯಾಕೆ? ಸೂಕ್ತ ರಕ್ಷಣೆಯಿಲ್ಲದೆ ಆ ವೇಳೆಯಲ್ಲಿ ಅಲ್ಲಿಗೆ ಕಳುಹಿಸಿದವರು ಯಾರು? ತರಬೇತಿಯ ಹಂತದಲ್ಲಿದ್ದ ಅಧಿಕಾರಿಯನ್ನು ಅಪಾಯಕಾರಿ ಕೆಲಸಕ್ಕೆ ಯಾವ ಒತ್ತಡ ದೂಡಿತು? ಇಂತಹ ಹತ್ತಾರು ಪ್ರಶ್ನೆಗಳು ಸಹಜವಾಗಿಯೇ ಮನದಲ್ಲಿ ಏಳುತ್ತವೆ. ನಿಷ್ಪಕ್ಷಪಾತ ತನಿಖೆಯಿಂದ ಸತ್ಯಾಂಶ ಹೊರಬೀಳಲು ಸಾಧ್ಯ. ಹಾಗಾದಲ್ಲಿ, ಹೊರಬರುವ ವಿಚಾರಗಳು ಖಂಡಿತವಾಗಿಯೂ ಅಪ್ರಿಯವಾಗಿರುವುದರಿಂದ ವ್ಯವಸ್ಥೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸುವುದೋ ಕಾದು ನೋಡಬೇಕು.



ವನ್ಯಜೀವಿ ಪಶುವೈದ್ಯಕೀಯ ವೃತ್ತಿಯು ಅತ್ಯಂತ ಸವಾಲಿನ ಮತ್ತು ಅಪಾಯಕಾರಿ ಕೆಲಸ. ಸಾಕುಪ್ರಾಣಿಗಳಿಗಿಂತ ಭಿನ್ನವಾಗಿ ಕಾಡುಪ್ರಾಣಿಗಳು ಕಾಯಿಲೆ, ನೋವು, ಭಯ, ಆತಂಕ, ಮರಿಗಳಿರುವ ಸಂದರ್ಭಗಳಲ್ಲಿ ತೀವ್ರವಾಗಿ ಪ್ರತಿಕ್ರಿಯಿಸುತ್ತವೆ. ಪ್ರಮಾಣಿತ ಕಾರ್ಯಾಚರಣೆ ವಿಧಾನವನ್ನು (ಎಸ್‌ಒಪಿ) ಕಟ್ಟುನಿಟ್ಟಾಗಿ ಪಾಲಿಸಿದಾಗ ಮಾತ್ರ ಸಂಭವನೀಯ ಅವಘಡಗಳನ್ನು ತಪ್ಪಿಸ ಬಹುದು. ವನ್ಯಜೀವಿಗಳೊಂದಿಗೆ ಕೆಲಸ ಮಾಡುವಾಗ 'ಸುರಕ್ಷತೆಯೇ ಮೊದಲು' ಎಂಬ ತತ್ತ್ವವನ್ನು ಪಾಲಿಸುವುದು ಅತ್ಯಗತ್ಯ.

ನಮ್ಮ ರಾಜ್ಯದಲ್ಲಿ ಐದು ಹುಲಿ ಸಂರಕ್ಷಿತ ಪ್ರದೇಶಗಳು ಸೇರಿದಂತೆ 41 ವಿವಿಧ ವನ್ಯಜೀವಿ ರಕ್ಷಿತ ಪ್ರದೇಶಗಳು ಹಾಗೂ 10 ಇಲಾಖಾ ಆನೆ ಶಿಬಿರಗಳಿವೆ. ಇಂತಹ ಸಾಕಾನೆ ಶಿಬಿರಗಳು, ಮೃಗಾಲಯಗಳು, ವನ್ಯಜೀವಿಧಾಮಗಳಲ್ಲಿರುವ ಪಶು–ಪಕ್ಷಿಗಳ ಸಂರಕ್ಷಣೆ, ರೋಗ ನಿಯಂತ್ರಣ ಹಾಗೂ ಕಣ್ಗಾವಲು, ವನ್ಯಜೀವಿಗಳ ಮರಣೋತ್ತರ ಪರೀಕ್ಷೆ, ಕಾಡುಪ್ರಾಣಿಗಳನ್ನು ಸೆರೆ ಹಿಡಿಯುವುದು, ನಾಡಿಗೆ ನುಗ್ಗಿದ ಪ್ರಾಣಿಗಳನ್ನು ಮರಳಿ ಕಾಡಿಗೆ ಅಟ್ಟುವ ಕಾರ್ಯಾಚರಣೆ ಯಂತಹ ಸಂದರ್ಭಗಳಲ್ಲಿ ವನ್ಯಜೀವಿ ಪಶುವೈದ್ಯರದ್ದೇ ಪ್ರಧಾನ ಪಾತ್ರ. ಮಾನವ–ವನ್ಯಜೀವಿ ಸಂಘರ್ಷಗಳು ಹೆಚ್ಚುತ್ತಿರುವ ಈ ದಿನಗಳಲ್ಲಿ ಪರಿಸ್ಥಿತಿಯನ್ನು ತುಸುವಾದರೂ ತಿಳಿಗೊಳಿಸುವಲ್ಲಿ ಪಶುವೈದ್ಯರ ನೆರವು ಮುಖ್ಯವಾದದ್ದು. ಇಷ್ಟೆಲ್ಲಾ ಮಹತ್ವವಿದ್ದರೂ ಅರಣ್ಯ ಇಲಾಖೆಯಲ್ಲಿ ಕಾಯಂ ಪಶುವೈದ್ಯರೇ ಇಲ್ಲ. ಅಲ್ಲಿ ಸೇವೆಸಲ್ಲಿಸುತ್ತಿರುವವರು ಪಶು ಸಂಗೋಪನಾ ಇಲಾಖೆಯಿಂದ ನಿಯೋಜನೆ ಮೇಲಿರುವವರು! ಸಾಕುಪ್ರಾಣಿಗಳ ಚಿಕಿತ್ಸೆ ಮಾಡುತ್ತಿರುವ ಸಾಮಾನ್ಯ ವೈದ್ಯರೇ ಎರವಲು ಸೇವೆಯ ಮೇಲೆ ವನ್ಯಜೀವಿ ವಿಭಾಗದಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಕಾಡು–ನಾಡಿನ ಹಿತದೃಷ್ಟಿಯಿಂದ ಅರಣ್ಯ ಇಲಾಖೆಯಲ್ಲಿ ವನ್ಯಜೀವಿ ಸಂರಕ್ಷಿತ ಪ್ರದೇಶಗಳಿಗೆ ಅನುಗುಣವಾಗಿ ಕನಿಷ್ಠ 41 ವನ್ಯಜೀವಿ ಪಶುವೈದ್ಯರ ಹುದ್ದೆಗಳಿರಬೇಕು. ಮಂಜೂರು ಆಗಿರುವುದು 25 ಹುದ್ದೆಗಳಷ್ಟೇ. ಅದರಲ್ಲಿ ಭರ್ತಿಯಾಗಿರುವುದು ಮೂರನೇ ಒಂದರಷ್ಟು ಹುದ್ದೆಗಳು! ಹಾಗಾಗಿ ಸೇವೆಯಲ್ಲಿ ರುವ ವೈದ್ಯರ ಮೇಲೆ ಅಪಾರ ಕಾರ್ಯದೊತ್ತಡ ಇದೆ. ಇಲ್ಲಿನ ವೈದ್ಯರು ತಮ್ಮ ಪದವಿ ಶಿಕ್ಷಣದಲ್ಲಿ ಸಾಕುಪ್ರಾಣಿಗಳ ಚಿಕಿತ್ಸೆಯನ್ನಷ್ಟೇ ಕಲಿತವರು. ವನ್ಯಮೃಗಗಳ ತಪಾಸಣೆ, ಚಿಕಿತ್ಸೆಯ ಬಗ್ಗೆ ಸಾಮಾನ್ಯ ಜ್ಞಾನ ಬಿಟ್ಟರೆ ಹೆಚ್ಚಿನ ಅರಿವು ಇಲ್ಲದವರು. ಇವರನ್ನು ಅಲ್ಪ ತರಬೇತಿಯೊಂದಿಗೆ ವನ್ಯಜೀವಿ ಪಶುವೈದ್ಯಕೀಯ ಅಖಾಡಕ್ಕಿಳಿಸುವುದು ಖಂಡಿತವಾಗಿಯೂ ಮೂಲ ಉದ್ದೇಶಕ್ಕೆ ನ್ಯಾಯ ಒದಗಿಸದು. ವಿವಿಧ ಕಾಯಿಲೆ, ಚಿಕಿತ್ಸೆಯ ಜ್ಞಾನದ ಜೊತೆಗೆ ಪ್ರಾಣಿಗಳ ಮೂಲ ಸ್ವಭಾವ, ಮನಃಸ್ಥಿತಿ, ಅವುಗಳ ವರ್ತನೆ, ದೈಹಿಕ ಭಾಷೆಯ ತಿಳಿವಳಿಕೆ ಇರಬೇಕು; ಸೂಕ್ಷ್ಮಗ್ರಹಿಕೆ ಇರಬೇಕು; ಧುತ್ತೆಂದು ಎದುರಾಗ ಬಹುದಾದ ಅಪಾಯದಿಂದ ಪಾರಾಗುವ ಅರಿವಿರಬೇಕು. ಇವೆಲ್ಲವೂ ಸಾಧ್ಯವಾಗುವುದು ಸೂಕ್ತ ಶಿಕ್ಷಣ ಮತ್ತು ತರಬೇತಿ ಯಿಂದ ಮಾತ್ರ.

ಇತ್ತೀಚೆಗೆ ಅರಣ್ಯ ಇಲಾಖೆಯು ಗುತ್ತಿಗೆ ಆಧಾರದ ಮೇಲೆ ಪಶುವೈದ್ಯರನ್ನು ನೇಮಿಸಿಕೊಳ್ಳುತ್ತಿದೆ. ಅಪಾಯ ಭತ್ಯೆ ಸೇರಿದಂತೆ ಯಾವುದೇ ವಿಶೇಷ ಸವಲತ್ತುಗಳಿಲ್ಲದೆ ಅತ್ಯಂತ ಕಡಿಮೆ ವೇತನಕ್ಕೆ ನಿಯುಕ್ತಿ ಮಾಡಿಕೊಳ್ಳುತ್ತಿರುವುದು ಅನ್ಯಾಯವೇ ಸರಿ. ವನ್ಯಜೀವಿ ಸಂರಕ್ಷಣೆ ಮತ್ತು ಮಾನವನ ಸುರಕ್ಷತೆ ಎರಡೂ ಸಮಾನವಾಗಿ ಮುಖ್ಯವಾಗಿರುವುದರಿಂದ ಅರಣ್ಯ ಇಲಾಖೆ ಹೆಚ್ಚಿನ ಪಶುವೈದ್ಯರ ಹುದ್ದೆಯನ್ನು ಸೃಜಿಸಿ, ಸ್ಪಷ್ಟ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಿ ಕಾಯಂ ನಿಯುಕ್ತಿ ಮಾಡಿಕೊಳ್ಳಬೇಕು. ಪಶುವೈದ್ಯಕೀಯ ಪದವಿ ಜೊತೆಗೆ ವನ್ಯಜೀವಿ ಶಾಸ್ತ್ರದಲ್ಲಿ ಸ್ನಾತಕೋತ್ತರ ಪದವಿ ಪಡೆದವರನ್ನು ಮಾತ್ರ ಪರಿಗಣಿಸಬೇಕು. ಈ ನಿಟ್ಟಿನಲ್ಲಿ ಪಶುವೈದ್ಯಕೀಯ ವಿಶ್ವವಿದ್ಯಾಲಯದ ವನ್ಯಜೀವಿ ಸ್ನಾತಕೋತ್ತರ ವಿಭಾಗದ ಜೊತೆಗೆ ಕೊಡಗಿನ ಕುಡಿಗೆಯಲ್ಲಿರುವ ವನ್ಯಜೀವಿ ಪಶುವೈದ್ಯಕೀಯ ಸಂಶೋಧನಾ ಸಂಸ್ಥೆಯನ್ನು ಸರ್ವರೀತಿಯಲ್ಲೂ ಸಶಕ್ತಗೊಳಿಸುವುದು ಸದ್ಯದ ತುರ್ತು.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ದೇಶೀಯ ಪಥದರ್ಶಕ ವ್ಯವಸ್ಥೆಯ ಮತ್ತೊಂದು ಉಪಗ್ರಹ ಕಾರ್ಯಾಚರಣೆ ಸ್ಥಗಿತ

ನಾವಿಕ್‌ಗೆ ಹಿನ್ನಡೆ

ಪ್ರಜಾವಾಣಿ ವಾರ್ತೆ



ಅದು ಕಾರ್ಗಿಲ್ ಯುದ್ಧದ ಸಂದರ್ಭ. ಪಾಕಿಸ್ತಾನದ ಸೇನಾ ನೆಲೆಗಳ ಬಗ್ಗೆ ಜಿಪಿಎಸ್ (ಜಾಗತಿಕ ಪಥದರ್ಶಕ ಉಪಗ್ರಹ ವ್ಯವಸ್ಥೆಯ) ಮಾಹಿತಿ ನೀಡುವಂತೆ ಭಾರತವು ಅಮೆರಿಕವನ್ನು ಕೋರಿತ್ತು. ಆದರೆ, ಅಮೆರಿಕ ನಿರಾಕರಿಸಿತ್ತು. ದೇಶೀಯ ಪಥದರ್ಶಕ ವ್ಯವಸ್ಥೆಯೊಂದರ ಅಗತ್ಯವಿದೆ ಎಂದು ಭಾರತ ಮನಗಂಡಿದ್ದು ಆಗಲೇ. ಸ್ವದೇಶಿ ಪಥದರ್ಶಕ ಉಪಗ್ರಹ ವ್ಯವಸ್ಥೆ ರೂಪಿಸಲು ಅದೇ ನಾಂದಿಯಾಯಿತು. ಅದರ ಅಭಿವೃದ್ಧಿಯ ಜವಾಬ್ದಾರಿ ಹೊತ್ತುಕೊಂಡಿದ್ದು ಇಸ್ರೊ. 2013ರ ನಂತರ ತನ್ನದೇ ಆದ ಪಥದರ್ಶಕ ವ್ಯವಸ್ಥೆ ರೂಪಿಸಲು ಭಾರತಕ್ಕೆ ಸಾಧ್ಯವಾಗಿದ್ದರೂ ಅದು ಪೂರ್ಣವಾಗಿ ಕಾರ್ಯಾರಂಭ ಮಾಡಿಲ್ಲ.

ಆರಂಭದಿಂದಲೂ ಒಂದಲ್ಲ ಒಂದು ರೀತಿಯ ಸಮಸ್ಯೆ ಎದುರಿಸುತ್ತಲೇ ಬಂದ ಈ ಯೋಜನೆಗೆ, ಈಗ ಗಂಭೀರ ಸ್ವರೂಪದ ಹಿನ್ನಡೆಯೇ ಆಗಿದೆ. ದೀರ್ಘಕಾಲದ ನಿರ್ಲಕ್ಷ್ಯ, ತಾಂತ್ರಿಕ ವೈಫಲ್ಯಗಳು, ಅವಧಿ ಮೀರಿದ ಉಪಗ್ರಹಗಳು ಮತ್ತು ಬದಲಿ ಉಪಗ್ರಹಗಳ ಉಡಾವಣೆ ವಿಳಂಬದಿಂದಾಗಿ 'ನಾವಿಕ್' ಕಾರ್ಯಾರಂಭ ಸ್ಥಗಿತಗೊಳಿಸುವ ಹಂತ ತಲುಪಿದೆ.

'ನಾವಿಕ್' ಅನ್ನು ವಿಮಾನಯಾನ, ನೌಕಾಯಾನ, ಸಾರಿಗೆ ವ್ಯವಸ್ಥೆ, ಸೇನೆ, ಪ್ರಕೃತಿ ವಿಕೋಪ ಇನ್ನಿತರ ತುರ್ತು ಪರಿಸ್ಥಿತಿಗಳಲ್ಲಿ ಬಳಸಲಾಗುತ್ತಿದೆ. ಉಪಗ್ರಹಗಳು ನಿಷ್ಕ್ರಿಯವಾಗುತ್ತಿರುವುದರಿಂದ, ಇದು ದೇಶದ ಸ್ಪರ್ಧಾತ್ಮಕತೆ, ಆರ್ಥಿಕತೆ ಮತ್ತು ರಕ್ಷಣಾ ವಲಯದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುವ ಸಂಭವ ಇದೆ. ಗಗನಯಾನ, ಬಾಹ್ಯಾಕಾಶದಲ್ಲಿ ತನ್ನದೇ ಆದ ನಿಲ್ದಾಣವನ್ನು ಹೊಂದುವ ಬೃಹತ್ ಯೋಜನೆಗಳೆಡೆಗೆ ಇಸ್ರೊ ಅತಿಯಾದ ಒತ್ತು ನೀಡಿದ್ದರಿಂದ ನಾವಿಕ್‌ನಂಥ ಪ್ರಮುಖ ಹಾಗೂ ಯುದ್ಧದಂಥ ಬಿಕ್ಕಟ್ಟಿನ ಸಂದರ್ಭಗಳಲ್ಲಿ ಅತ್ಯಗತ್ಯವಾದ ಯೋಜನೆಗೆ ಹಿನ್ನಡೆ ಉಂಟಾಗಿದೆ ಎನ್ನುವ ವಿಶ್ಲೇಷಣೆಗಳು ಕೇಳಿಬರುತ್ತಿವೆ.

ಏನಿದು 'ನಾವಿಕ್'?

ನಾವಿಕ್‌ನ (NavIC) ವಿಸ್ತೃತ ರೂಪ ನ್ಯಾವಿಗೇಷನ್ ವಿತ್ ಇಂಡಿಯನ್ ಕಾನ್‌ಸ್ಟಲೇಷನ್. ಕನ್ನಡದಲ್ಲಿ ಹೇಳುವುದಾದರೆ, ಭಾರತದ ಉಪಗ್ರಹಗಳ ಗುಚ್ಛದ ಮೂಲಕ ಪಥದರ್ಶನ. ಇದರ ಮೂಲ ಹೆಸರು ಭಾರತೀಯ ಪ್ರಾದೇಶಿಕ ಪಥದರ್ಶಕ ಉಪಗ್ರಹ ವ್ಯವಸ್ಥೆ (ಐಆರ್‌ಎನ್‌ಎಸ್‌ಎಸ್–ಇಂಡಿಯನ್ ರೀಜನಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಮ್). ಇದು, ಅಮೆರಿಕದ ಜಿಪಿಎಸ್ (ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್) ಮಾದರಿಯಲ್ಲೇ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ), ಸ್ವತಂತ್ರವಾಗಿ ಮತ್ತು ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಪಥದರ್ಶಕ ವ್ಯವಸ್ಥೆ. 2016ರಲ್ಲಿ ಇದಕ್ಕೆ 'ನಾವಿಕ್' ಎಂದು ಮರುನಾಮಕರಣ ಮಾಡಲಾಯಿತು.

ಭೂಸ್ಥಿರ ಮತ್ತು ಭೂಸಮನ್ವಯ ಕಕ್ಷೆಗಳಲ್ಲಿ ಸುತ್ತುತ್ತಿರುವ ಏಳು ಉಪಗ್ರಹಗಳ ಗುಚ್ಛವು ಜಿಪಿಎಸ್ ಮಾದರಿಯಲ್ಲಿ ಪಥದರ್ಶನ (ದಿಕ್ಕು), ನಿಖರ ಸ್ಥಳದ ಮಾಹಿತಿ (ಪೊಸಿಷನಿಂಗ್) ಮತ್ತು ಸಮಯದ (ಟೈಮಿಂಗ್) ಮಾಹಿತಿ ನೀಡುತ್ತದೆ. ಭಾರತದ ಸಂಪೂರ್ಣ ಭೂಭಾಗ ಮತ್ತು ಸುತ್ತಲಿನ 1,500 ಕಿ.ಮೀ ವ್ಯಾಪ್ತಿಯಲ್ಲಿ ನಿಖರ ಪಥದರ್ಶನ, ಸ್ಥಳದ ಮಾಹಿತಿ ನೀಡುವ ಸಾಮರ್ಥ್ಯ ಇದು ಹೊಂದಿದೆ (ಅಮೆರಿಕ, ರಷ್ಯಾ, ಚೀನಾ, ಯುರೋಪಿನ ಪಥದರ್ಶಕ ವ್ಯವಸ್ಥೆಯು ಇಡೀ ಜಗತ್ತನ್ನೇ ವ್ಯಾಪಿಸಿವೆ).

ಏನೆಲ್ಲಾ ಸೇವೆ?

ಪ್ರಮುಖವಾಗಿ ಎರಡು ಸೇವೆಗಳನ್ನು ಇದು ನೀಡುತ್ತದೆ. ಒಂದು ನಿಗದಿತ ಸ್ಥಳದ ಮಾಹಿತಿ ಸೇವೆ (ಸ್ಟ್ಯಾಂಡರ್ಡ್ ಪೊಸಿಷನಿಂಗ್ ಸರ್ವಿಸ್–ಎಸ್‌ಪಿಎಸ್). ಎಲ್ಲ ಬಳಕೆದಾರರಿಗೆ ಅಂದರೆ, ಸಾರ್ವಜನಿಕರಿಗೆ ಈ ಸೇವೆ ಲಭ್ಯ. ಇನ್ನೊಂದು ನಿರ್ಬಂಧಿತ ಸೇವೆ (ರಿಸ್ಟ್ರಿಕ್ಟೆಡ್ ಸರ್ವಿಸ್–ಆರ್‌ಎಸ್). ಸೇನೆ ಮುಂತಾದ ಅಧಿಕೃತ ಬಳಕೆದಾರರಿಗೆ ಮಾತ್ರ ಈ ಸೇವೆಯನ್ನು ಇಸ್ರೊ ನೀಡುತ್ತದೆ. ಇಸ್ರೊ ಪ್ರಕಾರ, ಈ ವ್ಯವಸ್ಥೆಯು ಬಳಕೆದಾರ ಇರುವ ಸ್ಥಳದ ಮಾಹಿತಿಯನ್ನು ನಿಖರವಾಗಿ ಹೇಳುವ (ಗುರುತಿಸಿದ ಸ್ಥಳದ 20 ಮೀಟರ್ ವ್ಯಾಪ್ತಿಯ ಒಳಗೆ) ಸಾಮರ್ಥ್ಯವನ್ನು ಹೊಂದಿದೆ.

ಮುಂದೇನು?

ಪಥದರ್ಶಕ ವ್ಯವಸ್ಥೆಯನ್ನು ಬಲಪಡಿಸುವ ಇರಾದೆ ಇಸ್ರೊಗೆ ಇದ್ದರೂ, ಹಳೆಯ ಉಪಗ್ರಹಗಳಿಗೆ ಬದಲಿ ಹೊಸ ಉಪಗ್ರಹಗಳನ್ನು ಕಳುಹಿಸುವ ಪ್ರಕ್ರಿಯೆ ನಿಧಾನವಾಗಿರುವುದು, 2025ರಲ್ಲಿ ಎನ್‌ವಿಎಸ್–02 ಉಪಗ್ರಹ ಉಡಾವಣಾ ವೈಫಲ್ಯ ಈ ಮಹತ್ವಾಕಾಂಕ್ಷಿ ಯೋಜನೆಗೆ ತೀವ್ರ ಹಿನ್ನಡೆ ಉಂಟುಮಾಡಿದೆ.

ಕಾರ್ಯಾಚರಣೆ ಸ್ಥಗಿತಗೊಳಿಸಿರುವ ಮತ್ತು ಹಳೆಯ ಉಪಗ್ರಹಗಳ ಬದಲಿಗೆ 2026ರ ವರ್ಷಾಂತ್ಯದ ವೇಳೆಗೆ ಮೂರು ಉಪಗ್ರಹಗಳನ್ನು ಉಡಾವಣೆ ಮಾಡುವುದಾಗಿ ಇಸ್ರೊ ಈ ಹಿಂದೆ ಹೇಳಿತ್ತು. ಆದರೆ, ಈ ಬಗ್ಗೆ ಅಧಿಕೃತ ಮಾಹಿತಿ ಇನ್ನಷ್ಟೇ ಹೊರಬೀಳಬೇಕಿದೆ.

ಯಾವುದಕ್ಕೆ ಬಳಕೆ?

ದೇಶದಲ್ಲಿ ವಿಮಾನಯಾನ, ನೌಕಾಯಾನ, ರೈಲ್ವೆ, ಸೇನೆ ಉದ್ದೇಶಗಳು, ಪ್ರವಾಹ, ಭೂಕುಸಿತ, ಚಂಡಮಾರುತದಂತಹ ಪ್ರಾಕೃತಿಕ ವಿಕೋಪದ ತುರ್ತು ಪರಿಸ್ಥಿತಿಗಳಲ್ಲಿ 'ನಾವಿಕ್' ಅನ್ನು ಬಳಸಲಾಗುತ್ತಿದೆ. ಜನಸಮಾನ್ಯರಿಗೆ ಇದು ಲಭ್ಯವಿದ್ದರೂ, ಇದನ್ನು ಬಳಸುವವರ ಸಂಖ್ಯೆ ಕಡಿಮೆ. ಜಿಪಿಎಸ್‌ನಷ್ಟು ಜನಪ್ರಿಯತೆ ಪಡೆದಿಲ್ಲ.

ಈಗ ಏನಾಗಿದೆ?

ಪಥದರ್ಶಕ ವ್ಯವಸ್ಥೆಗಾಗಿ ಇಸ್ರೊ, 2013ರಿಂದ 2018ರವರೆಗೆ ಒಂಬತ್ತು ಉಪಗ್ರಹಗಳನ್ನು ಉಡಾವಣೆ ಮಾಡಿತ್ತು. ಅದರಲ್ಲಿ ಎಂಟು ಉಪಗ್ರಹಗಳನ್ನು ಕಕ್ಷೆಗೆ ಸೇರಿಸುವಲ್ಲಿ ಯಶಸ್ವಿಯಾಗಿತ್ತು. ಪಥದರ್ಶಕ ಉಪಗ್ರಹಗಳಲ್ಲಿ ಪರಮಾಣು ಗಡಿಯಾರ ಅತ್ಯಂತ ಪ್ರಮುಖ ಸಾಧನವಾಗಿದ್ದು, ಅದು ಕಾರ್ಯಸ್ಥಗಿತಗೊಳಿಸಿದರೆ ಉಪಗ್ರಹದ ಕಾರ್ಯಾಚರಣೆ ಬಹುತೇಕ ಸ್ಥಗಿತಗೊಳ್ಳುತ್ತದೆ. 2025ರಲ್ಲಿ ಆರ್‌ಟಿಐ ಅರ್ಜಿಯೊಂದಕ್ಕೆ ಪ್ರತಿಕ್ರಿಯಿಸಿದ್ದ ಇಸ್ರೊ, ಎಂಟರ ಪೈಕಿ ಐದು ಉಪಗ್ರಹಗಳಲ್ಲಿನ (1ಎ, 1ಸಿ, 1ಡಿ, 1ಇ, 1ಜಿ) ಪರಮಾಣು ಗಡಿಯಾರಗಳು ಸ್ಥಗಿತಗೊಂಡಿದ್ದು, (ಒಂದು ಉಪಗ್ರಹದಲ್ಲಿ ಮೂರು ಗಡಿಯಾರಗಳಿರುತ್ತವೆ) ನಾವಿಕ್‌ಗೆ ಅವುಗಳ ಸೇವೆ ಸಿಗುತ್ತಿಲ್ಲ ಎಂದು ಹೇಳಿತ್ತು.

ಇದೇ 13ರಂದು ಇಸ್ರೊ ಹೇಳಿಕೆಯನ್ನು ಬಿಡುಗಡೆ ಮಾಡಿದ್ದು, 'ಈ ಯೋಜನೆಯ ಅಡಿ ಉಡಾವಣೆ ಮಾಡಿದ್ದ 1ಎಫ್ ಉಪಗ್ರಹವು ತನ್ನ 10 ವರ್ಷಗಳ ಕಾರ್ಯಾಚರಣೆ ಅವಧಿಯನ್ನು ಮಾರ್ಚ್ 10ಕ್ಕೆ ಪೂರೈಸಿದೆ. ಅದರಲ್ಲಿರುವ ಪರಮಾಣು ಗಡಿಯಾರವು ಮಾರ್ಚ್ 13ರಂದು ಸ್ಥಗಿತಗೊಂಡಿದೆ. ಆದರೂ, ಉಪಗ್ರಹವು ಕಕ್ಷೆಯಲ್ಲಿ ಕಾರ್ಯಾಚರಣೆ ಮುಂದುವರಿಸಲಿದೆ. ಏಕಮುಖ ಸಂದೇಶ ಕಳುಹಿಸುವ ಉದ್ದೇಶಕ್ಕೆ ಇದು ಬಳಕೆಯಾಗಲಿದೆ' ಎಂದು ಹೇಳಿದೆ.

ಇದರೊಂದಿಗೆ, ಬಾಕಿ ಉಳಿದಿದ್ದ ಮೂರು ಉಪಗ್ರಹಗಳ (1ಬಿ, 1ಎಫ್ ಮತ್ತು 1ಐ) ಪೈಕಿ ಮತ್ತೊಂದು ನಿಷ್ಕ್ರಿಯವಾದಂತಾಗಿದೆ. ಹೀಗಾಗಿ, ಮೊದಲು ಕಳುಹಿಸಿದ್ದ ಎರಡು ಉಪಗ್ರಹಗಳೊಂದಿಗೆ, 2023ರಲ್ಲಿ ಕಕ್ಷೆ ಸೇರಿಸಿರುವ ಎನ್‌ವಿಎಸ್–01 ಸೇರಿದಂತೆ ಒಟ್ಟು ಮೂರು ಉಪಗ್ರಹಗಳು ಮಾತ್ರ 'ನಾವಿಕ್' ವ್ಯವಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿವೆ.

ಆಧಾರ: ಇಸ್ರೊ ವೆಬ್‌ಸೈಟ್, ಮಾಧ್ಯಮ ವರದಿಗಳು



ಉಡಾವಣೆ ಮಾಡಿದ ಉಪಗ್ರಹಗಳೆಷ್ಟು?

ಸ್ವಂತದ ಪಥದರ್ಶಕ ವ್ಯವಸ್ಥೆಯನ್ನು ಹೊಂದುವ ಪ್ರಯತ್ನವನ್ನು 2000ದಿಂದಲೇ ಭಾರತ ಆರಂಭಿಸಿತ್ತು. ಇದಕ್ಕಾಗಿ ಏಳು ಉಪಗ್ರಹಗಳ ಗುಚ್ಛವನ್ನು ಆಗಸದಲ್ಲಿ ಸ್ಥಾಪಿಸುವ ಯೋಜನೆ ರೂಪಿಸಿದ್ದ ಇಸ್ರೊ, 2013ರ ಜುಲೈ 1ರಂದು ಐಆರ್‌ಎನ್‌ಎಸ್–1ಎ ಉಪಗ್ರಹವನ್ನು ಉಡಾವಣೆ ಮಾಡಿತ್ತು. ಆ ಬಳಿಕ 2016ರವರೆಗೆ ಮತ್ತೆ ಆರು ಉಪಗ್ರಹಗಳನ್ನು (ಐಆರ್‌ಎನ್‌ಎಸ್‌ಎಸ್–1ಬಿ, 1ಸಿ, 1ಡಿ, 1ಇ, 1ಎಫ್, 1ಜಿ) ಕಕ್ಷೆಗೆ ಬಿಟ್ಟಿತ್ತು. 2016ರ ಏಪ್ರಿಲ್‌ನಲ್ಲಿ ಐಆರ್‌ಎನ್‌ಎಸ್‌ಎಸ್–1ಜಿ ಉಪಗ್ರಹವನ್ನು ಉಡಾವಣೆ ಮಾಡುವ ಮೂಲಕ ದೇಶೀಯ ಪಥದರ್ಶಕ ವ್ಯವಸ್ಥೆಯ ಮೊದಲ ಹಂತದ ಯೋಜನೆಯನ್ನು ಇಸ್ರೊ ಪೂರ್ಣಗೊಳಿಸಿತ್ತು. ಆ ಬಳಿಕ ಈ ವ್ಯವಸ್ಥೆಗೆ 'ನಾವಿಕ್' ಎಂಬ ಹೆಸರು ಬಂದಿದ್ದು.

ಈ ಉಪಗ್ರಹಗಳ ಕಾರ್ಯಾಚರಣೆ ಅವಧಿ 10 ವರ್ಷಗಳು. 1ಎ ಉಪಗ್ರಹ ಸ್ವಲ್ಪ ಬೇಗವೇ ಕಾರ್ಯಾಚರಣೆ ಸ್ಥಗಿತಗೊಳಿಸಿತ್ತು. ಹೀಗಾಗಿ, ಅದರ ಬದಲಿಗೆ 2017ರಲ್ಲಿ ಆಗಸ್ಟ್–31ರಂದು ಐಆರ್‌ಎನ್‌ಎಸ್‌ಎಸ್–1ಎಚ್ ಉಪಗ್ರಹವನ್ನು ಇಸ್ರೊ ಉಡಾವಣೆ ಮಾಡಿತ್ತು. ಆದರೆ, ಅದನ್ನು ಕಕ್ಷೆಗೆ ಸೇರಿಸುವಲ್ಲಿ ವಿಫಲವಾಗಿತ್ತು. 2018ರ ಏಪ್ರಿಲ್ 12ರಂದು ಐಆರ್‌ಎನ್‌ಎಸ್‌ಎಸ್ 1ಐ ಉಪಗ್ರಹವನ್ನು ಇಸ್ರೊ ಉಡಾವಣೆ ಮಾಡಿ ಕಕ್ಷೆಯಲ್ಲಿ ಕೂರಿಸಿದೆ. ಈ 'ನಾವಿಕ್'ಗೆ ಇನ್ನಷ್ಟು ಬಲ ತುಂಬುವ ಉದ್ದೇಶದಿಂದ ಇಸ್ರೊ 2023ರಲ್ಲಿ 'ಎನ್‌ವಿಎಸ್–01' ಹೆಸರಿನ ಹೊಸ ಪೀಳಿಗೆಯ ಉಪಗ್ರಹವನ್ನು ಯಶಸ್ವಿಯಾಗಿ ಕಕ್ಷೆಗೆ ಸೇರಿಸಿದೆ. 2025ರ ಜನವರಿಯಲ್ಲಿ 'ಎನ್‌ವಿಎಸ್–02' ಉಪಗ್ರಹದ ಉಡಾವಣೆ ಯಶಸ್ವಿಯಾಗಿದ್ದರೂ ತಾಂತ್ರಿಕ ಕಾರಣದಿಂದ ಅದು ಕಕ್ಷೆಗೆ ಸೇರಲು ವಿಫಲಗೊಂಡಿತ್ತು.

2013ರಿಂದ ಇಲ್ಲಿಯವರೆಗೆ 'ನಾವಿಕ್'ಗಾಗಿ ಇಸ್ರೊ ಒಟ್ಟು 11 ಉಪಗ್ರಹಗಳನ್ನು ಉಡಾವಣೆ ಮಾಡಿದೆ. ಇವುಗಳಲ್ಲಿ ಒಂಬತ್ತು ಮೊದಲ ಪೀಳಿಗೆಯ ಉಪಗ್ರಹಗಳಾಗಿದ್ದರೆ, ಎರಡು ಉಪಗ್ರಹಗಳು ಎರಡನೇ ಪೀಳಿಗೆಯವು.

ಜಿಪಿಎಸ್ ಒಂದೇ ಅಲ್ಲ

ಜಗತ್ತಿನಲ್ಲಿ ನಾಲ್ಕು ಜಾಗತಿಕ ಪಥದರ್ಶಕ ಉಪಗ್ರಹ ವ್ಯವಸ್ಥೆಗಳಿವೆ. ಅವುಗಳೆಂದರೆ, ಅಮೆರಿಕದ 'ಜಿಪಿಎಸ್' (31 ಉಪಗ್ರಹಗಳು), ರಷ್ಯಾದ 'ಜಿಎಲ್‌ಒಎನ್‌ಎಎಸ್‌ಎಸ್' (24 ಉಪಗ್ರಹಗಳು), ಚೀನಾದ 'ಬೈದೊ' (40ಕ್ಕೂ ಹೆಚ್ಚು ಉಪಗ್ರಹಗಳು) ಮತ್ತು ಐರೋಪ್ಯ ಒಕ್ಕೂಟದ ಗೆಲಿಲಿಯೊ (30 ಉಪಗ್ರಹಗಳು).

ಜಪಾನ್ ನಾಲ್ಕು ಉಪಗ್ರಹಗಳನ್ನು ಒಳಗೊಂಡ ಕ್ಯುಜಡ್‌ಎಸ್‌ಎಸ್ ಪ್ರಾದೇಶಿಕ ಪಥದರ್ಶಕ ಉಪಗ್ರಹ ವ್ಯವಸ್ಥೆಯನ್ನು ಒಳಗೊಂಡಿದೆ. ಪ್ರಾದೇಶಿಕ ಪಥದರ್ಶಕ ವ್ಯವಸ್ಥೆ ವ್ಯವಸ್ಥಿತವಾಗಿ ಕಾರ್ಯಾಚರಿಸಲು ಕನಿಷ್ಠ ಮೂರರಿಂದ ನಾಲ್ಕು ಉಪಗ್ರಹಗಳು ಅಗತ್ಯ.

ಭಾರತವು ಮೊದಲು ಪ್ರಾದೇಶಿಕ ಪಥದರ್ಶಕ ಉಪಗ್ರಹ ವ್ಯವಸ್ಥೆ ರೂಪಿಸಿ, ನಂತರ ಅದನ್ನು ಜಾಗತಿಕ ಪಥದರ್ಶಕ ಉಪಗ್ರಹ ವ್ಯವಸ್ಥೆಯಾಗಿ ಪರಿವರ್ತಿಸುವ ಯೋಜನೆ ಹೊಂದಿತ್ತು. ಆದರೆ, ಈಗ ಪ್ರಾದೇಶಿಕ ವ್ಯವಸ್ಥೆಯೇ ಸ್ಥಗಿತಗೊಳ್ಳುವ ಆತಂಕ ಎದುರಾಗಿದೆ.

ಪರಮಾಣು ಗಡಿಯಾರ ಎಂದರೇನು?

ಇದು ಪಥದರ್ಶಕ ಉಪಗ್ರಹದ ಬಹುಮುಖ್ಯ ಭಾಗ. ಅಣುಗಳ ಕಂಪನವನ್ನು ಆಧರಿಸಿ ಸಮಯವನ್ನು ಅತ್ಯಂತ ಖಚಿತವಾಗಿ ಅಳೆಯುವ ತಂತ್ರಜ್ಞಾನವೇ ಪರಮಾಣು ಗಡಿಯಾರ. ಪರಮಾಣುಗಳಲ್ಲಿ ಇರುವ ಎಲೆಕ್ಟ್ರಾನ್‌ಗಳ ಚಲನೆಯನ್ನು ಆಧರಿಸಿ ಸಮಯವನ್ನು ಅಳೆಯಲಾಗುತ್ತದೆ. ಈ ಗಡಿಯಾರಗಳಲ್ಲಿ ಪರಮಾಣುಗಳಲ್ಲಿರುವ ಎಲೆಕ್ಟ್ರಾನ್‌ಗಳನ್ನು ಪ್ರಚೋದಿಸಲಾಗುತ್ತದೆ. ಎಲೆಕ್ಟ್ರಾನ್‌ಗಳಲ್ಲಿ ಬೇರೆ, ಬೇರೆ ಶಕ್ತಿಗಳು ಇರುವುದರಿಂದ ಇವನ್ನು ಒಂದೇ ನೆಲೆಗೆ ತಂದು ಅನಂತರ ಕಾಲವನ್ನು ಅಳೆಯಬೇಕು. ಇದಕ್ಕಾಗಿ ಲೇಸರ್ ಇಲ್ಲವೇ ಮೈಕ್ರೊವೇವ್‌ಗಳನ್ನು ಬಳಸುತ್ತಾರೆ. ಪರಮಾಣು ಗಡಿಯಾರಗಳಲ್ಲಿ ಸಾಮಾನ್ಯವಾಗಿ ಸೀಸಿಯಂ ಮತ್ತು ರುಬಿಡಿಯಂ ಪರಮಾಣುಗಳನ್ನು ಬಳಸುತ್ತಾರೆ.

ಪರಮಾಣು ಗಡಿಯಾರಗಳು ಯಾವುದೇ ಒಂದು ಪಥದರ್ಶಕ ಉಪಗ್ರಹ ವ್ಯವಸ್ಥೆಯ ಹೃದಯವಿದ್ದಂತೆ. ಇದು ವಿಫಲಗೊಂಡರೆ, ಆ ಉಪಗ್ರಹಗಳು ನಿಖರ ಸಮಯವನ್ನು ಅಳೆಯುವುದು ಸಾಧ್ಯವಿಲ್ಲ. ಆರಂಭದಲ್ಲಿ ಭಾರತವು ಪರಮಾಣು ಗಡಿಯಾರಗಳನ್ನು ವಿದೇಶಗಳಿಂದ ತರಿಸಿಕೊಳ್ಳುತ್ತಿತ್ತು. ನಂತರ ಅದರ ಮಹತ್ವ ಅರಿತ ಇಸ್ರೊ, ಸ್ವದೇಶಿ ಪರಮಾಣು ಗಡಿಯಾರಗಳ ತಯಾರಿಕೆಯಲ್ಲಿ ತೊಡಗಿತ್ತು. ಎನ್‌ವಿಎಸ್–01 ನಲ್ಲಿ ದೇಶಿಯಾವಾಗಿ ಅಭಿವೃದ್ಧಿಪಡಿಸಿದ ಗಡಿಯಾರಗಳನ್ನು ಬಳಸಲಾಗಿದೆ.


ಅತ್ಯಂತ ನಿಖರವಾದ ಸಮಯದ ಅಳತೆ ಬೇಡುವ ಪಥದರ್ಶಕ ಉಪಗ್ರಹ ವ್ಯವಸ್ಥೆ, ಸಂಶೋಧನೆ, ದೂರಸಂಪರ್ಕ, ಉದ್ಯಮಗಳು ಮುಂತಾದ ವಲಯಗಳಲ್ಲಿ ಪರಮಾಣು ಗಡಿಯಾರಗಳನ್ನು ಬಳಸುತ್ತಾರೆ.

ರಾಷ್ಟ್ರೀಯ

2014ರಲ್ಲೇ ಮೋದಿ ಜೊತೆಗೆ ಮೈತ್ರಿ ಆರಂಭ: ದೇವೇಗೌಡ

'ಪ್ರಧಾನಿ ನಡೆಯಿಂದ ಪ್ರಭಾವಿತನಾದೆ'

ಪ್ರಜಾವಾಣಿ ವಾರ್ತೆ



ದೇವೇಗೌಡ

ನವದೆಹಲಿ: 'ನನ್ನ ಮತ್ತು ನರೇಂದ್ರ ಮೋದಿ ನಡುವಿನ ಮೈತ್ರಿ 2014ರಲ್ಲಿಯೇ ಆರಂಭವಾಯಿತು. ಮೋದಿ ಅಧಿಕಾರಕ್ಕೆ ಬಂದರೆ ಲೋಕಸಭೆ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ ಎಂದು ಆಗ ನಾನು ಹೇಳಿದ್ದೆ. ಬಿಜೆಪಿ ಗೆದ್ದ ನಂತರ ನಾನು ನಿಜವಾಗಿಯೂ ಸಂಸದ ಸ್ಥಾನಕ್ಕೆ ರಾಜೀನಾಮೆ ಕೊಡಲು ಮುಂದಾದೆ. ಆದರೆ, ಹಾಗೆ ಮಾಡಬೇಡಿ ಎಂದು ಮೋದಿ ತಡೆದರು. ಅವರ ನಡವಳಿಕೆಯಿಂದ ಪ್ರಭಾವಿತನಾದೆ. ಅಂದಿನಿಂದಲೇ ಪರೋಕ್ಷವಾಗಿ ಮೈತ್ರಿ ಶುರುವಾಯಿತು' ಎಂದು ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡ ಹೇಳಿದರು.

'ನಮ್ಮ ಜತೆ ಪ್ರೀತಿ ಹೊಂದಿದ್ದರು, ಮೋದಿ ಅವರ ಜತೆ ಮದುವೆಯಾದರು' ಎಂದು ತಮ್ಮ ಬಗ್ಗೆ ಟೀಕೆ ಮಾಡಿದ್ದ ರಾಜ್ಯಸಭೆ ಪ್ರತಿಪಕ್ಷ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಅವರು ರಾಜ್ಯಸಭೆಯಲ್ಲಿ ಸೋಮವಾರ ತಿರುಗೇಟು ನೀಡಿದರು.

'ನಾನು ಸದನದಲ್ಲಿ ಇಲ್ಲದಿದ್ದ ಸಂದರ್ಭದಲ್ಲಿ ಖರ್ಗೆ ಈ ವಿಷಯ ಪ್ರಸ್ತಾಪಿಸಿದ್ದಾರೆ. ಅವರಿಗೆ, ಅವರ ಪಕ್ಷಕ್ಕೆ ದ್ರೋಹ ಬಗೆದಿದ್ದೇನೆ ಎಂದು ಅರ್ಥ ಬರುವ ರೀತಿಯಲ್ಲಿ ಮಾತನಾಡಿದ್ದಾರೆ. ಆದರೆ, ನಿಜವಾಗಿಯೂ ಕಾಂಗ್ರೆಸ್ ಪಕ್ಷದಿಂದ ದ್ರೋಹ ಆಗಿರುವುದು ನಮಗೆ, ನಮ್ಮ ಪಕ್ಷಕ್ಕೆ' ಎಂದು ಹರಿಹಾಯ್ದರು.

'ಕಾಂಗ್ರೆಸ್ ಪಕ್ಷವು ನಮ್ಮ ಪಕ್ಷಕ್ಕೆ ಒಂದಲ್ಲ, ಎರಡಲ್ಲ, ಅನೇಕ ಬಾರಿ ದ್ರೋಹ ಮಾಡಿದೆ. ಅದರ ಬಗ್ಗೆ ನಾನು ಸಾಕ್ಷಿ ಸಹಿತವಾಗಿ ಮಾತನಾಡಬಲ್ಲೆ. ಅದೆಲ್ಲವನ್ನೂ ಮರೆಮಾಚಲು ಖರ್ಗೆ ನನ್ನ ವಿಷಯ ಎಳೆದು ತಂದಿದ್ದಾರೆ' ಎಂದು ಅವರು ಹೇಳಿದರು.


'ನಿಜಲಿಂಗಪ್ಪ, ದೇವರಾಜ ಅರಸು, ಬಂಗಾರಪ್ಪ ಅವರಿಗೆ ಏನಾಯಿತು ಎಂಬುದು ಖರ್ಗೆ ಅವರಿಗೂ ಗೊತ್ತಿದೆ. ಅವರು ಹೇಗೆ ಅಧಿಕಾರ ಕಳೆದುಕೊಂಡರು ಎಂಬುದನ್ನು ಖರ್ಗೆ ಹೇಳಬೇಕಾಗುತ್ತದೆ. ಅವರೆಲ್ಲರೂ ಅಧಿಕಾರ ಕಳೆದುಕೊಂಡಿದ್ದಕ್ಕೆ ನಾವು ಸಾಕ್ಷಿಗಳಾಗಿದ್ದೆವು' ಎಂದು ಟೀಕಾಪ್ರಹಾರ ನಡೆಸಿದರು.

1962ರಲ್ಲಿ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸಲು ಉದ್ದೇಶಿಸಿದ್ದೆ. ಕಾಂಗ್ರೆಸ್ ಪಕ್ಷ ನನಗೆ ಟಿಕೆಟ್ ಕೊಡುವುದಾಗಿ ಹೇಳಿತ್ತು. ನೀಲಂ ಸಂಜೀವರೆಡ್ಡಿ ಎಐಸಿಸಿ ಅಧ್ಯಕ್ಷರಾಗಿದ್ದರು. ಆದರೆ, ನನಗೆ ಕಾಂಗ್ರೆಸ್ ಟಿಕೆಟ್ ನಿರಾಕರಿಸಿತ್ತು. ನನ್ನ ರಾಜಕೀಯದ ಅಂತ್ಯಕಾಲದಲ್ಲಿ ನಾನಿದ್ದೇನೆ. ಇನ್ನೊಂದು ತಿಂಗಳಲ್ಲಿ ರಾಜ್ಯಸಭಾ ಸದಸ್ಯತ್ವ ಮುಗಿಯುತ್ತದೆ. ಹೀಗಾಗಿ, ನಾನು ಖರ್ಗೆ ಪ್ರಶ್ನೆಗೆ ಉತ್ತರ ಕೊಡಬೇಕಿದೆ ಎಂದರು.

ಕೈಗಾರಿಕಾ ವಲಯದ ಬಗ್ಗೆ ಕರ್ನಾಟಕದ ಕಾಂಗ್ರೆಸ್ ಸರ್ಕಾರ ನಿರ್ಲಕ್ಷ್ಯ ತೋರುತ್ತಿದೆ ಎಂದು ಆರೋಪಿಸಿದ ಅವರು, ರಾಜ್ಯದಲ್ಲಿ ಕೈಗಾರಿಕೆಗಳನ್ನು ಪುನರುಜ್ಜೀವನಗೊಳಿಸಲು ಕೇಂದ್ರ ಸರ್ಕಾರ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಮನವಿ ಮಾಡಿದರು.

ಪಂಜಾಬ್ ಮಾಜಿ ಸಚಿವ ಭುಲ್ಲಾರ್ ಬಂಧನ

ಆತ್ಮಹತ್ಯೆಗೆ ಪ್ರಚೋದನೆ ಆರೋಪ



ಭುಲ್ಲಾರ್

ಚಂಡೀಗಢ (ಪಿಟಿಐ): ರಾಜ್ಯ ಉಗ್ರಾಣ ನಿಗಮದ ಅಧಿಕಾರಿಯ ಆತ್ಮಹತ್ಯೆಗೆ ಪ್ರಚೋದನೆ ನೀಡಿದ ಆರೋಪದಡಿ ಪಂಜಾಬ್ ಮಾಜಿ ಸಚಿವ, ಎಎಪಿ ಶಾಸಕ ಲಾಲಜಿತ್ ಸಿಂಗ್ ಭುಲ್ಲಾರ್ ಅವರನ್ನು ಸೋಮವಾರ ಬಂಧಿಸಲಾಗಿದೆ.

ಅಮೃತಸರದಲ್ಲಿರುವ ರಾಜ್ಯ ಉಗ್ರಾಣ ನಿಗಮದ ಜಿಲ್ಲಾ ವ್ಯವಸ್ಥಾಪಕರಾಗಿದ್ದ ಗಗನ್‌ದೀಪ್ ಸಿಂಗ್ ರಾಂಧವ ಅವರು ಶನಿವಾರ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದರು.

ಲಾಲಜಿತ್ ಸಿಂಗ್ ಕಿರುಕುಳದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ, ಸಾಯುವ ಮೊದಲು ಮಾಡಿದ್ದ ವಿಡಿಯೊದಲ್ಲಿ ಗಗನ್‌ದೀಪ್ ಆರೋಪಿಸಿದ್ದರು. ಈ ಆರೋಪದ ಬೆನ್ನಲ್ಲೆ, ಮುಖ್ಯಮಂತ್ರಿ ಭಗವಂತ್ ಮಾನ್ ಸೂಚನೆಯಂತೆ ಲಾಲಜಿತ್ ಸಿಂಗ್ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

ಪ್ರಕರಣ ಸಂಬಂಧ ಲಾಲಜಿತ್, ಅವರ ತಂದೆ ಸುಖ್‌ದೇವ್ ಸಿಂಗ್ ಭುಲ್ಲಾರ್ ಮತ್ತು ಆಪ್ತಸಹಾಯಕ ದಿಲ್‌ಬಾಗ್ ಸಿಂಗ್ ಅವರ ವಿರುದ್ಧ ಶನಿವಾರ ಪ್ರಕರಣ ದಾಖಲಾಗಿತ್ತು.

24 ಗಂಟೆಯೊಳಗೆ ಭುಲ್ಲಾರ್ ಅವರನ್ನು ಬಂಧಿಸುವಂತೆ ಮೃತ ಗಗನ್‌ದೀಪ್ ಅವರ ಕುಟುಂಬಸ್ಥರು ಆಗ್ರಹಿಸಿದ್ದರು.

ಪಿಟಿಐ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಸಾಮಾಜಿಕ ಜಾಲತಾಣಗಳ ಹಲವು ಬಳಕೆದಾರರು ಜನರ ನೂಕುನುಗ್ಗಲಿನ ವಿಡಿಯೊವೊಂದನ್ನು ಹಂಚಿಕೊಳ್ಳುತ್ತಿದ್ದಾರೆ. 'ಇದು ಚಿತ್ರಮಂದಿರದ ಹೊರಗಿನ ದೃಶ್ಯವಾಗಿದ್ದು, ಜನ 'ದುರಂಧರ್– ದಿ ರಿವೆಂಜ್' ಚಿತ್ರವನ್ನು ನೋಡಲು ದೌಡಾಯಿಸುತ್ತಿದ್ದಾರೆ. ರಣವೀರ್ ಸಿಂಗ್ ತನ್ನ ಶಕ್ತಿ ಮತ್ತು ಅಭಿನಯದಿಂದ ಚಿತ್ರಮಂದಿರವನ್ನು ಆವರಿಸಿದ್ದಾನೆ. ಪ್ರಸ್ತುತ ಇದಕ್ಕಿಂತ ದೊಡ್ಡ ಅಲೆ ಯಾವುದಾದರೂ ಇದೆಯೇ?' ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.



ಇನ್‌ವಿಡ್ ಟೂಲ್‌ನಿಂದ ವಿಡಿಯೊದ ಕೀಫ್ರೇಮ್‌ಗಳನ್ನು ಪ್ರತ್ಯೇಕಿಸಿ, ಒಂದು ಕೀಫ್ರೇಮ್ ಅನ್ನು ಗೂಗಲ್ ಲೆನ್ಸ್ ಮೂಲಕ ಪರಿಶೀಲಿಸಿದಾಗ, ಹಲವು ಬಳಕೆದಾರರು ಇದೇ ವಿಡಿಯೊ ಅನ್ನು ಹಂಚಿಕೊಂಡಿರುವುದು ಕಂಡಿತು. ಜತೆಗೆ, ಈ ಹುಡುಕಾಟವು ಆ್ಯನಿ ಎನ್ನುವ 'ಎಕ್ಸ್' ಬಳಕೆದಾರರು ತಮ್ಮ ಖಾತೆಯಲ್ಲಿ ಹಂಚಿಕೊಂಡಿದ್ದ ಇಂಥದೇ ವಿಡಿಯೊಕ್ಕೆ ಸಂಪರ್ಕ ಕಲ್ಪಿಸಿತು. 2023 ಆ.13ರಂದು ಅಪ್‌ಲೋಡ್ ಮಾಡಲಾಗಿದ್ದ ವಿಡಿಯೊ ಅದು. ಬೆಂಗಳೂರಿನಲ್ಲಿ 'ಗದಾರ್ 2' ಪ್ರದರ್ಶನವಾಗುತ್ತಿದ್ದ ಚಿತ್ರಮಂದಿರದ ಹೊರಗೆ ಕಂಡ ದೃಶ್ಯ ಅದು ಎಂದು ಪೋಸ್ಟ್‌ನಲ್ಲಿ ಉಲ್ಲೇಖಿಸಲಾಗಿತ್ತು. ಚಿತ್ರಮಂದಿರದ ಬಾಗಿಲು ತೆರೆಯುವುದಕ್ಕಾಗಿ ಜನ ಹೊರಗೆ ಕಾಯುತ್ತಿದ್ದ ಮತ್ತೊಂದು ವಿಡಿಯೊ ಅನ್ನೂ ಇದೇ ಬಳಕೆದಾರ ಹಂಚಿಕೊಂಡಿದ್ದರು. ಹಳೆಯ ವಿಡಿಯೊ ಅನ್ನು ಹಂಚಿಕೊಳ್ಳುವುದರ ಮೂಲಕ ಕೆಲವರು ಸುಳ್ಳು ಪ್ರತಿಪಾದನೆ ಮಾಡುತ್ತಿದ್ದಾರೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಸಹಕಾರದ ಫಲ



ನುಡಿ ಬೆಳಗು

ದೀಪಾ ಹಿರೇಗುತ್ತಿ

ರೂಹಿ ಎಂಬ ಎರಡನೇ ತರಗತಿಯ ಹುಡುಗಿಯ ಜಾಮೆಟ್ರಿ ಬಾಕ್ಸಿನಲ್ಲಿ ಪೆನ್ಸಿಲ್, ಒಂದು ರಬ್ಬರ್, ಒಂದು ನೀಲಿ ಶಾಯಿಯ ಪೆನ್ನು, ಒಂದು ಕಪ್ಪು ಶಾಯಿಯ ಪೆನ್ನು, ಒಂದು ಶಾರ್ಪನರ್ ಇದ್ದವು. ರೂಹಿಯ ಜತೆ ದಿನವೂ ಅವೆಲ್ಲ ಶಾಲೆಗೆ ಹೋಗುತ್ತಿದ್ದವು.

ಅಷ್ಟು ವಸ್ತುಗಳಲ್ಲಿ ಪೆನ್ಸಿಲ್ಲಿಗೆ ಬಹಳ ಜಂಭ. ತಾನು ಈ ಜಾಮೆಟ್ರಿ ಬಾಕ್ಸಿನ ಅತ್ಯಂತ ಪ್ರಮುಖ ವಸ್ತು. ತಾನಿಲ್ಲದೆ ಇದ್ದರೆ ಬರೆಯಲಾಗದು, ಚಿತ್ರ ಬಿಡಿಸಲಾಗದು, ಗಣಿತ ಮಾಡಲಾಗದು ಎನ್ನುತ್ತಿತ್ತು.

ಇಂಚಿನಪಟ್ಟಿ ತಲೆದೂಗಿತು. ಕಪ್ಪು ಮತ್ತು ನೀಲಿ ಶಾಯಿಯ ಪೆನ್ನುಗಳು ಪರಸ್ಪರ ಮುಖ ನೋಡಿಕೊಂಡವು. ಆದರೆ ಸಣ್ಣ ರಬ್ಬರ್ ಮಾತಾಡಲಿಲ್ಲ. ಇನ್ನೊಂದು ದಿನ ಪೆನ್ಸಿಲ್ ತನ್ನ ಬಗ್ಗೆ ಹೇಳಿಕೊಳ್ಳುತ್ತ, 'ಆಹಾ ಎಷ್ಟು ಚೆಂದ ಚೆಂದದ ಚಿತ್ರ ಬಿಡಿಸಿದ್ದೇನೆ ನಾನು, ನಾನಿಲ್ಲದಿದ್ದರೆ ಈ ಶಾಲೆ ಎಷ್ಟು ಬೇಜಾರು ತರಿಸುತ್ತಿತ್ತು ಮಕ್ಕಳಿಗೆ ಅಲ್ಲವಾ, ನಾನೇ ಜಾಮೆಟ್ರಿ ಬಾಕ್ಸ್‌ನ ಹೀರೋ' ಎಂದಿತು. ಆಗ ರಬ್ಬರ್, 'ಹೌದು, ನೀನು ಬಹಳ ಉಪಯೋಗಕಾರಿ. ಆದರೆ ಎಲ್ಲರೂ ಕೆಲವೊಮ್ಮೆ ತಪ್ಪು ಮಾಡುತ್ತಾರಲ್ಲ' ಅಂದಿತು.

ಆಗ ಪೆನ್ಸಿಲ್, 'ನಾನು ತಪ್ಪು ಮಾಡಲ್ಲಪ್ಪ' ಅಂದಿತು. ಮರುದಿನ ರೂಹಿ ಶಾಲೆಯಲ್ಲಿ ಗಣಿತ ಮಾಡುವಾಗ ತಪ್ಪು ಸಂಖ್ಯೆ ಬರೆದಳು. ತಕ್ಷಣ ರಬ್ಬರ್ ತೆಗೆದುಕೊಂಡು ಅಳಿಸಿದಳು. ನಂತರ ಪೆನ್ಸಿಲ್ ತೆಗೆದುಕೊಂಡು ಹೊಸದಾಗಿ ಬರೆದಳು. ನಂತರ ಇಂಗ್ಲಿಷ್ ತರಗತಿಯಲ್ಲಿ ಮೊಂಡಾದ ಪೆನ್ಸಿಲ್ಲನ್ನು ಶಾರ್ಪನರ್ ತೆಗೆದುಕೊಂಡು ಚೂಪು ಮಾಡಿದಳು ರೂಹಿ. ಅದೇ ಗಡಿಬಿಡಿಯಲ್ಲಿ ಒಂದು ತಪ್ಪು ಸ್ಪೆಲ್ಲಿಂಗ್ ಬರೆದಳು ಕೂಡ. ಮತ್ತೆ ರಬ್ಬರ್ ಮೌನವಾಗಿ ಅದನ್ನು ಅಳಿಸಿತು.


ಸಂಜೆ ಪೆನ್ಸಿಲ್ ರಬ್ಬರ್ ಕಡೆ ನೋಡಿ ಮೃದುವಾಗಿ, 'ನನಗೀಗ ಅರ್ಥವಾಯಿತು. ನಾನು, ನಾನೇ ಮುಖ್ಯ ಅಂದುಕೊಂಡಿದ್ದೆ. ನೀನಿಲ್ಲದೆ ನನ್ನ ತಪ್ಪುಗಳು ಹಾಗೆಯೇ ಉಳಿದುಕೊಂಡು ಬಿಡುತ್ತಿದ್ದವು ಎಂಬುದನ್ನು ಮರೆತುಬಿಟ್ಟಿದ್ದೆ', ಶಾರ್ಪನರ್ ಕಡೆ ತಿರುಗಿ 'ನೀನಿಲ್ಲದಿದ್ದರೆ ನಾನು ಬರೆಯಲು ಸಾಧ್ಯವೇ ಆಗುತ್ತಿರಲಿಲ್ಲ ಇಬ್ಬರೂ ನನ್ನನ್ನು ಕ್ಷಮಿಸಿ' ಅಂದಿತು.

ರಬ್ಬರ್ ವಿನಯದಿಂದ ನಕ್ಕಿತು. 'ಇಲ್ಲಿ ಪ್ರತಿಯೊಬ್ಬರಿಗೂ ಒಂದು ಪಾತ್ರವಿದೆ. ನೀನು ಸೃಷ್ಟಿಸಿದರೆ ನಾನದನ್ನು ಸರಿಪಡಿಸಲು ಸಹಾಯ ಮಾಡುತ್ತೇನೆ. ನಾವಿಬ್ಬರೂ ಸೇರಿ ಕೆಲಸವನ್ನು ಸುಲಭಗೊಳಿಸುತ್ತೇವೆ, ಉತ್ತಮಗೊಳಿಸುತ್ತೇವೆ, ಅಲ್ಲವೇ' ಎಂದಿತು. ಆಗ ಇಂಚಿನ ಪಟ್ಟಿ 'ಹೇಯ್, ನಾನು ಎಲ್ಲವನ್ನೂ ನೆಟ್ಟಗಿಡುತ್ತೇನೆ' ಅಂದಿತು. ಜಾಮೆಟ್ರಿ ಬಾಕ್ಸ್‌ನಲ್ಲಿರುವ ವಸ್ತುಗಳೆಲ್ಲ ಮನಸಾರೆ ನಕ್ಕವು.

ಅವತ್ತಿನಿಂದ ಪೆನ್ಸಿಲ್ ಯಾವತ್ತೂ ತನ್ನನ್ನು ತಾನು ಹೊಗಳಿಕೊಳ್ಳಲಿಲ್ಲ. ತಂಡವಾಗಿ ಕೆಲಸ ಮಾಡುವುದು ಎಷ್ಟು ಮುಖ್ಯ ಅನ್ನುವುದು ಅದಕ್ಕೆ ಗೊತ್ತಾಗಿತ್ತು.

ಬದುಕಿನಲ್ಲೂ ಅಷ್ಟೇ. ಜನರು ತಮ್ಮ ಪ್ರತಿಭೆ, ಸಾಧನೆ, ಸ್ಥಾನಮಾನದ ಬಗ್ಗೆ ಹೆಮ್ಮೆ ಪಡುತ್ತಾರೆ. ಮತ್ತೂ ಕೆಲವರು ಅಹಂಕಾರ ಪಡುತ್ತಾರೆ. ಆದರೆ ಯಾರೊಬ್ಬರೂ ಪರಿಪೂರ್ಣರಲ್ಲ, ನಮ್ಮ ತಪ್ಪುಗಳನ್ನು ಮತ್ಯಾರೋ ತಿದ್ದುತ್ತಿರುತ್ತಾರೆ ಎಂಬುದನ್ನು ಮರೆತುಬಿಡುತ್ತಾರೆ. ಶಿಕ್ಷಕರು, ಪಾಲಕರು, ಸ್ನೇಹಿತರು, ಸಹೋದ್ಯೋಗಿಗಳು ಒಬ್ಬರಲ್ಲ ಒಬ್ಬರು ಸಹಾಯ ಮಾಡುತ್ತಿರುತ್ತಾರೆ. ಹಾಗಾಗಿ, ನಮ್ಮ ಕೆಲಸದ ಬಗ್ಗೆ ಮಾತ್ರ ಹೇಳಿಕೊಳ್ಳದೇ ವಿನೀತ ಭಾವದಿಂದ ಇರುವುದು ಮತ್ತು ಇತರರ ಪಾತ್ರಗಳನ್ನೂ ಗುರುತಿಸಿ ಗೌರವಿಸುವುದರಿಂದ ನಮ್ಮ ಬೆಳವಣಿಗೆಯಾಗುತ್ತದೆ. ಯಶಸ್ಸು ಎಂದರೆ ಪರಿಪೂರ್ಣತೆಯಲ್ಲ, ಕಲಿಯುತ್ತ ಹೋಗುವುದು, ತಪ್ಪುಗಳನ್ನು ತಿದ್ದಿಕೊಳ್ಳುವುದು ಮತ್ತು ಒಟ್ಟಾಗಿ ಸಾಗುವುದು. ❖

ಗುಂಡಣ್ಣ



ಪದಬಂಧ 6352


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಜಟಕಾಬಂಡಿ ಎಂದೆನಿಸುವ ಜೀವನ (3)
3.ದ್ವೇಷ ಈ ರೀತಿ ಬಂದಿದೆ (3)
4.ಬತ್ತಳಿಕೆಯನ್ನು ಹೀಗೂ ಹೇಳುತ್ತಾರೆ (3)
6.ಕುರುಡಿಯ ಹತ್ತಿರ ಕಾಣಿಸಿದ ಚಿಗುರು (2)
7.ಭವನದ ಮೇಲಿಂದ ವೀಕ್ಷಿಸಿರುವ ಆಕಾಶ (2)
11.ಸಂಯಮದಿಂದ ನಿಂತಿರುವ ಮೃತ್ಯುದೇವತೆ (2)
13.ಮನಸ್ಸು ಇಲ್ಲಿ ಚಿಕ್ಕದಾಗಿದೆಯಲ್ಲಾ! (2)
14.ದಂಪತಿ ಹಬ್ಬಿಸಿದ ಗಾಳಿಸುದ್ದಿಯಿಲ್ಲಿ ಉಲ್ಟಾ ಆಗಿದೆ (3)
15.ಕೆಟ್ಟ ಅಥವಾ ಒಳ್ಳೆಯ ನಾತ (3)
16.ಹಿಸ್ಸೆಯುಳ್ಳ ಅಂಚೆ! (3)

ಮೇಲಿಂದ ಕೆಳಕ್ಕೆ

1.ಸಭೆ ಮುಂತಾದವುಗಳನ್ನು ಮುಕ್ತಾಯಗೊಳಿಸುವುದು (4)
2.ಕುಲದಲ್ಲಿ ವಿಸ್ಮಯವೇ? (4)
3.ನೈರ್ಮಲ್ಯದ ಪಾತಿ (2)
5.ಮನುಜನಿಲ್ಲಿ ಉಲ್ಟಾ ನಿಂತಿದ್ದಾನಲ್ಲಾ (2)
6.ವಂಚನೆಯ ಯುಕ್ತಿ (5)
8.ಸಂಸಾರದ ಸೆರೆಯಿದು (5)
9.ತಟದಲ್ಲಿದ್ದವ ಮಾಡಿದ ಮೋಸ (4)
10.ಕೊನೆಗೆ ವಾಲುತ್ತಾ ಮಾಡಿದ ಮನವಿ! (4)
12.ಬುದ್ಧಿ ಇಲ್ಲದೆ (2)
13.ಮನದನ್ನೆ ಇರುವ ಆಲಯ! (2)



6351ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆಡಂಬರ 3.ನವನೀತ 5.ವಿವರ 6.ಕದಪು 8.ಸದ್ಗತಿ 9.ರಸಿಕ 10.ಸಮೂಹ 14.ಗರುಡ 15.ಸರಸ್ವತಿ 16.ಸುಮಬಾಣ

ಮೇಲಿಂದ ಕೆಳಕ್ಕೆ:
1.ಆಗಮಿಕ 2.ರವಿಕೆ 3.ನರಳು 4.ತರಗತಿ 7.ಪುಸ್ತಕ 8.ಸರಸ 9.ರಸಾಭಾಸ 11.ಹರಿವಾಣ 12.ಸಂಗತಿ 13.ಕಡಸು

ಸುಡೊಕು 6736

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	8	1		9		5	2	
6		5						
			1		5		7	6
		4	8		3		5	
	5					1		9
2				5			6	
1			9					
	3			7		6		1
8		6		3	1		9	

6735 ಸುಡೊಕು

4	9	3	7	2	8	6	5	1
8	6	2	1	4	5	7	9	3
5	7	1	9	3	6	2	4	8
2	4	6	3	5	1	8	7	9
1	3	7	2	8	9	4	6	5
9	8	5	4	6	7	3	1	2
7	2	8	5	1	4	9	3	6
6	1	9	8	7	3	5	2	4
3	5	4	6	9	2	1	8	7

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

24 ಮಾರ್ಚ್ 2026 ಮಂಗಳವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುಕ್ಲ ಷಷ್ಠಿ ಗಂ. 16-08 ನಕ್ಷತ್ರ: ರೋಹಿಣಿ ಗಂ. 19-05 ಯೋಗ: ಪ್ರೀತಿ ಗಂ. 9-08 ಕರಣ: ತೈತಿಲ ಗಂ. 16-08 ಮೀನ ಮಾಸದ 10 ನೇ ದಿನ. ಮಳೆ ನಕ್ಷತ್ರ : ಉತ್ತರಾಭಾದ್ರ 2 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30, ಸೂರ್ಯೋದಯ : 06-35 ಸೂರ್ಯಾಸ್ತ : 06-38, ಮುಸ್ಲಿಂ ದಿನಾಂಕ : 4 ಶವ್ವಾಲ್, ದಿನ ವಿಶೇಷ : ಸ್ಕಂದ ಷಷ್ಠಿ, ಅದೃಷ್ಟ ಸಂಖ್ಯೆ : 8, 10

ಮೇಷ: ಆಹಾರ ಪದ್ಧತಿಯಿಂದ ರಕ್ತದೊತ್ತಡ ಸಮಸ್ಥಿತಿಗೆ ಬರುವಂತೆ ಮಾಡಿಕೊಳ್ಳಿ. ವಿದೇಶದಿಂದ ಸ್ನೇಹಿತರ ಆಗಮನ ಸಂತೋಷ ತರಲಿದೆ. ಆರ್ಥಿಕ ಪರಿಸ್ಥಿತಿಯು ಸುಧಾರಿಸುವುದು.

ವೃಷಭ: ಸಮಸ್ಯೆಗಳನ್ನು ನಾಜೂಕಾಗಿ ಬಗೆಹರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೆ ವಿದ್ಯಾರ್ಜನೆಯಲ್ಲಿ ಪ್ರಗತಿ ಉಂಟಾಗಲಿದೆ. ಮೂಳೆಗೆ ಸಂಬಂಧಿಸಿದ ಸಮಸ್ಯೆಯನ್ನು ನಿರ್ಲಕ್ಷಿಸಬೇಡಿ.

ಮಿಥುನ: ಸ್ನೇಹಿತರಿಗೆ ಸ್ವಯಂಪ್ರೇರಣೆಯಿಂದ ವ್ಯವಹಾರಕ್ಕೆ ಸಂಬಂಧಪಟ್ಟ ಸಲಹೆ ಕೊಡುವುದು ಸರಿಯಲ್ಲ. ಜ್ವರ ಅಥವಾ ಅಲರ್ಜಿ ಉಂಟಾಗಬಹುದು. ಮನಃಶಾಸ್ತ್ರಜ್ಞರಿಗೆ ಬೇಡಿಕೆ ಹೆಚ್ಚಲಿದೆ.

ಕರ್ಕಾಟಕ: ವಿಷಜಂತುಗಳ ಅಥವಾ ಕಾಡುಪ್ರಾಣಿಗಳಿಂದ ತೊಂದರೆ ಆಗಬಹುದು. ಯಾವುದೇ ವಿಷಯದಲ್ಲಿ ಆಲಸ್ಯ ಮಾಡುವುದು ಸರಿಯಲ್ಲ. ಅಧಿಕಾರಿಗಳಿಗೆ ಬೇಡಿಕೆಗಳನ್ನು ಸ್ಪಷ್ಟವಾಗಿ ತಿಳಿಸಿ.

ಸಿಂಹ: ನಿವೇಶನ ಮಾರಾಟದಿಂದ ಲಾಭ ಕಾಣುವಿರಿ. ಹಣಕಾಸಿನ ಚಿಂತೆಗಳು, ಸಾಲ ದೂರವಾಗಿ ಆರ್ಥಿಕವಾಗಿ ವೃದ್ಧಿ ಕಾಣಲಿದ್ದೀರಿ. ಮಕ್ಕಳ ವರ್ತನೆ ಮನಸ್ಸಿಗೆ ಸಂತೋಷ ತಂದುಕೊಡಲಿದೆ.

ಕನ್ಯಾ: ಕೆಲಸ ಕಾರ್ಯಗಳಿಗೆ ದೇವತಾ ಅನುಗ್ರಹ ಕಡಿಮೆ ಇರುವುದರಿಂದ ಕಾರ್ಯ ಸಾಧನೆಗೆ ಪರಿಶ್ರಮ ಬೇಕಾಗುತ್ತದೆ. ಅನಿರೀಕ್ಷಿತವಾಗಿ ನಡೆಯುವ ಕೆಲಸಗಳಿಂದ ಸಂತಸ ಹೆಚ್ಚುವುದು.

ತುಲಾ: ಹಿರಿಯರ ಆರೋಗ್ಯದಲ್ಲಿ ವ್ಯತ್ಯಾಸ ಕಂಡುಬರಲಿದೆ. ಎಂಥ ಪರಿಸ್ಥಿತಿಯನ್ನಾದರೂ ನಿಭಾಯಿಸುವ ಸಾಮರ್ಥ್ಯ ದುರ್ಗಾ ಪರಮೇಶ್ವರಿ ಆರಾಧನೆ ಮಾಡುವುದರಿಂದ ಪ್ರಾಪ್ತಿ.

ವೃಶ್ಚಿಕ: ತಾಂತ್ರಿಕ ವಿದ್ಯೆಯನ್ನು ವ್ಯಾಸಂಗ ಮಾಡುವವರಿಗೆ ಫಲಿತಾಂಶ ಲಭಿಸಿ ಸಂತೋಷವಾಗುವುದು. ಬಹುಜನರಲ್ಲಿ ಮಾಡಿದ ಸಾಲಗಳು ತೀರಿದ್ದರಿಂದ ನೆಮ್ಮದಿಯ ವಾತಾವರಣ ಸೃಷ್ಟಿಯಾಗಲಿದೆ.


ಧನು: ವಾಣಿಜ್ಯ ಕ್ಷೇತ್ರದ ವಿದ್ಯಾರ್ಥಿಗಳಿಗೆ ಶುಭ ಸಮಯವಾಗಿದ್ದು ಅವರು ಪಟ್ಟ ಶ್ರಮಕ್ಕೆ ಹೆಚ್ಚಿನ ಅಂಕ ಪಡೆದು ತಮ್ಮ ಗುರಿ ಮುಟ್ಟುವ ಸಾಧ್ಯತೆಗಳಿವೆ. ಸುಖ-ದುಃಖ, ನೋವು, ಅನಾರೋಗ್ಯ, ಲಾಭ-ನಷ್ಟಗಳ ಮಿಶ್ರಣಫಲ ಇರುತ್ತದೆ.

ಮಕರ: ನೂತನ ಮನೆ ನಿರ್ಮಾಣ ಅಥವಾ ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕ ವಾತಾವರಣ ಸ್ನೇಹಿತರಿಂದ ಸಿಗಲಿದೆ. ಆರೋಗ್ಯದಲ್ಲಿ ಏರುಪೇರಾದರೂ ಆರ್ಥಿಕ ಬೆಳವಣಿಗೆ ಖಂಡಿತ ಸಾಧ್ಯವಿದೆ.

ಕುಂಭ: ಮಿತ್ರವೃಂದದಲ್ಲಿ ಕಂಡು ಬರುವ ಗೊಂದಲ ಹಾಗೂ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಿಕೊಡುವುದರಲ್ಲಿ ಯಶಸ್ವಿಯಾಗುವಿರಿ. ಸಕಾರಾತ್ಮಕ ಮನೋಭಾವದಿಂದ ಮತ್ತು ಮಾತುಗಾರಿಕೆಯಿಂದ ಎಲ್ಲರ ಮನಸ್ಸು ಗೆಲ್ಲುವಿರಿ.

ಮೀನ: ರಾಜಕೀಯ ವ್ಯಕ್ತಿತ್ವವನ್ನು ಹೊಂದಿರುವ ನಿಮಗೆ ಜನರ ಭಾವನೆಗಳಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸಬೇಕೆಂಬುದು ಚೆನ್ನಾಗಿ ತಿಳಿದಿದೆ. ಗುರಿ ಮುಟ್ಟುವ ಬಗ್ಗೆ ನಿಮ್ಮ ಶ್ರಮವಿರಲಿ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	23,114
ಇಂದಿನ ಅಂತ್ಯ:	22,512
ದಿನದ ಕನಿಷ್ಠ:	22,471
	601

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100 ಕ್ಕೆ	₹465
12 ಕ್ಕೆ	₹72
ಮೈಸೂರು: 100 ಕ್ಕೆ	₹470

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹212
ಆರ್‌ಎಸ್‌ಎಸ್-5	₹206
ಗುಡ್ ಲಾಟ್	₹188

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹400-766
ದ್ವಿತಳಿ (ಬಿ.ವಿ)	₹302-870

ಮುದ್ರೆಮನೆ ಕಾಫಿ

ಎಪಿ	₹23750
ಎಸಿ	₹13580
ಆರ್‌ಪಿ	₹18650
ಆರ್‌ಸಿ	₹10100

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1780 (1760)
ಸೋಯಾ (ರಿಫೈನ್ಡ್)	₹1530 (1505)
ಸೂರ್ಯಕಾಂತಿ (ರಿಫೈನ್ಡ್)	₹1725 (1735)
ಪಾಮೋಲಿನ್	₹1440 (1445)

ಮುಂಬೈ ಧಾರಣೆ (ಶೇಂಗಾ)

23-03-2026

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1790 (1770)
ಒಂದು ವಾರದ ಡೆಲಿವರಿ	1785 (1765)
ಪಾಮ್ ವಾರದ ಡೆಲಿವರಿ	1438 (1443)
ಸೂರ್ಯಕಾಂತಿ ಎಣ್ಣೆ ಕಚ್ಚಾ	1600 (1605)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,41,000 (1,43,500)
ಬೆಳ್ಳಿ ಕೆ.ಜಿಗೆ	2,25,000 (2,25,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

‘ಕರಡಿ ಕುಣಿತ’ದ ಸೋಮವಾರ

ಮಾರ್ಚ್ ಆರಂಭದಿಂದ 23ರವರೆಗೆ ಸೆನ್ಸೆಕ್ಸ್ 8,590, ನಿಫ್ಟಿ 2,666 ಅಂಶ ಕುಸಿತ

ಪ್ರಜಾವಾಣಿ ವಾರ್ತೆ/ಪಿಟಿಐ



ನವದೆಹಲಿ: ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ಯುದ್ಧವು ನಿಲ್ಲುವ ಸೂಚನೆಗಳು ಇಲ್ಲದ ಕಾರಣದಿಂದಾಗಿ ದೇಶದ ಷೇರುಪೇಟೆಗಳ ವಹಿವಾಟು ಸೋಮವಾರ ಬಹಳ ಕೆಟ್ಟದ್ದಾಗಿತ್ತು. ‘ಕರಡಿ ಕುಣಿತ’ಕ್ಕೆ ಷೇರುಪೇಟೆ ತತ್ತರಿಸಿತು.

ಜಾಗತಿಕ ಷೇರುಪೇಟೆಗಳಲ್ಲಿ ಕಂಡುಬಂದ ನಿರಾಶಾದಾಯಕ ವಹಿವಾಟು ಭಾರತದ ಮೇಲೆಯೂ ಪರಿಣಾಮ ಬೀರಿತು. ಇದರಿಂದಾಗಿ ಹೂಡಿಕೆದಾರರ ಸಂಪತ್ತು ಲಕ್ಷಾಂತರ ಕೋಟಿ ಮೊತ್ತದಲ್ಲಿ ಕರಗಿತು. ಕಚ್ಚಾ ತೈಲದ ಬೆಲೆ ಏರಿಕೆ ಹಾಗೂ ವಿದೇಶಿ ಹೂಡಿಕೆದಾರರು ಬಂಡವಾಳ ವನ್ನು ಹಿಂತೆಗೆದುಕೊಳ್ಳುವುದು ನಿಲ್ಲದಿರುವುದು ಷೇರುಪೇಟೆ ಸೂಚ್ಯಂಕಗಳ ಕುಸಿತಕ್ಕೆ ಇಂಬು ಕೊಟ್ಟವು.

ವಿವಿಧ ವಲಯಗಳ ಮೂವತ್ತು ಕಂಪನಿಗಳನ್ನು ಪ್ರತಿನಿಧಿಸುವ ಸೆನ್ಸೆಕ್ಸ್ ಸೂಚ್ಯಂಕವು 1,836 (ಶೇ 2.46) ಅಂಶಗಳಷ್ಟು ಕುಸಿಯಿತು. ಐವತ್ತು ಕಂಪನಿಗಳನ್ನು ಪ್ರತಿನಿಧಿಸುವ ನಿಫ್ಟಿ ಸೂಚ್ಯಂಕವು 601 (ಶೇ 2.6) ಅಂಶಗಳಷ್ಟು ಕುಸಿಯಿತು.

‘ಹೊರ್ಮುಜ್ ಜಲಸಂಧಿಗೆ ಸಂಬಂಧಿಸಿದ ಬಿಕ್ಕಟ್ಟು ತೀವ್ರವಾಗಿರುವುದು, ರೂಪಾಯಿಯ ಮೇಲೆ ಒತ್ತಡ ಸೃಷ್ಟಿಯಾಗಿರುವುದು, ತೈಲದ ಬೆಲೆ ಹೆಚ್ಚಿನ ಮಟ್ಟದಲ್ಲಿ ಇರುವುದು, ವಿದೇಶಿ ಹೂಡಿಕೆದಾರರು ನಿರಂತರವಾಗಿ ಷೇರುಗಳ ಮಾರಾಟಕ್ಕೆ ಗಮನ ನೀಡುತ್ತಿರುವುದು ಒಟ್ಟಾಗಿ ನಿರಾಶಾದಾಯಕ ಸ್ಥಿತಿಯನ್ನು ನಿರ್ಮಿಸುತ್ತಿವೆ’ ಎಂದು ಎನ್ರಿಚ್ ಮನಿ ಸಂಸ್ಥೆಯ ಸಿಇಒ ಪೊನ್ಮುಡಿ ಆರ್. ಹೇಳಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ‘ಇರಾನ್ ವಿದ್ಯುತ್ ಸ್ಥಾವರಗಳ ಮೇಲಿನ ದಾಳಿಯನ್ನು ಐದು ದಿನಗಳ ಮಟ್ಟಿಗೆ ಮುಂದೂಡಲಾಗಿದೆ’ ಎಂಬ ಹೇಳಿಕೆಯನ್ನು ನೀಡಿದ ಹೊತ್ತಿಗೆ ಭಾರತದ ಷೇರುಪೇಟೆಗಳಲ್ಲಿ ದಿನದ ವಹಿವಾಟು ಕೊನೆಗೊಂಡಿತ್ತು.

ಮಾರುಕಟ್ಟೆ ವಹಿವಾಟಿನ ಸಂದರ್ಭದಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಪ್ರತಿ ಬ್ಯಾರಲ್‌ಗೆ 113.3 ಡಾಲರ್‌ವರೆಗೂ ಹೆಚ್ಚಳ ಕಂಡಿತ್ತು. ಏಷ್ಯಾದ ಮಾರುಕಟ್ಟೆಗಳ ಪೈಕಿ ದಕ್ಷಿಣ ಕೊರಿಯಾದ ಕೊಸ್ಪಿ, ಜಪಾನ್‌ನ ನಿಕ್ಕೈ, ಶಾಂಘೈನ ಎಸ್‌ಎಸ್‌ಇ ಕಾಂಪೊಸಿಟ್ ಸೂಚ್ಯಂಕ, ಹಾಂಗ್ ಕಾಂಗ್‌ನ ಹ್ಯಾಂಗ್ ಸೆಂಗ್ ಸೂಚ್ಯಂಕ ಕೂಡ ಕುಸಿತ ಕಂಡಿವೆ.

ಹೂಡಿಕೆದಾರರಿಗೆ ₹48.29 ಲಕ್ಷ ಕೋಟಿ ನಷ್ಟ: ಪಶ್ಚಿಮ ಏಷ್ಯಾದಲ್ಲಿ ಫೆಬ್ರುವರಿ 28ರಂದು ಯುದ್ಧ ಆರಂಭವಾದ ನಂತರದಲ್ಲಿ ದೇಶದ ಷೇರು ಮಾರುಕಟ್ಟೆಗಳ ಹೂಡಿಕೆದಾರರಿಗೆ ಆಗಿರುವ ನಷ್ಟದ ಒಟ್ಟು ಮೊತ್ತ ₹48.29 ಲಕ್ಷ ಕೋಟಿ ರೂಪಾಯಿ.

ಪಶ್ಚಿಮ ಏಷ್ಯಾದಲ್ಲಿ ಫೆಬ್ರುವರಿ 28ರಂದು ಯುದ್ಧ ಆರಂಭವಾದ ನಂತರದಲ್ಲಿ ಸೆನ್ಸೆಕ್ಸ್ ಶೇ 10.56ರಷ್ಟು (8,590 ಅಂಶ) ಕುಸಿದಿದೆ. ಇದೇ ಅವಧಿಯಲ್ಲಿ ನಿಫ್ಟಿ ಸೂಚ್ಯಂಕವು ಶೇ 10.58ರಷ್ಟು (2,666 ಅಂಶ) ಕುಸಿತ ಕಂಡಿದೆ.

ಮುಂಬೈ ಷೇರುಪೇಟೆ ನೋಂದಾಯಿತ ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳದ ಮೌಲ್ಯವು ಈಗ ₹415 ಲಕ್ಷ ಕೋಟಿ ಆಗಿದೆ. ಸೋಮವಾರದ ವಹಿವಾಟಿನಲ್ಲಿ ಎಲ್ಲ ವಲಯಗಳ ಸೂಚ್ಯಂಕಗಳು ಕುಸಿದಿವೆ.

94ರ ಮಟ್ಟಕ್ಕೆ ಬಂದಿದ್ದ ರೂಪಾಯಿ

ಮುಂಬೈ (ಪಿಟಿಐ): ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ದಿನದ ವಹಿವಾಟಿನ ಒಂದು ಹಂತದಲ್ಲಿ 94ಕ್ಕಿಂತ ಕೆಳಕ್ಕೆ ಬಂದಿತ್ತು, ನಂತರ ಮೌಲ್ಯವು ಚೇತರಿಕೆ ಕಂಡು ವಹಿವಾಟಿನ ಅಂತ್ಯಕ್ಕೆ 93.53 ಆಗಿದೆ.

ಮುಂದಿನ ದಿನಗಳಲ್ಲಿಯೂ ರೂಪಾಯಿ ಮೌಲ್ಯದ ಮೇಲೆ ಒತ್ತಡ ಮುಂದುವರಿಯುತ್ತದೆ ಎಂಬ ಅಂದಾಜು ಇದೆ. ಆದರೆ ಆರ್‌ಬಿಐ ಕಾಲಕಾಲಕ್ಕೆ ಮಧ್ಯಪ್ರವೇಶ ಮಾಡಿ ರೂಪಾಯಿ ಮೌಲ್ಯ ಕುಸಿಯದಂತೆ ಕ್ರಮ ಕೈಗೊಳ್ಳಬಹುದು ಎಂದು ತಜ್ಞರು ಹೇಳಿದ್ದಾರೆ.

ಚಿನ್ನದ ದರ ₹9,050, ಬೆಳ್ಳಿ ₹10,500 ಇಳಿಕೆ

ದೇಶದ ಮಾರುಕಟ್ಟೆಯಲ್ಲಿ ಚಿನ್ನ ಮತ್ತು ಬೆಳ್ಳಿಗೆ ಬೇಡಿಕೆ ಕಡಿಮೆಯಾಗಿದೆ. ಹೀಗಾಗಿ ಇಲ್ಲಿನ ಚಿನಿವಾರ ಪೇಟೆಯಲ್ಲಿ ಈ ಲೋಹಗಳ ಬೆಲೆ ಸೋಮವಾರ ಇಳಿಕೆ ಆಗಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹9,050 ಕಡಿಮೆಯಾಗಿ, ₹1,43,600ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹10,500 ಇಳಿಕೆಯಾಗಿ, ₹2.30 ಲಕ್ಷಕ್ಕೆ ಇಳಿದಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

‘ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದ ಕಚ್ಚಾ ತೈಲ ದರವು ಹೆಚ್ಚಳವಾಗಿದೆ. ಹಣದುಬ್ಬರವು ಏರಿಕೆಯಾಗುವ ಆತಂಕ ಉಂಟಾಗಿದ್ದು, ನಗದು ಹರಿವಿನ ಮೇಲೆ ಬಿಗಿ ಕ್ರಮಗಳನ್ನು ಕೈಗೊಳ್ಳುವ ಸಾಧ್ಯತೆ ಇದೆ. ಇದು ಅಮೆರಿಕದ ಬಾಂಡ್‌ಗಳಿಕೆಗೆ ಉತ್ತೇಜನ ನೀಡಿದೆ ಮತ್ತು ಡಾಲರ್ ಮೌಲ್ಯವನ್ನು ಹೆಚ್ಚಿಸಿದ್ದು, ಚಿನ್ನ ಮತ್ತು ಬೆಳ್ಳಿ ದರದ ಮೇಲೆ ಒತ್ತಡ ಸೃಷ್ಟಿಸಿದೆ’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಸುದ್ದಿ 2 ನಿಮಿಷ

ಕ್ವಿಂಟಲ್ ಹುಣಸೆಗೆ ₹44 ಸಾವಿರ

ತುಮಕೂರು: ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ಸೋಮವಾರ ಉತ್ಕೃಷ್ಟ ಗುಣಮಟ್ಟದ ಹುಣಸೆ ಹಣ್ಣು ಕ್ವಿಂಟಲ್‌ಗೆ ₹44 ಸಾವಿರ ದರಕ್ಕೆ ಮಾರಾಟವಾಗಿದೆ.

ಗುಬ್ಬಿ ತಾಲ್ಲೂಕಿನ ಕುಂಟರಾಮನಹಳ್ಳಿ ರೈತ ಜಯಣ್ಣ ಎಂಬುವರು ಮಾರುಕಟ್ಟೆಗೆ ತಂದಿದ್ದ 55 ಕೆ.ಜಿ ಹುಣಸೆ ಹಣ್ಣನ್ನು ವ್ಯಾಪಾರಿಯೊಬ್ಬರು ₹24,200 ಕೊಟ್ಟು ಖರೀದಿಸಿದರು.

ಈ ವರ್ಷದ ಹಂಗಾಮಿನಲ್ಲಿ ಅತಿ ಹೆಚ್ಚು ಬೆಲೆಗೆ ಮಾರಾಟವಾದ ಹುಣಸೆ ಇದು. ಕಳೆದ ವರ್ಷ ಇದೇ ಮರದ ಹಣ್ಣು ಕ್ವಿಂಟಲ್‌ಗೆ ₹47ಸಾವಿರದಂತೆ ಮಾರಾಟವಾಗಿತ್ತು.

ಭಾರತೀಯ ತೋಟಗಾರಿಕಾ ಸಂಶೋಧನಾ ಸಂಸ್ಥೆಯು (ಐಐಎಚ್‌ಆರ್) ಉತ್ಕೃಷ್ಟ ಗುಣಮಟ್ಟದ ತಳಿ ಎಂದು ಗುರುತಿಸಿರುವ ‘ಲಕ್ಷ್ಮಣ’ ಹುಣಸೆ ಕ್ವಿಂಟಲ್ ₹34 ಸಾವಿರಕ್ಕೆ ಮಾರಾಟವಾಗಿದೆ. ಸಾಮಾನ್ಯ ಗುಣಮಟ್ಟದ ಹಣ್ಣಿಗೆ ಕ್ವಿಂಟಲ್ ₹11,500ರಿಂದ ₹34 ಸಾವಿರದ ವರೆಗೂ ಬೆಲೆ ಸಿಕ್ಕಿದೆ.



ಕುಂಟರಾಮನಹಳ್ಳಿ ರೈತನ ಹುಣಸೆ ಹಣ್ಣಿಗೆ ಮಾತ್ರ ₹44 ಸಾವಿರ ಬೆಲೆ ಸಿಕ್ಕಿದೆ. ‘ಗುಣಮಟ್ಟದ ಹಣ್ಣಿಗೆ ಯಾವಾಗಲೂ ಉತ್ತಮ ಬೆಲೆ ಇದ್ದೇ ಇರುತ್ತದೆ’ ಎಂದು ವರ್ತಕ ದೇವೇಂದ್ರಪ್ಪ ತಿಳಿಸಿದರು.

‘11 ವಿಮಾನ ಕಂಪನಿ ಸ್ಥಗಿತ’

ನವದೆಹಲಿ (ಪಿಟಿಐ): ಹಣಕಾಸಿನ ಸಂಕಷ್ಟ, ವಿಮಾನಗಳ ಅಲಭ್ಯತೆ ಹಾಗೂ ಇತರ ಆಂತರಿಕ ಸಮಸ್ಯೆಗಳ ಕಾರಣದಿಂದಾಗಿ ಕಳೆದ 10 ವರ್ಷಗಳಲ್ಲಿ ಒಟ್ಟು 11 ವಿಮಾನಯಾನ ಕಂಪನಿಗಳು ಸೇವೆ ಸ್ಥಗಿತಗೊಳಿಸಿವೆ ಎಂದು ಕೇಂದ್ರ ಸರ್ಕಾರವು ರಾಜ್ಯಸಭೆಗೆ ಸೋಮವಾರ ತಿಳಿಸಿದೆ.

ಕೇಂದ್ರ ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ಮುರಳೀಧರ ಮೊಹೋಲ್ ಅವರು ‘ವಿಮಾನಯಾನ ಕಂಪನಿಗಳು ವಾಣಿಜ್ಯಕ ಅಂಶಗಳನ್ನು ಪರಿಗಣಿಸಿ ಕಾರ್ಯಾಚರಣೆ ನಡೆಸುತ್ತಿವೆ, ಈ ವಲಯವು ಸರ್ಕಾರದ ನಿಯಂತ್ರಣದಿಂದ ಮುಕ್ತವಾಗಿದೆ. ವಿಮಾನಯಾನ ಸೇವಾ ವಲಯದಲ್ಲಿ ಸಮತೋಲನ ಸಾಧಿಸಲು ಮತ್ತು ವಲಯವನ್ನು ಸದೃಢವಾಗಿಸಲು ಸರ್ಕಾರ ಬದ್ಧವಾಗಿದೆ’ ಎಂದು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

ಈ ಅವಧಿಯಲ್ಲಿ ಏರ್‌ಏಷ್ಯಾ ಪ್ರೈ.ಲಿ. ಕಂಪನಿಯು ಏರ್ ಇಂಡಿಯಾ ಎಕ್ಸ್‌ಪ್ರೆಸ್ ಲಿಮಿಟೆಡ್‌ನಲ್ಲಿ ವಿಲೀನಗೊಂಡಿದೆ. ಟಾಟಾ ಎಸ್‌ಐಎ ಏರ್‌ಲೈನ್ಸ್ ಲಿಮಿಟೆಡ್ (ವಿಸ್ತಾರಾ) ಕಂಪನಿಯು ಏರ್ ಇಂಡಿಯಾ ಲಿಮಿಟೆಡ್‌ನಲ್ಲಿ ವಿಲೀನಗೊಂಡಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಅಡಿಕೆ ಧಾರಣೆ

ಕುಮಟಾ		ಕೋಕ	10669-33612		
ಚಾಲಿ	43434-43989	ಕೆಂಪುಗೋಟು	26617-37399	ಚಾಲಿ	44099-48599
ಸಾಗರ		ರಾಶಿ	34300-53009	ಕೆಂಪುಗೋಟು	28409-39610
ಬಿಳಿಗೋಟು	14219-35600	ತಟ್ಟಿಬೆಟ್ಟೆ	30900-42099	ರಾಶಿ	49399-54599
ಚಾಲಿ	25105-43711	**ಶಿವಮೊಗ್ಗ**		**ಯಲ್ಲಾಪುರ**	
ಕೋಕ	10199-34199	ಸರಕು	62000-98796	ಬಿಳಿಗೋಟು	16812-41119
ಕೆಂಪುಗೋಟು	19605-41369	ಬೆಟ್ಟೆ	65030-65030	ಚಾಲಿ	38695-48269
ರಾಶಿ	36000-56839	ರಾಶಿ	45399-54399	ಕೋಕ	13000-31209
ಸಿಪ್ಪೆಗೋಟು	8919-22630	ಗೊರಬಲು	19010-35399	ಕೆಂಪುಗೋಟು	16000-37016
ಸಿದ್ದಾಪುರ		**ಶಿರಸಿ**		ರಾಶಿ	49709-57170
ಬಿಳಿಗೋಟು	10119-36108	ಬೆಟ್ಟೆ	40001-50181	ತಟ್ಟಿಬೆಟ್ಟೆ	37200-51499
ಚಾಲಿ	38617-47639	ಬಿಳಿಗೋಟು	30300-39698		

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹19000-20000
ತಿಪಟೂರು	₹29500-31105
ತುಮಕೂರು	₹14100-21500
ತುರುವೇಕೆರೆ	₹29500-30600

ತೈಲ ಸಂಗ್ರಹಾಗಾರ ಶೇ 64ರಷ್ಟು ಭರ್ತಿ: ಕೇಂದ್ರ

ನವದೆಹಲಿ (ಪಿಟಿಐ): ದೇಶದ ಮೀಸಲು ತೈಲ ಸಂಗ್ರಹಾಗಾರಗಳ ಒಟ್ಟು ಸಾಮರ್ಥ್ಯದ ಶೇಕಡ 64ರಷ್ಟು ತೈಲ ದಾಸ್ತಾನು ಇದೆ ಎಂದು ಕೇಂದ್ರ ಸರ್ಕಾರವು ರಾಜ್ಯಸಭೆಗೆ ಸೋಮವಾರ ತಿಳಿಸಿದೆ.

ಅಂದಾಜು ಒಂಬತ್ತೂವರೆ ದಿನಗಳ ಪೂರೈಕೆಯನ್ನು ಸರಿದೂಗಿಸುವ ರೀತಿಯಲ್ಲಿ ಈ ಸಂಗ್ರಹಾಗಾರಗಳನ್ನು ರೂಪಿಸಲಾಗಿದೆ. ಕಚ್ಚಾ ತೈಲದ ಬೆಲೆಯು ಭಾರಿ ಪ್ರಮಾಣದಲ್ಲಿ ಏರಿಕೆಯಾದರೆ ಅಥವಾ ಪೂರೈಕೆಯಲ್ಲಿ ವ್ಯತ್ಯಯ ಆದರೆ ಇಲ್ಲಿನ ತೈಲವನ್ನು ಬಳಸಿಕೊಳ್ಳಲಾಗುತ್ತದೆ.

ಆಂಧ್ರಪ್ರದೇಶದ ವಿಶಾಖಪಟ್ಟಣ, ಕರ್ನಾಟಕದ ಮಂಗಳೂರು ಮತ್ತು ಉಡುಪಿ ಬಳಿಯ ಪಾದೂರಿನಲ್ಲಿ ಭೂಗತ ತೈಲ ಸಂಗ್ರಹಾಗಾರಗಳು ಇವೆ. ಇಲ್ಲಿ ಒಟ್ಟು 53.3 ಲಕ್ಷ ಟನ್ ಕಚ್ಚಾ ತೈಲವನ್ನು ಸಂಗ್ರಹಿಸಿ ಇರಿಸಬಹುದು.

‘ಭೂಗತ ಸಂಗ್ರಹಾಗಾರಗಳಲ್ಲಿ ಇರುವ ತೈಲದ ಪ್ರಮಾಣವು ಮಾರುಕಟ್ಟೆ ಸ್ಥಿತಿ ಆಧರಿಸಿ ಬದಲಾಗುತ್ತಿರುತ್ತದೆ’ ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ಖಾತೆ ರಾಜ್ಯ ಸಚಿವ ಸುರೇಶ್ ಗೋಪಿ ಅವರು ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.



ಉಡುಪಿ ಬಳಿಯ ಪಾದೂರಿನಲ್ಲಿ ಇರುವ ತೈಲ ಸಂಗ್ರಹಾಗಾರದ ಬಾಹ್ಯ ನೋಟ –ಪ್ರಜಾವಾಣಿ ಚಿತ್ರ

‘ಈಗ ಸಂಗ್ರಹಾಗಾರಗಳಲ್ಲಿ ಅಂದಾಜು 33.72 ಲಕ್ಷ ಟನ್ ಕಚ್ಚಾ ತೈಲ ಲಭ್ಯವಿದೆ. ಇದು ಒಟ್ಟು ಸಾಮರ್ಥ್ಯದ ಅಂದಾಜು ಶೇ 64ರಷ್ಟಾಗುತ್ತದೆ’ ಎಂದು ಅವರು ವಿವರ ನೀಡಿದ್ದಾರೆ.

ಹೆಚ್ಚುವರಿಯಾಗಿ ಎರಡು ಪೆಟ್ರೋಲಿಯಂ ಸಂಗ್ರಹಾಗಾರಗಳನ್ನು ನಿರ್ಮಿಸಲು ಕೇಂದ್ರವು 2021ರಲ್ಲಿ ಒಪ್ಪಿಗೆ ನೀಡಿದೆ ಎಂದು ಗೋಪಿ ತಿಳಿಸಿದ್ದಾರೆ. ಇವು ಒಡಿಶಾದ ಚಂಡಿಖೋಲ್‌ನಲ್ಲಿ (40 ಲಕ್ಷ ಟನ್ ಸಾಮರ್ಥ್ಯ) ಹಾಗೂ ಉಡುಪಿ ಸನಿಹದ ಪಾದೂರಿನಲ್ಲಿ (25 ಲಕ್ಷ ಟನ್ ಸಾಮರ್ಥ್ಯ) ನಿರ್ಮಾಣ ಆಗಲಿವೆ.

ಪಾದೂರಿನ ಸಂಗ್ರಹಾಗಾರದ ನಿರ್ಮಾಣ ಕಾರ್ಯಕ್ಕೆ 2025ರ ಅಕ್ಟೋಬರ್‌ನಲ್ಲಿ ಕಾರ್ಯಾದೇಶ ನೀಡಲಾಗಿದೆ ಎಂದು ಗೋಪಿ ಮಾಹಿತಿ ನೀಡಿದ್ದಾರೆ.

‘ಈಗ 74 ದಿನಗಳಿಗೆ ಸಾಕಾಗುವಷ್ಟು ಕಚ್ಚಾ ತೈಲ ಹಾಗೂ ಪೆಟ್ರೋಲಿಯಂ ಉತ್ಪನ್ನಗಳನ್ನು ಸಂಗ್ರಹಿಸಿ ಇಟ್ಟುಕೊಳ್ಳುವ ಸಾಮರ್ಥ್ಯ ದೇಶಕ್ಕೆ ಇದೆ. ತೈಲೋತ್ಪನ್ನಗಳ ಮಾರಾಟ ಕಂಪನಿಗಳ ಸಂಗ್ರಹಣಾ ಸೌಲಭ್ಯವನ್ನೂ ಬಳಸಿಕೊಂಡು ಇಷ್ಟು ದಿನಗಳಿಗೆ ಸಾಕಾಗುವಷ್ಟು ತೈಲ ಸಂಗ್ರಹ ಮಾಡಬಹುದು’ ಎಂದು ಅವರು ತಿಳಿಸಿದ್ದಾರೆ.

ಶೈತ್ಯಾಗಾರ ಕುಸಿದು ನಾಲ್ವರು ಕಾರ್ಮಿಕರ ಬಲಿ

ಪ್ರಯಾಗ್‌ರಾಜ್, ಉತ್ತರಪ್ರದೇಶ (ಪಿಟಿಐ): ಇಲ್ಲಿನ ಶೈತ್ಯಾಗಾರ ಸೋಮವಾರ ಮಧ್ಯಾಹ್ನದ ವೇಳೆಗೆ ಕುಸಿದಿದ್ದರಿಂದ, ಅವಶೇಷಗಳಡಿಯಲ್ಲಿ ಸಿಲುಕಿ ನಾಲ್ವರು ಕಾರ್ಮಿಕರು ಮೃತಪಟ್ಟಿದ್ದಾರೆ.

‘ಘಟನೆಯಲ್ಲಿ 12 ಮಂದಿ ಕಾರ್ಮಿಕರು ಗಾಯಗೊಂಡಿದ್ದು, ಅವರನ್ನು ಎಸ್‌ಆರ್‌ಎನ್ ಆಸ್ಪತ್ರೆಗೆ ದಾಖಲಿಸಲಾಗಿದೆ’ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಮನೀಶ್ ಕುಮಾರ್ ವರ್ಮಾ ತಿಳಿಸಿದ್ದಾರೆ.

‘ದುರ್ಘಟನೆಯ ಮಾಹಿತಿ ತಿಳಿದ ತಕ್ಷಣ ಜಿಲ್ಲಾಡಳಿತ, ಪೊಲೀಸರು, ಎಸ್‌ಡಿಆರ್‌ಎಫ್ ಹಾಗೂ ಅಗ್ನಿಶಾಮಕ ಸಿಬ್ಬಂದಿಯು ರಕ್ಷಣಾ ಕಾರ್ಯದಲ್ಲಿ ಭಾಗಿಯಾಗಿ, ಸ್ಥಳದಲ್ಲಿ ಅವಶೇಷಗಳನ್ನು ತೆರವುಗೊಳಿಸಿದರು. ಜೆಸಿಬಿ ಯಂತ್ರದ ಮೂಲಕ ಮಣ್ಣು ತೆರವುಗೊಳಿಸಿ, ಸಿಲುಕಿದವರನ್ನು ಪಾರು ಮಾಡಲಾಯಿತು’ ಎಂದು ಮಾಹಿತಿ ನೀಡಿದ್ದಾರೆ.

‘ಫಾಫಾಮವು ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಶೈತ್ಯಾಗಾರವು ಏಕಾಏಕಿ ಕುಸಿದುಬಿತ್ತು. ಅಮೋನಿಯಾ ಗ್ಯಾಸ್ ಸೋರಿಕೆಯಾಗಿ ಸುತ್ತಲಿನ ಪರಿಸರದಲ್ಲಿ ಆತಂಕದ ವಾತಾವರಣ ನಿರ್ಮಾಣವಾಗಿತ್ತು. ಅಗ್ನಿಶಾಮಕ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಗ್ಯಾಸ್ ಸೋರಿಕೆ ತಡೆದಿದ್ದಾರೆ’ ಎಂದು ಡಿಸಿಪಿ (ಗಂಗಾ ನಗರ) ಕುಲದೀಪ್ ಗನಾವತ್ ತಿಳಿಸಿದ್ದಾರೆ.

‘ರೈತರ ಸಾಲಮನ್ನಾ ಪ್ರಸ್ತಾವ ಇಲ್ಲ’



ನಿರ್ಮಲಾ ಸೀತಾರಾಮನ್

ನವದೆಹಲಿ (ಪಿಟಿಐ): ‘ರೈತರ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡುವ ಯಾವುದೇ ಪ್ರಸ್ತಾವ ಕೇಂದ್ರ ಸರ್ಕಾರದ ಮುಂದೆ ಇಲ್ಲ’ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಗೆ ಸೋಮವಾರ ತಿಳಿಸಿದ್ದಾರೆ.

ಕಿಸಾನ್ ಕ್ರೆಡಿಟ್ ಕಾರ್ಡ್ ಮೂಲಕ ಹೆಚ್ಚಿನ ಸಾಲ ನೀಡುವುದು ಸೇರಿದಂತೆ ರೈತರ ಆರ್ಥಿಕ ಸ್ಥಿತಿ ಸದೃಢಗೊಳಿಸಲು ಸರ್ಕಾರವು ಹಲವಾರು ಕ್ರಮಗಳನ್ನು ಕೈಗೊಂಡಿದೆ. ₹3 ಲಕ್ಷದವರೆಗೆ ಬೆಳೆ ಸಾಲವನ್ನು ಸಬ್ಸಿಡಿ ಬಡ್ಡಿ ದರದಲ್ಲಿ ನೀಡಲಾಗುತ್ತಿದ್ದು, ಸಕಾಲಿಕ ಮರುಪಾವತಿಗೆ ಹೆಚ್ಚುವರಿ ಪ್ರೋತ್ಸಾಹಧನ ನೀಡಲಾಗುತ್ತಿದೆ ಎಂದು ಅವರು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

ಕೃಷಿ ಸಂಬಂಧಿತ ಚಟುವಟಿಕೆಗಳಿಗಾಗಿ ಅಲ್ಪಾವಧಿಗೆ ಅಡಮಾನರಹಿತವಾಗಿ ನೀಡುವ ಸಾಲವನ್ನು ₹1.60 ಲಕ್ಷದಿಂದ ₹2 ಲಕ್ಷಕ್ಕೆ ಹೆಚ್ಚಿಸಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಆದ್ಯತಾ ವಲಯ ಸಾಲ ಮಾರ್ಗಸೂಚಿಗಳ ಅಡಿಯಲ್ಲಿ ಬ್ಯಾಂಕಿಂಗ್ ವ್ಯವಸ್ಥೆಯಿಂದ ಕೃಷಿ ಸೇರಿದಂತೆ ಆರ್ಥಿಕತೆಯ ಆದ್ಯತೆಯ ವಲಯಗಳಿಗೆ ಸಾಕಷ್ಟು ಸಾಲವನ್ನು ನೀಡಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಹೊರ್ಮುಜ್: ಗಡುವು ವಿಸ್ತರಣೆ

ಒಂದನೇ ಪುಟದಿಂದ...

‘ಮಾತುಕತೆ ವಾರವಿಡೀ ಮುಂದುವರಿಯಲಿದೆ. ವಿದ್ಯುತ್ ಸ್ಥಾವರಗಳ ಮೇಲಿನ ದಾಳಿಯನ್ನು ತಡೆಹಿಡಿದಿರುವ ನಿರ್ಧಾರವು ಈ ಮಾತುಕತೆಯ ಯಶಸ್ಸನ್ನು ಅವಲಂಬಿಸಿರುತ್ತದೆ’ ಎಂದಿದ್ದಾರೆ.

ಆದರೆ ಟ್ರಂಪ್ ಹೇಳಿಕೆಯನ್ನು ಇರಾನ್ ಸಾರಾಸಗಟಾಗಿ ತಳ್ಳಿಹಾಕಿದ್ದು, ‘ಅಮೆರಿಕದೊಂದಿಗೆ ನೇರವಾಗಿ ಅಥವಾ ಮಧ್ಯಸ್ಥಿಕೆದಾರರ ಮೂಲಕ ಯಾವುದೇ ಮಾತುಕತೆ ನಡೆದಿಲ್ಲ’ ಎಂದು ಹೇಳಿದೆ.

ಹೊರ್ಮುಜ್ ಜಲಸಂಧಿಯನ್ನು ಎಲ್ಲ ಹಡಗುಗಳಿಗೆ ‘ಸಂಪೂರ್ಣ’ ಮುಕ್ತಗೊಳಿಸಲು ವಿಫಲವಾದರೆ ಇರಾನಿನ ಎಲ್ಲ ವಿದ್ಯುತ್ ಸ್ಥಾವರಗಳನ್ನು ನಾಶಪಡಿಸಲಾಗುವುದು ಎಂದು ಟ್ರಂಪ್ ಶನಿವಾರ ಎಚ್ಚರಿಸಿದ್ದರು. ಅವರು ವಿಧಿಸಿದ್ದ ಎರಡು ದಿನಗಳ ಗಡುವು ಮಂಗಳವಾರ ಬೆಳಗಿನ ಜಾವ 3ರ ಸುಮಾರಿಗೆ (ಟೆಹರಾನ್ ಕಾಲಮಾನ) ಕೊನೆಗೊಳ್ಳಲಿತ್ತು.

ತನ್ನ ವಿದ್ಯುತ್ ಸ್ಥಾವರಗಳ ಮೇಲೆ ದಾಳಿ ನಡೆಸಿದರೆ ಇಸ್ರೇಲ್ ಮತ್ತು ಗಲ್ಫ್ ರಾಷ್ಟ್ರಗಳಲ್ಲಿರುವ ವಿದ್ಯುತ್ ಸ್ಥಾವರಗಳು ಮತ್ತು ಇಂಧನ ಮೂಲಸೌಕರ್ಯಗಳನ್ನು ಗುರಿಯಾಗಿಸುವುದಾಗಿ ಇರಾನ್‌ನ ರೆವಲ್ಯೂಷನರಿ ಗಾರ್ಡ್ಸ್ (ಐಆರ್‌ಜಿಸಿ) ಎಚ್ಚರಿಸಿತ್ತು. ಮಾತ್ರವಲ್ಲ, ತಮ್ಮ ಗುರಿಗಳ ವಿವರಗಳನ್ನು ಒಳಗೊಂಡ ಇನ್ಫೋಗ್ರಾಫ್‌ಅನ್ನು ಸೋಮವಾರ ಬಿಡುಗಡೆಗೊಳಿಸಿತ್ತು.

ಇಸ್ರೇಲ್‌ನ ಎರಡು ಅತಿದೊಡ್ಡ ವಿದ್ಯುತ್ ಸ್ಥಾವರಗಳಾದ ಒರೊತ್ ರಬಿನ್ ಮತ್ತು ರುಟೆನ್‌ಬರ್ಗ್ ಹಾಗೂ ಸೌದಿ ಅರೇಬಿಯಾ, ಯುಎಇ, ಕತಾರ್ ಮತ್ತು ಕುವೈತ್‌ನಲ್ಲಿರುವ ವಿದ್ಯುತ್ ಸ್ಥಾವರಗಳು ತಮ್ಮ ಗುರಿಯಾಗಲಿವೆ ಎಂದು ‘ವಿದ್ಯುತ್‌ಗೆ ಗುಡ್‌ಬೈ’ ಎಂಬ ಶೀರ್ಷಿಕೆಯುಳ್ಳ ಪ್ರಕಟಣೆಯಲ್ಲಿ ಹೇಳಿತ್ತು.

ಇಸ್ರೇಲ್‌ಗೆ ಮಾಹಿತಿ: ಇರಾನಿನ ವಿದ್ಯುತ್ ಸ್ಥಾವರಗಳ ಮೇಲಿನ ದಾಳಿಯನ್ನು ತಡೆಹಿಡಿದಿರುವ ತನ್ನ ನಿರ್ಧಾರವನ್ನು ಅಮೆರಿಕವು ಇಸ್ರೇಲ್ ಜತೆ ಹಂಚಿಕೊಂಡಿದೆ. ಆದ್ದರಿಂದ ಇಸ್ರೇಲ್ ಸೇನೆ ಕೂಡಾ ವಿದ್ಯುತ್ ಸ್ಥಾವರಗಳನ್ನು ಗುರಿಯಾಗಿಸುವ ಸಾಧ್ಯತೆಯಿಲ್ಲ ಎಂದು ಮೂಲಗಳು ತಿಳಿಸಿವೆ. ಆದರೆ, ಈ ಬೆಳವಣಿಗೆಯ ಕುರಿತು ಇಸ್ರೇಲ್ ಪ್ರಧಾನಿ ಕಚೇರಿ ಯಾವುದೇ ಹೇಳಿಕೆ ನೀಡಿಲ್ಲ.

‘ಗೌರವಾನ್ವಿತ ವ್ಯಕ್ತಿ ಜತೆ ಮಾತುಕತೆ’

ಒಂದನೇ ಪುಟದಿಂದ...

- ಸ್ಟೀವ್ ವಿಟ್ಕಾಫ್ ಮತ್ತು ಜರೆಡ್ ಕುಶ್ನರ್ ಅವರು ಇರಾನ್‌ನ ಪ್ರತಿನಿಧಿಗಳ ಜತೆ ಭಾನುವಾರ ಮಾತನಾಡಿದ್ದು, ಮಾತುಕತೆ ಮುಂದುವರಿಯಲಿದೆ.
- ಇರಾನ್‌ನ ಪರಮೋಚ್ಚ ನಾಯಕ ಮೊಜ್ತಬಾ ಖಮೇನಿ ಜತೆ ಮಾತುಕತೆ ನಡೆಸುತ್ತಿಲ್ಲ.
- ‘ಅತ್ಯಂತ ಗೌರವಾನ್ವಿತ ವ್ಯಕ್ತಿ ಮತ್ತು ಇರಾನ್‌ನ ನಾಯಕ’ ಎಂದು ನಾವು ನಂಬಿರುವ ವ್ಯಕ್ತಿಯೊಂದಿಗೆ ಈ ಮಾತುಕತೆ ನಡೆಯುತ್ತಿದೆ.
- ಇರಾನ್‌ನಲ್ಲಿ ‘ಆಡಳಿತದ ಬದಲಾವಣೆ’ ಪ್ರಕ್ರಿಯೆ ಪರಿಣಾಮಕಾರಿಯಾಗಿ ಜಾರಿಯಲ್ಲಿದೆ.

ಎಚ್ಚರಿಕೆಗೆ ಅಮೆರಿಕ ಹೆದರಿದೆ: ಇರಾನ್

ದುಬೈ: ‘ನಮ್ಮ ಎಚ್ಚರಿಕೆಗೆ ಹೆದರಿ ಅಮೆರಿಕದ ಅಧ್ಯಕ್ಷರು ದಾಳಿ ನಡೆಸುವ ನಿರ್ಧಾರದಿಂದ ಹಿಂದೆ ಸರಿದಿದ್ದಾರೆ’ ಎಂದು ಟ್ರಂಪ್ ಅವರ ಗಡುವು ವಿಸ್ತರಿಸುವ ನಿರ್ಧಾರದ ಬಗ್ಗೆ ಇರಾನ್ ಪ್ರತಿಕ್ರಿಯಿಸಿದೆ.

‘ಟ್ರಂಪ್ ಹೇಳಿರುವಂತೆ ಅಮೆರಿಕದ ಜತೆ ಯಾವುದೇ ನೇರ ಅಥವಾ ಪರೋಕ್ಷ ಮಾತುಕತೆ ನಡೆದಿಲ್ಲ’ ಎಂದು ಐಆರ್‌ಜಿಸಿಯ ಅಧಿಕಾರಿಯನ್ನು ಉಲ್ಲೇಖಿಸಿ ‘ಫಾರ್ಸ್’ ಮತ್ತು ‘ತಸ್ನೀಮ್’ ಸುದ್ದಿಸಂಸ್ಥೆಗಳು ವರದಿ ಮಾಡಿವೆ.

‘ಯುದ್ಧ ಪ್ರಾರಂಭವಾದಾಗಿನಿಂದಲೂ ಕೆಲವು ಮಧ್ಯಸ್ಥಿಕೆದಾರರು ಮಾತುಕತೆಗೆ ಬರುವಂತೆ ನಮಗೆ ಸಂದೇಶಗಳನ್ನು ಕಳುಹಿಸುತ್ತಿದ್ದಾರೆ. ಆದರೆ ಇರಾನ್ ತನ್ನ ಗುರಿ ಈಡೇರುವವರೆಗೂ ಪ್ರತಿರೋಧವನ್ನು ಮುಂದುವರಿಸುತ್ತದೆ’ ಎಂದು ‘ತಸ್ನೀಮ್’ ಸುದ್ದಿ ಸಂಸ್ಥೆ ವರದಿ ಮಾಡಿದೆ.

‘ಯಾವುದೇ ಮಾತುಕತೆ ನಡೆದಿಲ್ಲ ಮತ್ತು ನಡೆಯುತ್ತಿಲ್ಲ. ಈ ರೀತಿಯ ಮನೋಯುದ್ಧದ ಮೂಲಕ ಹೊರ್ಮುಜ್ ಜಲಸಂಧಿಯನ್ನು ಅಥವಾ ಜಾಗತಿಕ ತೈಲ ಮಾರುಕಟ್ಟೆಗಳನ್ನು ಸಹಜ ಸ್ಥಿತಿಗೆ ತರಲು ಸಾಧ್ಯವಿಲ್ಲ’ ಎಂದು ಹೇಳಿದೆ.

ಬಿಕ್ಕಟ್ಟು ಆತಂಕಕಾರಿ: ಮೋದಿ

ಒಂದನೇ ಪುಟದಿಂದ...

‘ಸಂಘರ್ಷಪೀಡಿತ ದೇಶಗಳು ಭಾರತದೊಂದಿಗೆ ವಿಶೇಷ ವ್ಯಾಪಾರ ಸಂಬಂಧಗಳನ್ನು ಹೊಂದಿವೆ. ಈ ದೇಶಗಳು ನಮ್ಮ ಕಚ್ಚಾ ತೈಲ ಮತ್ತು ಅನಿಲದ ಬಹುಪಾಲು ಅಗತ್ಯಗಳನ್ನು ಪೂರೈಸುವ ಪ್ರದೇಶಗಳಾಗಿವೆ. ಈ ದೇಶಗಳಲ್ಲಿ ಸುಮಾರು 1 ಕೋಟಿ ಭಾರತೀಯರು ನೆಲಸಿದ್ದಾರೆ. ಸಂಘರ್ಷ ಪ್ರಾರಂಭವಾದ ಬಳಿಕ ಅಲ್ಲಿರುವ ಪ್ರತಿಯೊಬ್ಬ ಭಾರತೀಯನಿಗೂ ಅಗತ್ಯ ನೆರವು ಒದಗಿಸಲಾಗಿದೆ’ ಎಂದು ಮೋದಿ ಹೇಳಿದರು.

ಸಂಸತ್ತಿನ ಮೂಲಕ ಸರ್ವಾನುಮತದ ಮತ್ತು ಒಗ್ಗಟ್ಟಿನ ಧ್ವನಿ ಜಗತ್ತನ್ನು ತಲುಪುವುದು ಅತ್ಯಗತ್ಯ ಎಂದು ಅವರು ಪ್ರತಿಪಾದಿಸಿದರು.

‘ನಾನು ಪಶ್ಚಿಮ ಏಷ್ಯಾದ ಬಹುತೇಕ ರಾಷ್ಟ್ರಗಳ ನಾಯಕರೊಂದಿಗೆ ದೂರವಾಣಿಯಲ್ಲಿ ಎರಡು ಸುತ್ತು ಮಾತುಕತೆ ನಡೆಸಿದ್ದೇನೆ. ಅವರೆಲ್ಲರೂ ಭಾರತೀಯರ ಸುರಕ್ಷತೆಯ ಖಾತರಿ ನೀಡಿದ್ದಾರೆ. ಆದರೆ, ಯುದ್ಧದಿಂದಾಗಿ ದುರದೃಷ್ಟವಶಾತ್ ಕೆಲವರು ಜೀವ ಕಳೆದುಕೊಂಡಿದ್ದು, ಹಲವರು ಗಾಯಗೊಂಡಿದ್ದಾರೆ. ನೊಂದ ಕುಟುಂಬಗಳಿಗೆ ನೆರವು ಒದಗಿಸಲಾಗುತ್ತಿದೆ’ ಎಂದರು.

‘ಭಾರತ ಯಾವಾಗಲೂ ಶಾಂತಿಗಾಗಿ ಧ್ವನಿ ಎತ್ತಿದೆ. ಈ ಸಮಸ್ಯೆಗೆ ಸಂವಾದ ಮತ್ತು ರಾಜತಾಂತ್ರಿಕತೆಯೇ ಪರಿಹಾರ. ಉದ್ವಿಗ್ನತೆ ಕಡಿಮೆ ಮಾಡುವ ಮತ್ತು ಸಂಘರ್ಷ ಕೊನೆಗೊಳಿಸುವ ಗುರಿಯೊಂದಿಗೆ ನಮ್ಮ ಪ್ರಯತ್ನಗಳು ಸಾಗಿವೆ’ ಎಂದು ಪ್ರಧಾನಿ ಹೇಳಿದರು.

‘ಪ್ರಧಾನಿ ಹೊಸದೇನನ್ನೂ ಹೇಳಲಿಲ್ಲ’



ಪ್ರಧಾನಿ ಮೋದಿ ಅವರು ಹೊಸದೇನನ್ನೂ ಹೇಳಲಿಲ್ಲ. ಈ ಕುರಿತು ಚರ್ಚಿಸಲು ನಾವು ನೋಟಿಸ್ ನೀಡಿದ್ದೇವೆ. ಚರ್ಚೆಗೆ ಅವಕಾಶ ನೀಡಿದರೆ, ಎಲ್ಲ ಆಯಾಮದಿಂದಲೂ ವಿಚಾರಗಳು ಬರಲಿವೆ. ಚರ್ಚೆ ನಡೆದರೆ ಒಳ್ಳೆಯದು

ಪ್ರಿಯಾಂಕಾ ಗಾಂಧಿ ವಾದ್ರಾ, ಕಾಂಗ್ರೆಸ್ ಸಂಸದೆ

‘ಕೋವಿಡ್ ಪ್ರಸ್ತಾಪ ಕಳವಳಕಾರಿ’

ಪ್ರಧಾನಿ ಮೋದಿ ಅವರ ಲೋಕಸಭಾ ಭಾಷಣವು ಅವರ ಎಂದಿನ ಭಾಷಣದಂತೆಯೇ ಇತ್ತು. ಸ್ವಯಂ ಪ್ರಶಂಸೆ, ಹೇಡಿತನ ಮತ್ತು ಪಕ್ಷಪಾತದಿಂದ ಕೂಡಿದ ಡೈಲಾಗ್‌ಗಳು ಎಂದಿನಂತಿದ್ದವು. ಪ್ರಧಾನಿ ಮೋದಿ ಅವರು ಕೋವಿಡ್ ವಿಚಾರ ಪ್ರಸ್ತಾಪಿಸಿದ್ದು ಮಾತ್ರ ಕಳವಳಕಾರಿಯಾಗಿತ್ತು. ಕೋವಿಡ್‌ಗೆ ಅವರ (ಮೋದಿ) ಸರ್ಕಾರದ ಪ್ರತಿಕ್ರಿಯಿಸಿದ ರೀತಿ ದುರಂತಮಯವಾಗಿತ್ತು. ನೂರಾರು ಕಿ.ಮೀ. ನಡೆದ ಕಾರ್ಮಿಕರು, ಆಮ್ಲಜನಕ ಸಿಗದೆ ಮೃತಪಟ್ಟ ನೂರಾರು ಜನರು, ಉದ್ಯೋಗ ಕಳೆದುಕೊಂಡ ಲಕ್ಷಾಂತರ ಮಂದಿ– ಈ ಎಲ್ಲ ಚಿತ್ರಣಗಳನ್ನು ಈ ದೇಶ ಇನ್ನೂ ಮರೆತಿಲ್ಲ. ಈ ಸಲವಾದರೂ ಸರ್ಕಾರ ಹೆಚ್ಚು ಸಿದ್ಧತೆ ನಡೆಸಿದೆಯೇನೋ ಎನ್ನುವ ಆಶಾಭಾವನೆ ಅಷ್ಟೇ ನಮ್ಮದು



ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಮಯಾಮಿ ಓಪನ್ ಟೆನಿಸ್: ಹೊರಬಿದ್ದ ಸ್ಪೇನ್ ತಾರೆ

ಅಲ್ಕರಾಜ್‌ಗೆ ಸೆಬಾಸ್ಟಿಯನ್ ಆಘಾತ

ಮಯಾಮಿ (ಎಎಫ್‌ಪಿ): ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರು ಮಯಾಮಿ ಓಪನ್ ಟೆನಿಸ್ ಟೂರ್ನಿಯ ಮೂರನೇ ಸುತ್ತಿನಲ್ಲಿ ಆಘಾತ ಅನುಭವಿಸಿದರು. ಅಮೆರಿಕದ ಸೆಬಾಸ್ಟಿಯನ್ ಕೊರ್ಡಾ ಮೂರು ಸೆಟ್‌ಗಳ ಹಣಾಹಣಿಯಲ್ಲಿ ಸ್ಪೇನ್‌ನ ಸೂಪರ್ ಸ್ಟಾರ್ ಆಟಗಾರನನ್ನು ಸದೆಬಡಿದರು.

ವಿಶ್ವ ಕ್ರಮಾಂಕದಲ್ಲಿ 36ನೇ ಸ್ಥಾನದಲ್ಲಿರುವ ಸೆಬಾಸ್ಟಿಯನ್ ಪುರುಷರ ಸಿಂಗಲ್ಸ್ 32ರ ಘಟ್ಟದ ಪಂದ್ಯದಲ್ಲಿ 6-3, 5-7, 6-4ರಿಂದ ಅಲ್ಕರಾಜ್ ಅವರನ್ನು ಮಣಿಸಿದರು. ಕಳೆದ ಆವೃತ್ತಿಯಲ್ಲೂ ಅಲ್ಕರಾಜ್ 55ನೇ ಕ್ರಮಾಂಕದ ಡೇವಿಡ್ ಗೋಫಿನ್ (ಬೆಲ್ಜಿಯಂ) ವಿರುದ್ಧ ಸೋತು ಎರಡನೇ ಸುತ್ತಿನಲ್ಲಿ ಹೊರಬಿದ್ದಿದ್ದರು.

ಆಸ್ಟ್ರೇಲಿಯಾ ಓಪನ್ ಕಿರೀಟ ಗೆಲ್ಲುವ ಮೂಲಕ 2026ರ ಋತುವನ್ನು ಭರ್ಜರಿಯಾಗಿ ಆರಂಭಿಸಿದ್ದ 22 ವರ್ಷ ವಯಸ್ಸಿನ ಅಲ್ಕರಾಜ್ ಅವರು ನಂತರ ದೋಹಾದಲ್ಲಿ ಪ್ರಶಸ್ತಿ ಗೆದ್ದರು. ಬಳಿಕ ಇಂಡಿಯನ್ ವೆಲ್ಸ್ ಸೆಮಿಫೈನಲ್‌ನಲ್ಲಿ ರಷ್ಯಾದ ಡೇನಿಯಲ್ ಮೆಡ್ವೆಡೇವ್‌ಗೆ ಮಣಿದಿದ್ದರು. ಇದರಿಂದ 16 ಪಂದ್ಯಗಳ ಗೆಲುವಿನ ಓಟಕ್ಕೆ ತಡೆಬಿದ್ದಿತ್ತು. ಪ್ರಸಕ್ತ ವರ್ಷ ಅಲ್ಕರಾಜ್ ಅವರಿಗೆ ಎರಡನೇ ಸೋಲು ಇದಾಗಿದೆ.

ಸೆಬಾಸ್ಟಿಯನ್ ಅವರು ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಸ್ಪ್ಯಾನಿಷ್ ಅರ್ಹತಾ ಆಟಗಾರ ಮಾರ್ಟಿನ್ ಲ್ಯಾಂಡಲೂಸ್ ಅವರನ್ನು ಎದುರಿಸಲಿದ್ದಾರೆ. ಮಾರ್ಟಿನ್ 6-3, 7-6 (7/2)ರಿಂದ 14ನೇ ಶ್ರೇಯಾಂಕದ ಕರೆನ್ ಖಚನೋವ್ (ರಷ್ಯಾ) ಅವರಿಗೆ ಆಘಾತ ನೀಡಿದರು.

ಸಬಲೆಂಕಾ ಮುನ್ನಡೆ: ವಿಶ್ವದ ಅಗ್ರಮಾನ್ಯ ಆಟಗಾರ್ತಿ ಅರಿನಾ ಸಬಲೆಂಕಾ ಅವರು ಮಹಿಳೆಯರ ಸಿಂಗಲ್ಸ್ 32ರ ಘಟ್ಟದ ಪಂದ್ಯದಲ್ಲಿ 6-4, 6-2 ಅಂತರದಿಂದ 72ನೇ ಶ್ರೇಯಾಂಕಿತ ಅಮೆರಿಕದ ಕ್ಯಾಟಿ ಮೆಕ್‌ನಾಲಿ ಅವರನ್ನು ಸೋಲಿಸಿದರು.

ಬೆಲರೂಸ್‌ನ ಆಟಗಾರ್ತಿ ಮುಂದಿನ ಸುತ್ತಿನಲ್ಲಿ ಒಲಿಂಪಿಕ್ ಚಿನ್ನದ ಪದಕ ವಿಜೇತೆ ಝೆಂಗ್ ಕಿನ್ವೆನ್ ಅವರನ್ನು ಎದುರಿಸುವರು. 23ನೇ ಶ್ರೇಯಾಂಕದ ಚೀನಾ ಆಟಗಾರ್ತಿ 6-3, 6-4ರಿಂದ 15ನೇ ಶ್ರೇಯಾಂಕದ ಮ್ಯಾಡಿಸನ್ ಕೀಸ್ (ಅಮೆರಿಕ) ಅವರನ್ನು ಮಣಿಸಿದರು.

ಎರಡನೇ ಶ್ರೇಯಾಂಕದ ಎಲಿನಾ ರಿಬಾಕಿನಾ 6-3, 6-4ರಿಂದ ಉಕ್ರೇನ್‌ನ ಮಾರ್ತಾ ಕೋಸ್ಟ್ಯುಕ್ ಅವರನ್ನು ಮಣಿಸಿ ಪ್ರಿ ಕ್ವಾರ್ಟರ್ ಫೈನಲ್ ತಲುಪಿದರು. ಕಜಾಕಸ್ತಾನದ ರಿಬಾಕಿನಾ ಅವರು ಮುಂದಿನ ಪಂದ್ಯದಲ್ಲಿ ಕ್ವಾಲಿಫೈಯರ್ ಆಟಗಾರ್ತಿ ತಾಲಿಯಾ ಗಿಬ್ಸನ್ ಅವರನ್ನು ಎದುರಿಸುವರು. ಆಸ್ಟ್ರೇಲಿಯಾದ ತಾಲಿಯಾ 6-2, 6-2ರಿಂದ 18ನೇ ಶ್ರೇಯಾಂಕದ ಇವಾ ಜೊವಿಕ್ (ಅಮೆರಿಕ) ಅವರನ್ನು ಸೋಲಿಸಿದರು.



ಕಾರ್ಲೋಸ್ ಅಲ್ಕರಾಜ್ ಅವರನ್ನು ಮಣಿಸಿದ ಸಂಭ್ರಮದಲ್ಲಿ ಅಮೆರಿಕದ ಸೆಬಾಸ್ಟಿಯನ್ ಕೊರ್ಡಾ ಎಎಫ್‌ಪಿ ಚಿತ್ರ

ಹಾಕಿ: ಪ್ರಶಸ್ತಿ ರೇಸ್‌ನಲ್ಲಿ ಹಾರ್ದಿಕ್, ಸುಖಜೀತ್

ನವದೆಹಲಿ (ಪಿಟಿಐ): ಭಾರತ ತಂಡದ ಸ್ಟಾರ್ ಮಿಡ್‌ಫೀಲ್ಡರ್ ಹಾರ್ದಿಕ್ ಸಿಂಗ್, ಮುನ್ನಡೆ ಆಟಗಾರರಾದ ಸುಖಜೀತ್ ಸಿಂಗ್, ಸಂಜಯ್ ಮತ್ತು ಡಿಫೆಂಡರ್ ಅಭಿಷೇಕ್ ಅವರು ಹಾಕಿ ಇಂಡಿಯಾದ ‘ಬಲ್ಬೀರ್ ಸಿಂಗ್ ಸೀನಿಯರ್ ವರ್ಷದ ಆಟಗಾರ’ ಪ್ರಶಸ್ತಿಯ ರೇಸ್‌ನಲ್ಲಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ತಂಡದ ನಾಯಕಿ ಸಲಿಮಾ ಟೇಟೆ, ನವನೀತ್ ಕೌರ್, ಲಾಲ್ರೆಮ್‌ಸಿಯಾಮಿ ಮತ್ತು ಸವಿತಾ ಅವರು ‘ವರ್ಷದ ಆಟಗಾರ್ತಿ’ ಗೌರವಕ್ಕೆ ನಾಮ ನಿರ್ದೇಶನಗೊಂಡಿದ್ದಾರೆ.

ಹಾಕಿ ಇಂಡಿಯಾದ ವಾರ್ಷಿಕ ಪ್ರಶಸ್ತಿಗಳನ್ನು ಶುಕ್ರವಾರ ನಡೆಯುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು. ಎಂಟು ವಿಭಾಗಗಳಲ್ಲಿ ಒಟ್ಟು 32 ಮಂದಿ ಆಟಗಾರ ಮತ್ತು ಆಟಗಾರ್ತಿಯರ ಹೆಸರನ್ನು ಅಂತಿಮಗೊಳಿಸಲಾಗಿದೆ.

ಬಲ್ಜಿತ್ ಸಿಂಗ್ ವರ್ಷದ ಗೋಲ್‌ಕೀಪರ್ ಪ್ರಶಸ್ತಿ, ಪರ್ಗತ್ ಸಿಂಗ್ ವರ್ಷದ ರಕ್ಷಣೆ ಆಟಗಾರ ಪ್ರಶಸ್ತಿ, ಅಜಿತ್ ಪಾಲ್ ಸಿಂಗ್ ವರ್ಷದ ಮಿಡ್‌ಫೀಲ್ಡರ್ ಪ್ರಶಸ್ತಿ, ಧನರಾಜ್ ಪಿಳ್ಳೆ ವರ್ಷದ ಫಾರ್ವರ್ಡ್ ಆಟಗಾರ ಪ್ರಶಸ್ತಿ, ಅಸುಂತ ಲಾಕ್ರಾ ವರ್ಷದ ಉದಯೋನ್ಮುಖ ಆಟಗಾರ್ತಿ (21 ವರ್ಷದೊಳಗಿನ ಮಹಿಳೆಯರು) ಪ್ರಶಸ್ತಿ ಮತ್ತು ಜುಗರಾಜ್ ಸಿಂಗ್ ವರ್ಷದ ಉದಯೋನ್ಮುಖ ಆಟಗಾರ ಪ್ರಶಸ್ತಿಯನ್ನೂ ಅಂದು ಪ್ರದಾನ ಮಾಡಲಾಗುವುದು.



ಹಾರ್ದಿಕ್ ಸಿಂಗ್

ಐಪಿಎಲ್‌ಗೆ ಸಿದ್ಧತೆಗಳು ಜೋರು

28ರಂದು ಉದ್ಘಾಟನಾ ಪಂದ್ಯ • ವೆಬ್‌ಸೈಟ್, ಆ್ಯಪ್‌ನಲ್ಲಿ ಟಿಕೆಟ್ ಖರೀದಿಗೆ ಅವಕಾಶ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಐಪಿಎಲ್ ಉದ್ಘಾಟನಾ ಪಂದ್ಯಕ್ಕೆ ಒಂದೆಡೆ ಭರದ ಸಿದ್ಧತೆಗಳು ನಡೆದಿವೆ. ಇನ್ನೊಂದೆಡೆ ಪಂದ್ಯಗಳ ಟಿಕೆಟ್‌ಗಳನ್ನು ಆನ್‌ಲೈನ್‌ನಲ್ಲಿ ಮಾರಾಟ ಮಾಡಲು ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರ್ಯಾಂಚೈಸಿ ನಿರ್ಧರಿಸಿದೆ.

ಕ್ರೀಡಾಂಗಣದ ನವೀಕರಣದ ಭಾಗವಾಗಿ ಹೊಸ ಪ್ರವೇಶದ್ವಾರಗಳಿಗೆ ಸಂಖ್ಯೆಗಳನ್ನು ಅಳವಡಿಸುವ, ಗೇಟ್‌ಗಳಿಗೆ ಮಾರ್ಗದ ನಕ್ಷೆಗಳನ್ನು ಅಲ್ಲಲ್ಲಿ ಹಾಕುವ ಕಾರ್ಯ ಭರದಿಂದ ನಡೆದಿದೆ.

ಆರ್‌ಸಿಬಿಯ ವೆಬ್‌ಸೈಟ್ ಮತ್ತು ಆ್ಯಪ್ ಮೂಲಕ ಟಿಕೆಟ್‌ಗಳನ್ನು ಖರೀದಿಸಲು ಅವಕಾಶ ನೀಡಲಾಗುವುದು ಎಂದು ಫ್ರ್ಯಾಂಚೈಸಿಯು ತನ್ನ ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಿದೆ. ಆದರೆ ಟಿಕೆಟ್ ಮಾರಾಟ ಆರಂಭಿಸುವ ದಿನಾಂಕ ಹಾಗೂ ಬೆಲೆಗಳ ಬಗ್ಗೆ ಇನ್ನೂ ವಿವರ ನೀಡಿಲ್ಲ.

ಈ ಸಲ ಕೆಎಸ್‌ಸಿಎ ಆಜೀವ ಸದಸ್ಯರಿಗೂ ಕೂಡ ಆನ್‌ಲೈನ್ ಮೂಲಕವೇ ಪಾಸ್‌ಗಳನ್ನು ವಿತರಿಸಲು ಯೋಜಿಸಲಾಗಿದೆ ಎಂದೂ ಹೇಳಲಾಗಿದೆ. ಮಂಗಳವಾರದಿಂದ ಸದಸ್ಯರಿಗೆ ಪಾಸ್ ವಿತರಿಸುವ ಸಾಧ್ಯತೆ ಇದೆ ಎನ್ನಲಾಗಿದೆ.

ಟಿಕೆಟ್‌ಗೆ ಬೇಡಿಕೆ: ಆರ್‌ಸಿಬಿಯು ಟಿಕೆಟ್ ಆನ್‌ಲೈನ್ ಮೂಲಕ ಮಾತ್ರ ಸಿಗಲಿದೆ ಎಂದು ಹೇಳಿದ್ದರೂ ಕ್ರಿಕೆಟ್ ಅಭಿಮಾನಿಗಳು ಮೈದಾನದ ಸುತ್ತ ಜಮಾಯಿಸುವುದು ತಪ್ಪಿಲ್ಲ. ಸೋಮವಾರ ಕೂಡ ಹಲವು ಅಭಿಮಾನಿಗಳು ಕ್ರೀಡಾಂಗಣದ ಬಳಿ ಸೇರಿದ್ದರು.


ಈ ಸಲವೂ ಟಿಕೆಟ್‌ಗಳ ಬೆಲೆಯು ₹ 2300 ರಿಂದ ₹ 42 ಸಾವಿರದವರೆಗೆ ಇರಬಹುದು ಎಂದು ಹೇಳಲಾಗುತ್ತಿದೆ.

ಆದರೆ; ನಕಲಿ ಟಿಕೆಟ್ ವೆಬ್‌ಸೈಟ್, ಲಿಂಕ್‌ಗಳ ಬಗ್ಗೆ ಎಚ್ಚರಿಕೆ ವಹಿಸಬೇಕು ಎಂದು ನಗರ ಪೊಲೀಸರು ಈಗಾಗಲೇ ಅಭಿಮಾನಿಗಳಿಗೆ ಸಂದೇಶ ನೀಡಿದ್ದಾರೆ.

ಆರ್‌ಸಿಬಿ ಅಭ್ಯಾಸ: ಆರ್‌ಸಿಬಿ ಆಟಗಾರರು ಸೋಮವಾರ ಸಂಜೆ ನೆಟ್ಸ್ ಅಭ್ಯಾಸ ನಡೆಸಿದರು. ಸುಮಾರು ಎರಡೂವರೆ ತಾಸು ಫೀಲ್ಡಿಂಗ್, ಬೌಲಿಂಗ್ ಮತ್ತು ಬ್ಯಾಟಿಂಗ್ ತಾಲೀಮು ಮಾಡಿದರು. ಜೊತೆಗೆ ಫಿಟ್‌ನೆಸ್ ಡ್ರಿಲ್ ಕೂಡ ನಡೆಯಿತು.

ವೆಸ್ಟ್ ಇಂಡೀಸ್ ಆಟಗಾರ ರೊಮಾರಿಯೊ ಶೆಫರ್ಡ್ ಅವರೂ ತಂಡವನ್ನು ಸೇರಿಕೊಂಡಿದ್ದಾರೆ.

ಐಪಿಎಲ್ ಮೊದಲ ಹಂತದ ವೇಳಾಪಟ್ಟಿಯ ಪ್ರಕಾರ ಮಾರ್ಚ್ 28 ಮತ್ತು ಏಪ್ರಿಲ್ 5ರಂದು ಬೆಂಗಳೂರಿನಲ್ಲಿ ಪಂದ್ಯಗಳು ನಡೆಯಲಿವೆ.



ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದಿರುವ ಸಿದ್ಧತೆಗಳ ಪರಿಶೀಲನೆ ಸೋಮವಾರ ನಡೆಯಿತು. ಈ ವೇಳೆ ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಹಾಕೇ, ಕೆಎಸ್‌ಸಿಎ ಕಾರ್ಯದರ್ಶಿ ಸಂತೋಷ್ ಮೆನನ್ ಪಾಲ್ಗೊಂಡಿದ್ದರು


ಪೊಲೀಸರಿಂದ ಸಿದ್ಧತೆ ಪರಿಶೀಲನೆ

ಬೆಂಗಳೂರು: ಐಪಿಎಲ್ ಟೂರ್ನಿಗೆ ಪೂರ್ವಭಾವಿಯಾಗಿ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭದ್ರತಾ ಪರಿಶೀಲನೆ ಸಂಬಂಧ ಪೊಲೀಸರು ಸೋಮವಾರ ತಪಾಸಣೆ ನಡೆಸಿದರು.

ಕೇಂದ್ರ ವಿಭಾಗದ ಡಿಸಿಪಿ ಅಕ್ಷಯ್ ಎಂ. ಹಾಕೇ ಸೇರಿ ಇತರ ಪೊಲೀಸ್ ಅಧಿಕಾರಿಗಳು ಕ್ರೀಡಾಂಗಣಕ್ಕೆ ಭೇಟಿ ನೀಡಿ ತಜ್ಞರ ಸಮಿತಿ ನಿಗದಿ ಪಡಿಸಿರುವ ಸುರಕ್ಷತಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆಯೇ ಎಂದು ಪರಿಶೀಲಿಸಿದರು. ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಅಧ್ಯಕ್ಷ ವೆಂಕಟೇಶ್ ಪ್ರಸಾದ್ ಅವರ ಜತೆಗೂ ಸಮಾಲೋಚನೆ ನಡೆಸಿದರು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ಬಾರಿ ಯಾವುದೇ ಕಾರಣಕ್ಕೂ ಅಹಿತಕರ ಘಟನೆ ನಡೆಯಬಾರದು ಎಂದು ಪೊಲೀಸ್ ಇಲಾಖೆ ಎಚ್ಚರಿಕೆ ವಹಿಸಿದೆ.

ಸ್ಟಾರ್ಕ್‌ಗೆ ಇನ್ನೂ ಸಿಗದ ನಿರಾಕ್ಷೇಪಣಾ ಪತ್ರ



ನವದೆಹಲಿ (ಪಿಟಿಐ): ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಆಡಲು ವೇಗದ ಬೌಲರ್ ಮಿಚೆಲ್ ಸ್ಟಾರ್ಕ್ ಅವರಿಗೆ ಕ್ರಿಕೆಟ್ ಆಸ್ಟ್ರೇಲಿಯಾವು ನಿರಾಕ್ಷೇಪಣಾ ಪತ್ರವನ್ನು ಇನ್ನೂ ನೀಡಿಲ್ಲ ಎಂದು ಫ್ರಾಂಚೈಸಿಯು ಸೋಮವಾರ ತಿಳಿಸಿದೆ. ಆದರೆ ಏಪ್ರಿಲ್ 1ರಂದು ಮೊದಲ ಪಂದ್ಯದ (ಲಖನೌ ಸೂಪರ್ ಜೈಂಟ್ಸ್ ವಿರುದ್ಧ) ವೇಳೆ ಸ್ಟಾರ್ಕ್ ಲಭ್ಯರಾಗುವ ವಿಶ್ವಾಸವನ್ನು ತಂಡ ವ್ಯಕ್ತಪಡಿಸಿದೆ.

ಸೋಮವಾರ ನಡೆದ ಮಾಧ್ಯಮ ಸಂವಾದದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ನಾಯಕ ಅಕ್ಷರ್ ಪಟೇಲ್, ಕ್ರಿಕೆಟ್ ನಿರ್ದೇಶಕ ವೇಣುಗೋಪಾಲ್ ರಾವ್ ಮತ್ತು ಕೋಚ್ ಹೆಮಾಂಗ್ ಬದಾನಿ ಅವರಿಗೆ ಸ್ಟಾರ್ಕ್ ಲಭ್ಯತೆ ಕುರಿತಂತೆ ಪ್ರಶ್ನೆಗಳೂ ಎದುರಾದವು.

‘ಕ್ರಿಕೆಟ್ ಆಸ್ಟ್ರೇಲಿಯಾದ ನಿರಾಕ್ಷೇಪಣಾ ಪತ್ರಕ್ಕೆ ಕಾಯುತ್ತಿದ್ದೇವೆ. ಅದನ್ನು ಪಡೆದ ತಕ್ಷಣ ಸ್ಟಾರ್ಕ್ ತಂಡವನ್ನು ಸೇರಿಕೊಳ್ಳುವ ದಿನಾಂಕ ತಿಳಿಯಲಿದೆ’ ಎಂದು ಬದಾನಿ ಹೇಳಿದರು.

ಇಂಪ್ಯಾಕ್ಟ್ ಪ್ಲೇಯರ್ ನಿಯಮಕ್ಕೆ ಅತೃಪ್ತಿ

ನವದೆಹಲಿ (ಪಿಟಿಐ): ಐಪಿಎಲ್‌ನಲ್ಲಿ ಇಂಪ್ಯಾಕ್ಟ್ ಪ್ಲೇಯರ್ ನಿಯಮಕ್ಕೆ ಅತೃಪ್ತಿ ವ್ಯಕ್ತಪಡಿಸಿದ ಪ್ರಮುಖ ಆಟಗಾರರ ಸಾಲಿಗೆ ಭಾರತ ಟಿ20 ತಂಡದ ಉಪನಾಯಕ ಅಕ್ಷರ್ ಪಟೇಲ್ ಅವರೂ ಸೇರ್ಪಡೆಯಾಗಿದ್ದಾರೆ. ಇದರಿಂದ ಆಲ್‌ರೌಂಡರ್ ಆಟಗಾರರ ಬೆಳವಣಿಗೆ ಕುಂಠಿತಗೊಳ್ಳುತ್ತದೆ ಎಂದು ಡೆಲ್ಲಿ ಕ್ಯಾಪಿಟಲ್ಸ್ ತಂಡದ ನಾಯಕರಾಗಿರುವ ಅಕ್ಷರ್ ಹೇಳಿದ್ದಾರೆ.

‘ನನಗೆ ಇದು (ಇಂಪ್ಯಾಕ್ಟ್ ಪ್ಲೇಯರ್ ನಿಯಮ) ಇಷ್ಟವಾಗಿಲ್ಲ’ ಎಂದು ಸ್ವತಃ ಆಲ್‌ರೌಂಡರ್ ಆಗಿರುವ ಅಕ್ಷರ್ ಹೇಳಿದ್ದಾರೆ. ಈ ಹಿಂದೆ ರೋಹಿತ್ ಶರ್ಮಾ ಮತ್ತು ಹಾರ್ದಿಕ್ ಪಾಂಡ್ಯ ಅವರೂ ಈ ನಿಯಮದ ವಿರುದ್ಧ ಮಾತನಾಡಿದ್ದರು.

ಈ ನಿಯಮದ ಅನ್ವಯ, ಐವರು ಸಬ್‌ಸ್ಟಿಟ್ಯೂಟ್ ಆಟಗಾರರಲ್ಲಿ ಯಾರಾದರೂ ಒಬ್ಬರು ಪಂದ್ಯದ ಯಾವುದೇ ಹಂತದಲ್ಲಿ ‘ಇಂಪ್ಯಾಕ್ಟ್ ಆಟಗಾರ’ನಾಗಿ ಕಣಕ್ಕಿಳಿಯಲು ಅವಕಾಶವಿದೆ. 2023ರಲ್ಲಿ ಈ ನಿಯಮ ಜಾರಿಗೆ ತರಲಾಯಿತು. ಇದು ಕಡೇಪಕ್ಷ 2027ರವರೆಗೆ ಜಾರಿಯಲ್ಲಿ ಇರಲಿದೆ.

ಸೈಪ್ರಸ್‌ನಲ್ಲಿ ಇದೇ 28ರಿಂದ ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿ

ಹಂಪಿ ಬದಲು ಮುಝಿಚುಕ್

ನವದೆಹಲಿ (ಪಿಟಿಐ): ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯಿಂದ ಹಿಂದೆ ಸರಿದಿರುವ ಭಾರತದ ಕೋನೇರು ಹಂಪಿ ಅವರ ಸ್ಥಾನದಲ್ಲಿ ಉಕ್ರೇನ್‌ನ ಅನ್ನಾ ಮುಝಿಚುಕ್ ಅವರಿಗೆ ಅವಕಾಶ ನೀಡಲಾಗಿದೆ. ಈ ಟೂರ್ನಿ ಸೈಪ್ರಸ್‌ನಲ್ಲಿ ಇದೇ 28ರಿಂದ ನಡೆಯಲಿದೆ.

ಪಶ್ಚಿಮ ಏಷ್ಯಾದಲ್ಲಿ ತಲೆದೋರಿರುವ ಸಂಘರ್ಷದ ಕಾರಣ, ಆ ಪ್ರದೇಶಕ್ಕೆ ಹೊಂದಿಕೊಂಡಿರುವ ಸೈಪ್ರಸ್‌ನಲ್ಲಿ ಸುರಕ್ಷತೆಯ ಕಳವಳ ವ್ಯಕ್ತಪಡಿಸಿ ಭಾರತದ ಅನುಭವಿ ಆಟಗಾರ್ತಿ ಕ್ಯಾಂಡಿಡೇಟ್ಸ್ ಟೂರ್ನಿಯಿಂದ ಭಾನುವಾರ ಹಿಂದೆಸರಿದಿದ್ದರು. ಸೈಪ್ರಸ್‌ನ ಪಾಫೋಸ್‌ನಲ್ಲಿ ಈ ಟೂರ್ನಿ ಏಪ್ರಿಲ್ 16ರವರೆಗೆ ನಡೆಯಲಿದೆ.

ಈ ಟೂರ್ನಿಯ ಓಪನ್ ವಿಭಾಗದಲ್ಲಿ ವಿಜೇತನಾಗುವ ಆಟಗಾರ, ಹಾಲಿ ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರಿಗೆ ಸವಾಲು ಹಾಕುವ ಅರ್ಹತೆ ಪಡೆಯುತ್ತಾರೆ. ಮಹಿಳಾ ವಿಭಾಗದ ವಿಜೇತ ಆಟಗಾರ್ತಿಯು, ವಿಶ್ವ ಚಾಂಪಿಯನ್ ಮಾ ವೆಂಜುನ್ (ಚೀನಾ) ಅವರಿಗೆ ಚಾಲೆಂಜರ್ ಆಗಲಿದ್ದಾರೆ.

ಮುಝಿಚುಕ್ 2016ರಲ್ಲಿ ವಿಶ್ವ ರ‍್ಯಾಪಿಡ್ ಚೆಸ್ ಚಾಂಪಿಯನ್ ಆಗಿದ್ದರು. 2014 ಮತ್ತು 2016ರಲ್ಲಿ ವಿಶ್ವ ಬ್ಲಿಟ್ಝ್ ಕಿರೀಟ ಧರಿಸಿದ್ದರು. 2,600 ರೇಟಿಂಗ್ ದಾಟಿರುವ ಕೆಲವೇ ಆಟಗಾರ್ತಿಯರಲ್ಲಿ ಅವರು ಒಬ್ಬರು.



ಮುಝಿಚುಕ್

ಓಪನ್ ವಿಭಾಗದಲ್ಲಿ ಆಡುತ್ತಿರುವ ಎಂಟು ಮಂದಿಯಲ್ಲಿ ಭಾರತದ ಪ್ರಜ್ಞಾನಂದ ಅವರು ಒಳಗೊಂಡಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಹಂಪಿ ಹಿಂದೆಸರಿದ ನಂತರ, ವಿಶ್ವಕಪ್ ವಿಜೇತೆ ದಿವ್ಯಾ ದೇಶಮುಖ್, ಪ್ರಜ್ಞಾನಂದ ಅವರ ಅಕ್ಕ ಆರ್.ವೈಶಾಲಿ ಅವರು ಕಣದಲ್ಲಿ ಉಳಿದಿರುವ ಭಾರತದ ಆಟಗಾರ್ತಿಯರಾಗಿದ್ದಾರೆ.

ಹಿಂದೆಸರಿದಿದ್ದಕ್ಕೆ ಹಂಪಿ ಅವರಿಗೆ ಸುಮಾರು ₹11 ಲಕ್ಷ ದಂಡ ವಿಧಿಸುವ ಸಾಧ್ಯತೆಯಿದೆ. ಆದರೆ ಫಿಡೆ ಈ ಬಗ್ಗೆ ಇನ್ನೂ ಅಂತಿಮ ನಿರ್ಧಾರಕ್ಕೆ ಬಂದಿಲ್ಲ.

‘ನೆಮ್ಮದಿಯಿಂದ ಆಡುವುದಾದರೂ ಹೇಗೆ?’



ಕೋನೇರು ಹಂಪಿ

ನವದೆಹಲಿ (ಪಿಟಿಐ): ಭಾರತದ ಅನುಭವಿ ಚೆಸ್ ಆಟಗಾರ್ತಿ ಕೋನೇರು ಹಂಪಿ ಅವರು ಪ್ರತಿಷ್ಠಿತ ಕ್ಯಾಂಡಿಡೇಟ್ಸ್ ಟೂರ್ನಿಯಿಂದ ಹಿಂದೆಸರಿದ ತಮ್ಮ ನಿರ್ಧಾರವನ್ನು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ. ‘ಯುದ್ಧನೌಕೆಗಳಿಂದ ಸುತ್ತುವರಿದ ದೇಶದಲ್ಲಿ ನೆಮ್ಮದಿಯಿಂದ ಆಡಲು ಆಗುವುದಿಲ್ಲ’ ಎಂದು ಹೇಳಿದ್ದಾರೆ.

‘ಯಾವುದೇ ದಂಡಕ್ಕೆ ಹೆದರುವುದಿಲ್ಲ. ಹಣ ಮಾಡಿಕೊಳ್ಳುವ ಉದ್ದೇಶದಿಂದ ನಾನೇನೂ ಆಡುವುದಿಲ್ಲ’ ಎಂದೂ ಕಟುವಾಗಿ ಹೇಳಿದ್ದಾರೆ.

‘ಯುದ್ಧನೌಕೆಗಳಿಂದ ಸುತ್ತುವರಿದಿರುವ ದ್ವೀಪದಲ್ಲಿ (ಸೈಪ್ರಸ್‌ನಲ್ಲಿ) ನಡೆಯುವ ಈ ಮಹತ್ವದ ಟೂರ್ನಿಗೆ, ಅದೂ ಮಹಿಳೆಯಾಗಿ ನಾನು ನಿರಾತಂಕವಾಗಿ ಆಡುವುದಾದರೂ ಹೇಗೆ?’ ಎಂದು ಅವರು ಸುದ್ದಿಸಂಸ್ಥೆಯೆದುರು ಕಳವಳ ವ್ಯಕ್ತಪಡಿಸಿದ್ದಾರೆ. ಈ ಟೂರ್ನಿಯನ್ನು ಒಂದು ತಿಂಗಳು ಮುಂದೂಡಿದ್ದರೆ ಅಥವಾ ಬೇರೊಂದು ತಾಣಕ್ಕೆ ಸ್ಥಳಾಂತರಿಸಿದ್ದರೆ ಅಂಥ ವ್ಯತ್ಯಾಸವೇನೂ ಆಗುತ್ತಿರಲಿಲ್ಲ ಎಂದಿದ್ದಾರೆ. ಮೆಡಿಟರೇನಿಯನ್ ಸಾಗರದ ಪೂರ್ವದಲ್ಲಿರುವ ಈ ದೇಶ ಲೆಬನಾನ್ ಮತ್ತು ಇಸ್ರೇಲ್‌ಗೆ ಸನಿಹದಲ್ಲಿದೆ.


ನೆಟ್‌ಬಾಲ್ ತಂಡಕ್ಕೆ ಚೇತನ್ ನಾಯಕ

ಬೆಂಗಳೂರು: ಚಾಮರಾಜನಗರ ಜಿಲ್ಲೆಯ ಎಸ್. ಚೇತನ್ ಅವರು ಉತ್ತರಪ್ರದೇಶದ ಮೀರಠ್‌ನಲ್ಲಿ ಇದೇ 27ರಿಂದ 29ರ ವರೆಗೆ ನಡೆಯಲಿರುವ 4ನೇ ‘ಫಾಸ್ಟ್ ಫೈವ್’ ಜೂನಿಯರ್ ರಾಷ್ಟ್ರೀಯ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ಬಾಲಕರ ತಂಡವನ್ನು ಮುನ್ನಡೆಸಲಿದ್ದಾರೆ. ಬೆಂಗಳೂರಿನ ಜಿ.ಇಂದು ಬಾಲಕಿಯರ ತಂಡವನ್ನು ಮುನ್ನಡೆಸಲಿದ್ದಾರೆ.

ತಂಡಗಳು: ಬಾಲಕರು: ಎಸ್. ಚೇತನ್ (ನಾಯಕ), ವಿವೇಕ್ ಆರ್, ಅಕ್ಷಯ್ ಎಚ್.ಎ., ತನ್ಮಯ್ ಗೌಡ ಪಿ., ಸಾತ್ವಿಕ್ ಎಸ್.ವಿ., ವರುಣ್ ಕೆ., ರವಿರಾಜ್ ಆರ್., ರುದ್ರಪ್ರಸಾದ್, ಮುತ್ತುರಾಜ್ ಸಿ.ಆರ್., ಆರ್ಯನ್ ಎಸ್., ಪಿ.ಡಿ. ರೋಹಿತ್(ಕೋಚ್).

ಬಾಲಕಿಯರು: ಜಿ.ಇಂದು (ನಾಯಕಿ), ತನ್ವಿ ವಿ.ಎಚ್, ದೀಪ್ತಿ ಎಚ್.ಎಸ್., ಲಿಖಿತಾ ಎಂ., ನಿತ್ಯಶ್ರೀ ಕೆ.ವೈ., ಫಾಲಾಕ್, ಸುಪ್ರಿಯ ಎಚ್.ಎಸ್., ನಿವೇದಿತಾ ಎಚ್.ಎಂ., ಎಸ್. ಹರಿಪ್ರಿಯಾ, ಎಸ್. ದಿಶಾ, ವಿ. ಸಹನಾ (ಕೋಚ್), ತೇಜು ಪಿ.(ಮ್ಯಾನೇಜರ್).

ತ್ಯಾಗರಾಜನ್ ನಿಧನ



ಚೆನ್ನೈ (ಪಿಟಿಐ): ಹಿರಿಯ ಕ್ರೀಡಾ ಪತ್ರಕರ್ತ, ದಿ ಹಿಂದು ಪತ್ರಿಕೆಯ ಕ್ರೀಡಾ ಸಂಪಾದಕರಾಗಿದ್ದ ಎಸ್. ತ್ಯಾಗರಾಜನ್ (85) ಅವರು ಅನಾರೋಗ್ಯದಿಂದ ಸೋಮವಾರ ನಿಧನರಾದರು.

1962 ರಿಂದ 2013ರವರೆಗೆ ಹಿಂದು ಪತ್ರಿಕೆಯಲ್ಲಿ ಕಾರ್ಯನಿರ್ವಹಿಸಿದ್ದ ಅವರು ಆರು ಒಲಿಂಪಿಕ್ಸ್ ಜೊತೆ ಒಂಬತ್ತು ಏಷ್ಯನ್ ಕ್ರೀಡೆಗಳ ವರದಿ ಮಾಡಿದ್ದರು. ಹಾಕಿ ಆಟದ ವರದಿಗಾರಿಕೆಯಲ್ಲಿ ಪರಿಣತಿ ಪಡೆದಿದ್ದರು. ಭಾರತ ಕ್ರೀಡಾ ಪತ್ರಕರ್ತರ ಒಕ್ಕೂಟದ ಅಧ್ಯಕ್ಷರಾಗಿಯೂ ಕೆಲಸ ಮಾಡಿದ್ದರು.

ಏಷ್ಯನ್ ಟೀಮ್ ಸ್ಕ್ವಾಷ್ ಚಾಂಪಿಯನ್‌ಷಿಪ್ ಮುಂದೂಡಿಕೆ

ಕರಾಚಿ (ಪಿಟಿಐ): ಇಸ್ಲಾಮಾಬಾದ್‌ನಲ್ಲಿ ಮುಂದಿನ ತಿಂಗಳು ನಡೆಯಬೇಕಿದ್ದ ಏಷ್ಯನ್ ಟೀಮ್ ಸ್ಕ್ವಾಷ್ ಚಾಂಪಿಯನ್‌ಷಿಪ್ ಅನ್ನು ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷದಿಂದಾಗಿ ಮುಂದೂಡಲಾಗಿದೆ. ಕೂಟವು ಏ.14ರಿಂದ 18ರವರೆಗೆ ನಿಗದಿಯಾಗಿತ್ತು.

‘ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ನಡೆಯುತ್ತಿರುವಾಗ ಇಸ್ಲಾಮಾಬಾದ್‌ನಲ್ಲಿ ಚಾಂಪಿಯನ್‌ಷಿಪ್ ಆಯೋಜಿಸುವುದು ಕಾರ್ಯಸಾಧುವಲ್ಲ ಎಂದು ಏಷ್ಯಾ ಸ್ಕ್ವಾಷ್ ಫೆಡರೇಷನ್ ತಿಳಿಸಿದೆ. ಹೀಗಾಗಿ, ಪರಿಸ್ಥಿತಿ ಸುಧಾರಿಸಿದರೆ ಸೆಪ್ಟೆಂಬರ್‌ನಲ್ಲಿ ಆಯೋಜಿಸಲಾಗುವುದು’ ಎಂದು ಪಾಕಿಸ್ತಾನ ಸ್ಕ್ವಾಷ್ ಫೆಡರೇಷನ್‌ನ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚಾಂಪಿಯನ್‌ಷಿಪ್‌ಗೆ ತಂಡವನ್ನು ಕಳುಹಿಸಲು ಭಾರತ ಸ್ಕ್ವಾಷ್ ಫೆಡರೇಷನ್ ಒಪ್ಪಿದೆಯೇ ಎಂಬ ಪ್ರಶ್ನೆಗೆ, ‘ತಂಡಗಳ ಭಾಗವಹಿಸುವಿಕೆ ವಿಚಾರ ಏಷ್ಯಾ ಸ್ಕ್ವಾಷ್ ಫೆಡರೇಷನ್‌ಗೆ ಬಿಟ್ಟದ್ದು’ ಎಂದರು.

ರಾಷ್ಟ್ರೀಯ ಒಳಾಂಗಣ ಅಥ್ಲೆಟಿಕ್ಸ್ ಇಂದಿನಿಂದ

ಇದೇ ಮೊದಲ ಬಾರಿ ಆಯೋಜನೆ • ಭುವನೇಶ್ವರದ ಕಳಿಂಗ ಕ್ರೀಡಾಂಗಣ ಸಜ್ಜು

ಪ್ರಜಾವಾಣಿ ವಾರ್ತೆ/ಪಿಟಿಐ

ಭುವನೇಶ್ವರ: ಚೊಚ್ಚಲ ರಾಷ್ಟ್ರೀಯ ಒಳಾಂಗಣ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್ ಆತಿಥ್ಯಕ್ಕೆ ಇಲ್ಲಿನ ಕಳಿಂಗ ಕ್ರೀಡಾಂಗಣ ಸಜ್ಜಾಗಿದೆ. ಕೂಟವು ಮಂಗಳವಾರ ಆರಂಭವಾಗಲಿದ್ದು, 2028ರ ವಿಶ್ವ ಒಳಾಂಗಣ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಗೆ ಸಿದ್ಧತೆ ನಡೆಸಲು ಭಾರತದ ಅಥ್ಲೀಟ್‌ಗಳಿಗೆ ವೇದಿಕೆಯಾಗಲಿದೆ.

ಕ್ರೀಡಾಂಗಣವು 2024ರಲ್ಲಿ ಉದ್ಘಾಟನೆಯಾದರೂ, ಇದೇ ಮೊದಲ ಬಾರಿಗೆ ಇಲ್ಲಿ ಸ್ಪರ್ಧೆಗಳು ನಡೆಯಲಿವೆ. ಎರಡು ದಿನ ನಡೆಯುವ ಕೂಟದಲ್ಲಿ ಸೀನಿಯರ್ಸ್ ಹಾಗೂ 20 ವರ್ಷದೊಳಗಿನ ಪುರುಷರು ಮತ್ತು ಮಹಿಳೆಯರಿಗೆ ತಲಾ 11ರಂತೆ ಒಟ್ಟು 22 ಸ್ಪರ್ಧೆಗಳು ಇರಲಿವೆ. 300 ಅಥ್ಲೀಟ್‌ಗಳು ಭಾಗವಹಿಸುತ್ತಿದ್ದಾರೆ.

100 ಮೀ. ಹಾಗೂ 200 ಮೀ. ಓಟದಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಅನಿಮೇಶ್ ಕುಜೂರ್ ಅವರು 60 ಮೀ. ಓಟದಲ್ಲಿ ಸ್ಪರ್ಧಿಸಲಿದ್ದಾರೆ. ಟ್ರಿಪಲ್ ಜಂಪ್‌ನಲ್ಲಿ ರಾಷ್ಟ್ರೀಯ ದಾಖಲೆ ಹೊಂದಿರುವ ಪ್ರವೀಣ್ ಚಿತ್ರವೇಲ್ ಅವರು ಲಾಂಗ್‌ಜಂಪ್‌ನಲ್ಲಿ ಕಣಕ್ಕಿಳಿಯಲಿದ್ದಾರೆ. ಮೊಹಮ್ಮದ್ ಅಫ್ಸಲ್ (800 ಮೀ. ಓಟ) ಹಾಗೂ ಸರ್ವೇಶ್ ಅನಿಲ್ ಕುಶಾರೆ (ಹೈಜಂಪ್) ಅವರು ಕೂಟದಲ್ಲಿ ಭಾಗವಹಿಸುತ್ತಿರುವ ಖ್ಯಾತನಾಮ ಅಥ್ಲೀಟ್‌ಗಳು.

2028ರ ಏಷ್ಯನ್ ಒಳಾಂಗಣ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ಅನ್ನೂ ಇದೇ ಕ್ರೀಡಾಂಗಣದಲ್ಲಿ ಆಯೋಜಿಸುವ ಕಾರಣ, ಭಾರತ ಅಥ್ಲೆಟಿಕ್ಸ್ ಫೆಡರೇಷನ್‌ಗೆ ಈ ಕೂಟವು ಲೋಪದೋಷಗಳನ್ನು ಕಂಡುಕೊಳ್ಳಲು ನೆರವಾಗಲಿದೆ.

ಅಥ್ಲೀಟ್‌ಗಳ ಅಸಮಾಧಾನ: ‘ಅಂತೂ ಕಳಿಂಗ ಕ್ರೀಡಾಂಗಣದಲ್ಲಿ ಕೂಟ ನಡೆಯುತ್ತಿರುವುದು ಖುಷಿಯ ವಿಚಾರ. ಆದರೆ, ಏಷ್ಯನ್ ಒಳಾಂಗಣ ಅಥ್ಲೆಟಿಕ್ಸ್ (ಫೆ.6ರಿಂದ 8) ಹಾಗೂ ವಿಶ್ವ ಒಳಾಂಗಣ ಅಥ್ಲೆಟಿಕ್ಸ್ (ಮಾರ್ಚ್ 20ರಿಂದ 22) ಕೂಟಗಳು ಈಗಾಗಲೇ ಮುಗಿದಿವೆ. ಈಗ ಇಲ್ಲಿ ಈ ಕೂಟವನ್ನು ಆಯೋಜಿಸುವುದರಲ್ಲಿ ಅರ್ಥವಿಲ್ಲ’ ಎಂದು ಅನುಭವಿ ಅಥ್ಲೀಟ್ ಒಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

‘ಒಳಾಂಗಣ ಕೂಟದಲ್ಲಿ ಪಾಲ್ಗೊಳ್ಳುವ ಬದಲು ಏಷ್ಯನ್ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಕೂಟಗಳಿಗೆ (ಹೊರಾಂಗಣ) ಅರ್ಹತೆ ಪಡೆಯಲು ಪ್ರಯತ್ನ ಮಾಡುವೆ’ ಎಂದರು. ಇನ್ನೂ ಕೆಲವು ಅಥ್ಲೀಟ್‌ಗಳೂ ಇದೇ ರೀತಿಯ ಅಭಿಪ್ರಾಯ ವ್ಯಕ್ತಪಡಿಸಿದರು. ಈ ಕೂಟದ ಬದಲಿಗೆ ಬೆಂಗಳೂರಿನಲ್ಲಿ ಮುಂದಿನ ತಿಂಗಳು ನಡೆಯುವ ಭಾರತ ಅಥ್ಲೆಟಿಕ್ಸ್ ಸರಣಿ 1ರ ಬಗ್ಗೆ ಗಮನ ಹರಿಸುವುದಾಗಿ ತಿಳಿಸಿದರು.



ಭುವನೇಶ್ವರದ ಕಳಿಂಗ ಒಳಾಂಗಣ ಅಥ್ಲೆಟಿಕ್ಸ್ ಕ್ರೀಡಾಂಗಣ

ಯಾವೆಲ್ಲಾ ಸ್ಪರ್ಧೆ?

60 ಮೀ., 400 ಮೀ., 800 ಮೀ., 1500 ಮೀ., 3000 ಮೀ. ಓಟ, 60 ಮೀ. ಹರ್ಡಲ್ಸ್, ಹೈಜಂಪ್, ಲಾಂಗ್ ಜಂಪ್, ಟ್ರಿಪಲ್ ಜಂಪ್, ಶಾಟ್‌ಪಟ್ ಹಾಗೂ ಪೋಲ್ ವಾಲ್ಟ್ ಇವು ಕೂಟದಲ್ಲಿರುವ 11 ಸ್ಪರ್ಧೆಗಳು.

ಸುರಕ್ಷತಾ ಮಿತಿಗಳಿಂದಾಗಿ ಜಾವೆಲಿನ್ ಎಸೆತ, ಡಿಸ್ಕಸ್ ಥ್ರೋ ಹಾಗೂ ಸ್ಟೀಪಲ್‌ಚೇಸ್ ಸ್ಪರ್ಧೆಗಳಿಗೆ ಅವಕಾಶ ನೀಡಿಲ್ಲ. ಹೀಗಾಗಿ, ಜಾವೆಲಿನ್ ತಾರೆ ನೀರಜ್ ಚೋಪ್ರಾ ಹಾಗೂ ಸ್ಟೀಪಲ್ ಚೇಸರ್ ಅವಿನಾಶ್ ಸಾಬ್ಳೆ ಅವರು ಭಾಗವಹಿಸುತ್ತಿಲ್ಲ.


ಅರುಂಧತಿಗೆ ಐಸಿಸಿ ತಿಂಗಳ ಆಟಗಾರ್ತಿ ಗೌರವ

ದುಬೈ (ಪಿಟಿಐ): ಆಸ್ಟ್ರೇಲಿಯಾ ವಿರುದ್ಧ ಟಿ20 ಸರಣಿಯಲ್ಲಿ ಉತ್ತಮ ಬೌಲಿಂಗ್ ಪ್ರದರ್ಶಿಸಿದ್ದ ಭಾರತ ಮಹಿಳಾ ತಂಡದ ಮಧ್ಯಮ ವೇಗದ ಬೌಲರ್ ಅರುಂಧತಿ ರೆಡ್ಡಿ ಅವರು ಐಸಿಸಿ ಫೆಬ್ರುವರಿ ತಿಂಗಳ ಆಟಗಾರ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ.

ಪುರುಷರ ಟಿ20 ವಿಶ್ವಕಪ್‌ನಲ್ಲಿ ಸ್ಥಿರ ಬ್ಯಾಟಿಂಗ್ ಪ್ರದರ್ಶನ ನೀಡಿದ್ದ ಪಾಕಿಸ್ತಾನ ತಂಡದ ಆರಂಭ ಆಟಗಾರ ಸಾಹಿಬ್‌ಝಾದಾ ಫರ್ಹಾನ್ ಅವರನ್ನು ಐಸಿಸಿ ತಿಂಗಳ ಆಟಗಾರ ಗೌರವಕ್ಕೆ ಹೆಸರಿಸಲಾಗಿದೆ.



ಅರುಂಧತಿ ರೆಡ್ಡಿ



ಸಾಹಿಬ್‌ಝಾದಾ ಫರ್ಹಾನ್

ಅರುಂಧತಿ ಅವರು ಮೂರೂ ಪಂದ್ಯಗಳಲ್ಲಿ ಯಶಸ್ಸು ಪಡೆದು, ಭಾರತ ತಂಡವು ಟಿ20 ಸರಣಿಯನ್ನು 2–1 ರಿಂದ ಗೆಲ್ಲಲು ನೆರವಾಗಿದ್ದರು. ಮೂರು ಪಂದ್ಯಗಳಲ್ಲಿ ಕ್ರಮವಾಗಿ 22ಕ್ಕೆ4, 30ಕ್ಕೆ2 ಮತ್ತು 35ಕ್ಕೆ2 ಸಾಧನೆ ದಾಖಲಿಸಿದ್ದರು. 7.25ರ ಇಕಾನಮಿಯಲ್ಲಿ 10.87 ಸರಾಸರಿಯಲ್ಲಿ ವಿಕೆಟ್‌ಗಳನ್ನು ಪಡೆದಿದ್ದರು.

‘ಐಸಿಸಿ ತಿಂಗಳ ಆಟಗಾರ್ತಿಗೆ ಆಯ್ಕೆಯಾಗಿರುವುದು ನನ್ನ ಪಾಲಿಗೆ ಗೌರವದ ವಿಷಯ. ಅದಕ್ಕಿಂತ ವಿಶೇಷವೆನಿಸಿದ್ದು ಭಾರತ ತಂಡವು, ಆಸ್ಟ್ರೇಲಿಯಾದಲ್ಲಿ ಟಿ20 ಸರಣಿ ಗೆಲ್ಲಲು ನನ್ನ ಕೊಡುಗೆ ನೆರವಾಗಿದ್ದು’ ಎಂದು ಅರುಂಧತಿ ಪ್ರತಿಕ್ರಿಯಿಸಿದ್ದಾರೆ.

ಸಾಹಿಬ್‌ಝಾದಾ ಫರ್ಹಾನ್ ಅವರು ಟಿ20 ವಿಶ್ವಕಪ್ ಒಂದೇ ಆವೃತ್ತಿಯಲ್ಲಿ ಎರಡು ಶತಕ ದಾಖಲಿಸಿದ ಮೊದಲ ಆಟಗಾರ ಎನಿಸಿದ್ದರು. 7 ಪಂದ್ಯಗಳಲ್ಲಿ 76.60 ಸರಾಸರಿಯಲ್ಲಿ 383 ರನ್ ಗಳಿಸಿದ್ದರು.


MARUTI SUZUKI
NEXA
EXPERIENCE A NEW DAWN OF ELECTRIC MOBILITY.
Redefine your boundaries with Maruti Suzuki's First Electric SUV, the e VITARA.
Turn long drives into epic journeys, backed by India's Largest Fast Charging Network.
Designed to offer everything you expect from an SUV, and everything you didn't expect from an EV.
e VITARA
India goes electric
Introductory BaaS price
₹10.99 LAKH* + Battery EMI @ ₹3.99/km
e VITARA
INDIA'S LARGEST* FAST-CHARGING NETWORK
543km RANGE
543 km RANGE*
BHARAT NCAP
5 STAR SAFETY RATING BNCAP*
NEXA edge
60% ASSURED BUYBACK AFTER 3 YEARS
COMPLIMENTARY HOME CHARGER & INSTALLATION WORTH ₹ 50 000
8 YEARS WARRANTY • BATTERY: 8 YEARS • VEHICLE: 3+5(PAID) YEARS
COMPLIMENTARY CHARGING FOR 1 YEAR
SCAN TO CONNECT TO A SHOWROOM NEAR YOU
E-BOOK TODAY @ WWW.NEXAEXPERIENCE.COM
*₹ 10.99 lakh for e VITARA Delta. Battery EMI: ₹ 3.99/km (subject to financier terms). Taxes and statutory charges are extra. Visit dealership for full T&Cs. | *As certified by Kantar IMRB for an OEM platform for end-to-end usage as on November 28, 2025. | *543 km range: Certified range; actual results may vary by driving conditions and usage. | *ADAS features are for driver assistance only. Driver is responsible for safe and attentive driving. | *Always wear your seatbelt. | *Mentioned ownership plan is for e VITARA Delta variant. Calculation is done assuming vehicle is running 60 km per day, excluding charging cost. Valid on retail sales for the e VITARA till 31st March '26, capped at 1 000 units of electricity (kWh) per customer or 1 Year from the purchase of the vehicle, whichever is earlier. Assured buyback plan is available on payment basis with the option of 3 years/45 000 km or 4 years/60 000 km ownership plans (whichever is earlier). The program is offered through an Insurance company. e VITARA comes with standard warranty of 3 years/1 00 000 km with an option of extending the same on payment basis to 5 years/1 40 000 km and service activated coverage for 6th to 8th year for EV related components.